ದುಡಿವ ಜನರ ಪ್ರಾಣಮಿತ್ರ


ಸಂಪುಟ 2 ಸಂಚಿಕೆ 20

ಮೇ 18, 2008

# ಜನಶಕ್ತಿ

ಕನ್ನಡ ವಾರಪತ್ರಿಕೆ

ರೂ. 5/-







## ಉಡುಪಿ : ಕಾದಿದೆ ಬಿಜೆಪಿಗೆ ಅಘಾತ

## ಶಾಂತಿ ಸಾಮರಸ್ಯದ ಕರ್ನಾಟಕವನ್ನು ಉಳಿಸೋಣ



## ಮಾಯಾವತಿ ರಾಜ್ಯದಲ್ಲೂ ದಲಿತರಿಗಿಲ್ಲ ರಕ್ಷಣೆ

ಪೋಸ್ಟರ್

- ರಾಜ್ಯ ರಾಜಕೀಯ ದೊಂಬರಾಟಕ್ಕೆ ಯಾರು ಕಾರಣ ?
- ರೈತರ ಸಂಕಟಗಳಿಗೆ ಯಾರು ಹೊಣೆ ?

## ಬುಷ್ ಉವಾಚ : ನಮ್ಮ ಸಮೃದ್ಧಿಗಾಗಿ ನೀವು ಉಪವಾಸ ಮಾಡಿ



## ಬೆಂಗಳೂರು ಪತ್ರಿಕಾಗೋಷ್ಠಿಯಲ್ಲಿ ಬೃಂದಾ

# ಚುನಾವಣಾ ಆಯೋಗದ ಆದೇಶ ಸಂವಿಧಾನ ಬಾಹಿರ

"ಅಂಗನವಾಡಿ ಕಾರ್ಯಕರ್ತೆಯರು ರಾಜಕೀಯ ಚಟುವಟಿಕೆ, ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತಿಲ್ಲ ಎನ್ನುವ ಮೂಲಕ ಚುನಾವಣಾ ಆಯೋಗ ದ್ವಿಮುಖ ನೀತಿ ಅನುಸರಿಸುತ್ತಾರೆ. ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರು ಎಂದು ಪರಿಗಣಿಸಿಲ್ಲ. ಅವರೂ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿದೆ. ಹೀಗಿರುವಾಗ ಆಯೋಗ ಹೊರಡಿಸಿರುವ ಆದೇಶ ನ್ಯಾಯ ಸಮ್ಮತವಲ್ಲ. ಇಂತಹ ಸಂವಿಧಾನ ಬಾಹಿರ ಆದೇಶವನ್ನು ಚುನಾವಣಾ ಆಯೋಗ ಹಿಂದೆ ಪಡೆಯಬೇಕು".

**ಬೆಲೆ ಏರಿಕೆಗೆ ಬಿಜೆಪಿ ಮೂಲ ಕಾರಣ:**

ಬೆಲೆ ಏರಿಕೆ ವಿರುದ್ಧ ಮಾತನಾಡುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರವೇ ಇದಕ್ಕೆ ಮೂಲ ಕಾರಣ. ಜೀವನಾವಶ್ಯಕ ಕೃಷಿ ಉತ್ಪನ್ನಗಳ ಮುಂಗಡ ಖರೀದಿಗೆ ಅವಕಾಶ ಹಾಗೂ ಅಗತ್ಯವಸ್ತು ಕಾಯ್ದೆಯನ್ನು ಸಡಿಲಿಸಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಭಾರತದ ಜನತೆಯನ್ನು ಸಂಕಷ್ಟಕ್ಕೆ ತಳ್ಳಿದೆ.

**ಇದು ರಾಜಕೀಯ ಸೆನ್ಸಾರ್‌ಶಿಪ್**

ಬಿಜೆಪಿ ವಿರುದ್ಧ ಮತ ಚಲಾಯಿಸಿ ಎನ್ನುವ ಕರಪತ್ರವನ್ನು ಹಂಚಬಾರದು ಎಂದು ಜಿಲ್ಲಾ ಚುನಾವಣಾಧಿಕಾರಿಯಾದ ಮೈಸೂರು ಹಾಗೂ ಕೊಡಗು ಜಿಲ್ಲಾಧಿಕಾರಿ ಸೂಚನೆ ನೀಡಿದ್ದಾರೆ ಇದರಿಂದ ರಾಜಕೀಯ ಸೆನ್ಸಾರ್‌ಶಿಪ್ ಜಾರಿಯಾದಂತಾಗಿದೆ. ನ್ಯಾಯ ಸಮ್ಮತ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾಧಿಕಾರಿಗಳಿಗೆ ಸೂಚನೆ ನೀಡುವಂತೆ ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿದ್ದೇವೆ.

**ಬೃಂದಾ ಕಾರಟ್**
**ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರು**


★

"ಬೆಲೆ ಏರಿಕೆಗೆ ಭಾರತದ ಮಧ್ಯಮ ವರ್ಗವೇ ಕಾರಣ ಎಂದು ಅಮೇರಿಕಾದ ಅಧ್ಯಕ್ಷ ಜಾರ್ಜ್ ಬುಷ್ ಹೇಳಿರುವುದು ಖಂಡನಾರ್ಹ. ಈ ಸ್ಥಿತಿಗೆ ಅಮೇರಿಕಾವೇ ಕಾರಣ. ಜೈವಿಕ ಇಂಧನ ತಯಾರಿಸುವ ಭರಾಟೆಯಲ್ಲಿ ಧಾನ್ಯದ ಸಂಗ್ರಹವನ್ನು ಅಮೇರಿಕಾ ಖಾಲಿ ಮಾಡುತ್ತಿರುವುದರಿಂದ ಹೀಗಾಗಿದೆ"

**ವಿ.ಜೆ.ಕೆ. ನಾಯರ್,**
**ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ**

## ಇಎಂಎಸ್ ಭವನ ನಿಧಿ

**ಎರಡನೇ ಹಂತದ ಸಂಗ್ರಹ 10.5.2008**



| ಹಿಂದಿನ ಸಂಚಿಕೆಯಿಂದ ರೂ. | 22,54,499.00 |
|---|---|
| ಮಮ್ತಾಜ್ ಬೇಗಂ, ಚಾಲಹಳ್ಳಿ, ದೇವದುರ್ಗ ತಾಲ್ಲೂಕು | 100.00 |
| ಮಮತಾ ಹೊನ್ನಾವರ, ಕೋಲಾರ | 500.00 |
| ಸಿದ್ಧಾರ್ಥ ಎಂಟರ್‌ಪ್ರೈಸಸ್, ಬೆಂಗಳೂರು | 6,000.00 |
| ಇಕ್ರಿ, ಬೆಂಗಳೂರು ಚಾಪ್ಟರ್, ಬೆಂಗಳೂರು | 25,000.00 |
| ಕೆ.ಎಲ್.ಭಟ್, ಕಾರ್ಯದರ್ಶಿ, ದಾವಣಗೆರೆ ಪ್ರದೇಶ ಸಮಿತಿ | 5,000.00 |
| ಸುಂದರ ಬಿ.ಶೆಟ್ಟಿ, ಪಾಲಡ್ಕ ಪೋಸ್ಟ್, ಮಂಗಳೂರು ತಾಲ್ಲೂಕು | 5,000.00 |
| ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಮೂಲಕ | 1,250.00 |
| ಧಾರವಾಡ ಜಿಲ್ಲಾ ಸಮಿತಿ ಮೂಲಕ | |
| ವಿಜಯ ಎನ್.ಕಲ್ಯಾಣಶೆಟ್ಟಿ, ಬೆಳಗಾವಿ | 500.00 |
| ಎಸ್.ಸುರೇಶ್‌ಬಾಬು, ಚಿಕ್ಕೋಡಿ | 500.00 |
| ಕಾಂ: ಬಸವರಾಜ ಅಥಡಕರ, ರಾಣೆಬೆನ್ನೂರು | 500.00 |
| ಕೈಮಗ್ಗ ನೇಕಾರರ ಸಮನ್ವಯ ಸಮಿತಿ ರಾಣೆಬೆನ್ನೂರ ಶಾಖೆಯ ಮೂಲಕ ಸಂಗ್ರಹ | 2,500.00 |
| ವಿಮಾ ಸಂಗಾತಿಗಳು, ಬೆಳಗಾವಿ ಮೂಲಕ | 1,000.00 |
| ಒಟ್ಟು | ರೂ. 23,02,349.00 |

## ಚುಚ್ಚುಮದ್ದು

### ತತ್ವ-ಸಿದ್ಧಾಂತ

■ "ತತ್ವ ಸಿದ್ಧಾಂತಗಳ ಮೇಲೆ ಚುನಾವಣೆಗಳನ್ನು ಎದುರಿಸಲು ಹೊರಟಿರುವ ಬಿಜೆಪಿಯನ್ನು ರಾಜ್ಯದಾದ್ಯಂತ ಎಲ್ಲ ದೇವಾಲಯಗಳ ಅರ್ಚಕರು, ಆಗಮಿಕರು, ಮತ್ತು ನೌಕರರು ಬೆಂಬಲಿಸಬೇಕು"

**- ಕೊಳದ ಮಠದ ಶಾಂತವೀರಸ್ವಾಮೀಜಿ**

→ ದೇವಾಲಯಗಳ ದೇವರಿಗೂ ಓಟು ಇದಿದ್ದರೆ ಚೆನ್ನಾಗಿತ್ತು. ದೇವರಿಗೂ ಇದೇ ಥರ ಕರೆ ಕೊಡಬಹುದಿತ್ತು.

★

### 'ಲಕ್ಷ್ಮಿ ಕಟಾಕ್ಷ'

■ "ಸಮಗ್ರ ಅಭಿವೃದ್ಧಿ ಎಂಬುದು ಹಾಗೆಯೇ ಸುಮ್ಮನೇ ಆಗುವುದಿಲ್ಲ. ಅದಕ್ಕೆ ಲಕ್ಷ್ಮಿ ಕಟಾಕ್ಷವೂ ಬೇಕು. ಆ 'ಲಕ್ಷ್ಮಿ' ಸೈಕಲ್ ಮೇಲೆ ಬರ್ತಾಳಾ... ಅಥವಾ ಆನೆ ಮೇಲೇನಾದ್ರೂ ಬರ್ತಾಳೇನ್ರೀ? ಆ ಲಕ್ಷ್ಮಿ ಏನಾದ್ರೂ ಬರಬೇಕಾದರೆ ಕಮಲ ಬೇಕು"

**- ನರೇಂದ್ರ ಮೋದಿ**
*ಗುಜರಾತ್ ಮುಖ್ಯಮಂತ್ರಿ*

→ ಲಕ್ಷ್ಮಿ ತ್ರಿಶೂಲ ಏರಿಕೊಂಡು ಬರದಿದ್ದರೆ ಸಾಕು.

★

### ತೈಲ ಬೆಲೆ ಏರಿಕೆಗೂ ಅವರೇ ಕಾರಣ

■ "ಭಾರತ ಅಥವಾ ಚೀನಾದಂತಹ ಅನೇಕ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಬೇಡಿಕೆ ಅತ್ಯಂತ ಹೆಚ್ಚಿದೆ. ಇದು ಸಹಜವಾಗಿಯೇ ಬೆಲೆಯ ಮೇಲೆ ಪರಿಣಾಮ ಬೀರುತ್ತದೆ."

**- ಜಾರ್ಜ್ ಬುಷ್**

→ ಅಫಘಾನಿಸ್ತಾನ ಇರಾಕ್ ಮೇಲೆ ಮಾಡಿದ ಅನಾಗರೀಕ ಯುದ್ಧ ಎಲ್ಲಾ ಮರೇತೆ ಬಿಟ್ರಲ್ಲ ಬುಷ್ ಸಾಹೇಬರೇ? 35 ಕೋಟಿ ಜನರಿರೋ ಅಮೇರಿಕಾದಲ್ಲಿ ಕಾರುಗಳು ಎಷ್ಟು ಇದಾವೇ?

★

### ಆಹಾ! ಏನು ವಿವೇಕ

■ ಮಧ್ಯ ಪ್ರಾಚ್ಯದಲ್ಲಿ ಒಂದು ಹೊಸ ಯುದ್ಧಕ್ಕೆ ಕಾಲ ಇನ್ನೂ ಪಕ್ವಗೊಂಡಿಲ್ಲ. ಆದ್ದರಿಂದ ಸದ್ಯದ ಮಟ್ಟಿಗೆ ಇರಾನ್ ಮೇಲೆ ಯುದ್ಧಕ್ಕೆ ಕೈ ಹಾಕದಿರುವುದೇ ಲೇಸು

**- ಮುಲೆನ್**
*ಅಮೇರಿಕಾದ ಸೇನೆಯ ಜಂಟಿ ಸಿಬ್ಬಂದಿ ಮುಖ್ಯಸ್ಥರ ಅಧ್ಯಕ್ಷ*

→ ಆಹಾ! ಏನು ವಿವೇಕವಪ್ಪಾ ನಿಮ್ಮದು.

★

### ಮೂಗಿಗೆ ತುಪ್ಪ

■ 'ಬಿಜೆಪಿ ಅಧಿಕಾರಕ್ಕೆ ಬಂದರೆ ಮುಸ್ಲಿಂ ಮುಖಂಡರೊಬ್ಬರಿಗೆ ಸಂಪುಟ ದರ್ಜೆಯ ಸಚಿವ ಸ್ಥಾನ ನೀಡಲಾಗುವುದು'

**- ಬಿ.ಎಸ್.ಯಡಿಯೂರಪ್ಪ,** *ಬಿಜೆಪಿ ಮುಖಂಡರು*

→ ಮೂಗಿಗೆ ತುಪ್ಪ ಸವರುವುದು ಅಂದ್ರೆ ಇದೆ ಅಲ್ವಾ?

★

### ವಿರೋಧ ಪಕ್ಷದಲ್ಲಿ...

■ ಬಿಜೆಪಿಗೆ ಬಹುಮತ ಬರದಿದ್ದರೆ ವಿರೋಧ ಪಕ್ಷದ ಸ್ಥಾನದಲ್ಲಿ ಕೂರುತ್ತೇವೆ.

**- ಎಲ್.ಕೆ.ಅಡ್ವಾಣಿ,** *ಬಿಜೆಪಿ ಮುಖಂಡ*

→ ಬೇರೆ ಏನಾದ್ರೂ ಮಾಡೋಕೆ ಹೋದರೆ ಜನ ಉಗೀತಾರೆ. ಅಲ್ವಾ?

★

### ಸಾಧ್ಯವೇ?

■ ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಗುಜರಾತ್ ಮಾದರಿ ಅಭಿವೃದ್ಧಿ ಮಾಡಲು ಸಾಧ್ಯವೇ?

**- ನರೇಂದ್ರ ಮೋದಿ**
*ಗುಜರಾತ್ ಮುಖ್ಯಮಂತ್ರಿ*

→ ಸಾಧ್ಯ ಇಲ್ಲ ಅನ್ನುತ್ತೆ ಬಿಡಿ.

## ಇದ್ದದ್ದು ಇದ್ಹಾಂಗ....

### ಹಾಡಿದರೆ ಸಾಲದು

"ಬಸವಣ್ಣನ ವಚನಗಳನ್ನು ಹಾಡಿ ಹೊಗಳಿದರೆ ಸಾಲದು. ಅದರಲ್ಲಿನ ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮೂಢನಂಬಿಕೆ, ಗೊಡ್ಡು ಸಂಪ್ರದಾಯ ಜಾತೀಯತೆಯನ್ನು ತೊಡೆದು ಹಾಕಲು ಬಸವಣ್ಣ ವಚನಗಳನ್ನು ರಚಿಸಿದರು. ಆದರೆ ಬಹುತೇಕ ಮಂದಿ ವಚನಗಳನ್ನು ಹಾಡಿ ಶ್ಲಾಘಿಸುತ್ತಾರೆಯೇ ಹೊರತು ಅವುಗಳ ಮೂಲ ಅರ್ಥವನ್ನು ತಿಳಿದುಕೊಳ್ಳಲು ಇಚ್ಛಿಸುತ್ತಿಲ್ಲ.
ಕಾವ್ಯ, ಪುರಾಣ, ಪವಾಡ ಎಲ್ಲವನ್ನೂ ಪಕ್ಕಕ್ಕಿಟ್ಟು ಬಸವಣ್ಣನನ್ನು ಮನುಷ್ಯನಾಗಿ ನೋಡಬೇಕು"

**ಡಾ: ಜಿ.ಎಸ್.ಶಿವರುದ್ರಪ್ಪ, ರಾಷ್ಟ್ರಕವಿ**

★

### ಸಮೀಕ್ಷೆಯ ಸಾರ

ಮೊದಲ ಹಂತದ ಚುನಾವಣೆ ನಡೆಯುವ 89 ಕ್ಷೇತ್ರಗಳ ಸುಮಾರು ನಾಲ್ಕು ಲಕ್ಷ ವಿವಿಧ ಸಮುದಾಯದ ಜನತೆಯನ್ನು ಸಮೀಕ್ಷೆಗೊಳಗಾಗಿದ್ದು, ಕಾಂಗ್ರೆಸ್ 46, ಬಿಜೆಪಿ 25, ಜೆಡಿ(ಎಸ್) 18 ಸ್ಥಾನ ಸಿಗಲಿದೆ.

**ಸಿ ಪೋರ್ - ಸುವರ್ಣ ಕನ್ನಡ ವಾಹಿನಿ, ಸಮೀಕ್ಷೆಯ ಸಾರ**

ಸಂಪಾದಕೀಯ

## ಮಹಿಳಾ ಮೀಸಲಾತಿ : ಒಂದು ಹೆಜ್ಜೆ ಮುನ್ನಡೆ


ಶಾಸನ ಸಭೆಗಳಲ್ಲಿ ಶೇ.33 ರಷ್ಟು ಮಹಿಳಾ ಪ್ರಾತಿನಿಧ್ಯ ನೀಡುವ ಬಹುವಿಳಂಬಿತ ಮಹಿಳಾ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿದ್ದು ಒಂದು ಸ್ವಾಗತಾರ್ಹವಾದ ಬೆಳವಣಿಗೆಯಾಗಿದೆ. ಇದಕ್ಕೆ ಅಲ್ಲೂ ವಿರೋಧ ವ್ಯಕ್ತವಾದರೂ ರಾಜ್ಯ ಸಭೆಯಲ್ಲಿ ಮಂಡನೆಯಾದ ಕಾರಣ ಮಸೂದೆ ಸಹಜ ಸಾವು ಕಾಣಲು ಸಾಧ್ಯವಿಲ್ಲ. ಅಲ್ಲಿ ಅದರ ಬಗ್ಗೆ ಚರ್ಚೆ ನಿರ್ಣಯ ಕೈಗೊಳ್ಳಲು ಇದು ಸಹಕಾರಿ. ಸರ್ಕಾರಕ್ಕೆ ಇಂತಹ ಮಂಡನೆ ಅನಿವಾರ್ಯವಾದದ್ದು ವಿವಿಧ ಪ್ರಗತಿಪರ, ಎಡಶಕ್ತಿಗಳ ಮಹಿಳಾ ಸಂಘಟನೆಗಳ ಪ್ರಬಲ ಒತ್ತಡದಿಂದಲೇ.

ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಶೇ. 33 ಪ್ರಾತಿನಿಧ್ಯ ಮೀಸಲಾತಿ ಸಿಗಲೇಬೇಕೆಂಬ ಹೋರಾಟ ದಶಕಗಳದ್ದು. ಈ ಮಸೂದೆ ರೂಪಿಸಿ ಲೋಕಸಭೆಯಲ್ಲಿ ಮಂಡಿಸಲು ಪ್ರಯತ್ನಗಳು ಆರಂಭಗೊಂಡಿದ್ದೇ 12 ವರ್ಷ ಹಿಂದಿನಿಂದ. ಒಂದಿಲ್ಲೊಂದು ಕಾರಣಗಳನ್ನು ನೆಪವಾಗಿಟ್ಟು, ಚರ್ಚೆಗೂ ಅವಕಾಶವಿಲ್ಲದಂತೆ ಕುತಂತ್ರ ಅನುಸರಿಸುತ್ತಾ ಬರಲಾಗಿದೆ. ಈ ಮಸೂದೆಗೆ ವಿರೋಧ ವ್ಯಕ್ತವಾದದ್ದು ಆರಂಭದಲ್ಲಿ ಬಿಜೆಪಿಯಿಂದಲೇ, ಅದೂ 'ಮಹಿಳಾ ಸನ್ಯಾಸಿ' ಉಮಾಭಾರತಿಯಿಂದಲೇ. ನಂತರದಲ್ಲಿ ಐ.ಕೆ.ಗುಜ್ರಾಲ್, ವಾಜಪೇಯಿಯವರು ಪ್ರಧಾನಿಗಳಾಗಿರುವಾಗಲೂ ಇಂತಹದ್ದೇ ವಿರೋಧ ಕಂಡಿದ್ದಿದೆ.

ಈ ವಿರೋಧಕ್ಕೆ ಕೆಲವರು ನೀಡುತ್ತಿರುವ ಕಾರಣವೂ ಅರ್ಥಹೀನ. ಈ ಮಹಿಳಾ ಮೀಸಲು ಮಸೂದೆಯೊಳಗೆ ಇತರ ಹಿಂದುಳಿದ ಜಾತಿಗಳ (ಓ.ಬಿ.ಸಿ) ಮಹಿಳೆಯರಿಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ನೀಡಿದಂತೆ ಮೀಸಲಾತಿ ನೀಡಬೇಕೆಂದು ಅಂತಹವರ ತಕರಾರು. ಸಂವಿಧಾನದ ಒಳಗೆ ಇತರ ಹಿಂದುಳಿದ ವರ್ಗದವರಿಗೆ ಮೀಸಲಾತಿ ಕಲ್ಪಿಸದೇ ಕೇವಲ ಮಹಿಳಾ ಮೀಸಲಾತಿಗೆ ಮಾತ್ರ ಅನ್ವಯವಾಗುವಂತೆ ತಿದ್ದುಪಡಿ ತರಲು ಸಾಧ್ಯವಿಲ್ಲವೆಂಬುದು ವಿರೋಧಿಸುತ್ತಿರುವವರಿಗೆ ತಿಳಿದಿಲ್ಲವೇ? ಆದರೆ ವಾಸ್ತವದಲ್ಲಿ ವಿಧಾನಸಭೆ ಅಥವಾ ಲೋಕಸಭಾ ಸದಸ್ಯರಲ್ಲಿ ಬಹಳಷ್ಟು ಸ್ಥಾನಗಳು ಓಬಿಸಿಯ ಅಭ್ಯರ್ಥಿಗಳೇ ಇದ್ದಾರೆ ಎಂಬುದು ವಾಸ್ತವ. ಹಾಗಿರುವಾಗ ಇಂತಹ ಕಡೆಗಳಲ್ಲಿ ಯಾಕೆ ಮಹಿಳಾ ಅಭ್ಯರ್ಥಿಗಳಿಗೆ ಬಿಟ್ಟು ಕೊಡಬಾರದು? ಎಂಬ ಪ್ರಶ್ನೆಗೆ ವಿರೋಧಿಸುವವರು' ಕಿವುಡರಾಗುತ್ತಾರೆ.


ಈಗಲೂ ರಾಜ್ಯಸಭೆಯಲ್ಲಿ ವಿರೋಧಿಸಿ, ಮಸೂದೆಯ ಪ್ರತಿಯನ್ನು ಹರಿದುಹಾಕಿರುವ ಸಮಾಜವಾದಿ ಪಕ್ಷ, ಬಿ.ಎಸ್.ಪಿ. ಲಲ್ಲೂರವರ ಆರ್‌ಜೆಡಿ ಪಕ್ಷಗಳ ವರ್ತನೆ ಖಂಡನೀಯ. ಮಾತ್ರವಲ್ಲ ಮಹಿಳೆಯರ ಪರವೆಂದು ನಟಿಸುತ್ತಾ ಮಹಿಳಾ ವಿರೋಧಿಗಳಾಗಿರುವುದನ್ನು ಎತ್ತಿ ತೋರಿಸುತ್ತದೆ. ಹಾಗೆಯೇ ಈ ಮಸೂದೆ ಅಂಗೀಕಾರವಾದರೆ ಅಮೇರಿಕಾ ಅಣು ಒಪ್ಪಂದದ ಪರಿಣಾಮಗಳಿಂತಲೂ ಘೋರವಾಗಿರುವುದು ಎಂಬ ಆರ್.ಜೆ.ಡಿ. ಪಕ್ಷದ ಹೇಳಿಕೆ ಖಂಡನಾರ್ಹ. ಯುಪಿಎ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಮಹಿಳಾ ಮೀಸಲಾತಿ ಪ್ರಶ್ನೆಯೂ ಒಂದಾಗಿದೆ.

ಇಂತಹ ವಿರೋಧಗಳ ಹಿಂದೆ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ನಿರಾಕರಿಸುವ ಹುನ್ನಾರವಿದೆ. ಇದನ್ನು ಎಲ್ಲಾ ಪ್ರಜಾಪ್ರಭುತ್ವ ಪ್ರೇಮಿಗಳು, ಸಮಾನತೆಯ ಪರ ಶಕ್ತಿಗಳು ಹಿಮ್ಮೆಟ್ಟಿಸಿ ಮಸೂದೆ ಅಂಗೀಕಾರವಾಗುವಂತಾಗಬೇಕು.



ಕೃಪೆ: ದಿ ಹಿಂದೂ

# ಸಮೀಕ್ಷೆಗಳೆಷ್ಟು ವಿಶ್ವಾಸಾರ್ಹ



ಎಸ್.ವೈ.ಗುರುಶಾಂತ್

ಮತದಾರರಿನ್ನೂ ಮತಗಟ್ಟೆಗೆ ಹೋಗಿಲ್ಲ, ಮತ ಚಲಾಯಿಸಿಲ್ಲ. ಆದರೆ ವಿವಿಧ ಪಕ್ಷಗಳ ಸೋಲು ಗೆಲುವನ್ನು ಅಳೆಯಲಾಗುತ್ತಿದೆ. ಗೆಲ್ಲುವ ಸ್ಥಾನಗಳನ್ನು, ಪಡೆಯುವ ಮತದಾನದ ಶೇಕಡಾವಾರು ಪ್ರಮಾಣವನ್ನು ಪ್ರಕಟಿಸಲಾಗಿದೆ. ಆಯಾ ಪತ್ರಿಕೆ ಅಥವಾ ಟಿ.ವಿ. ಮಾಧ್ಯಮಗಳು ತಮ್ಮ ಒಲವು-ನಿಲುವಿನ ಅನುಸಾರವಾಗಿ ಒಂದೊಂದು ಸಮೀಕ್ಷೆಗಳನ್ನು ಪ್ರಕಟಿಸುತ್ತಿವೆ. ಒಂದೆಡೆ ಮರದ ಕೆಳಗೋ, ಅಲ್ಲಲ್ಲ ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತ 'ಮಹಾ ಜೋತಿಷಿ' ಹಾಗೂ ಜೀವ-ಜಗತ್ತಿನ ಮೇಲೆ ಏನೊಂದು ನಿಯಂತ್ರಣವಿಲ್ಲದ ಗ್ರಹಗಳು, ರಾಹುಕೇತುಗಳನ್ನು ಅಡ್ಡ ತಂದು ಭವಿಷ್ಯ ಹೇಳುತ್ತಿರುವಂತೆ, ಆಧುನಿಕ ಸಾಕ್ಷಾತ್ ಸಮೀಕ್ಷೆ ಪಂಡಿತರೂ ಅವರದ್ದೇ ಭವಿಷ್ಯ ಹೇಳುತ್ತಾ ಜನರನ್ನು ನಂಬಬೇಕು ಎಂದು ಒತ್ತಾಯಿಸುತ್ತಾರೆ. ಇಂತಹ ಸಮೀಕ್ಷೆಗಳ ಇತಿಹಾಸ ಅವಲೋಕಿಸಿದರೆ ಅಲ್ಲಿಯೂ ಗೊಂದಲಗಳೇ. ಹತ್ತಿರದ ಫಲಿತಾಂಶ ಪ್ರಕಟವಾಯಿತೋ ತಮ್ಮ ಭವಿಷ್ಯವಾಣಿಯ ಬಗ್ಗೆ ಬೀಗುತ್ತವೆ. ಸುಳ್ಳಾದರೆ ವಿಮರ್ಶಿಸಿಕೊಂಡಿದ್ದು ತೀರಾ ಕಡಿಮೆ ಅಥವಾ ಇಲ್ಲವೆನ್ನಬಹುದು. ಇಂತಹ ಸಮೀಕ್ಷೆಗಳನ್ನೇ ಚುನಾವಣಾ ಆಯೋಗ ಹಿಂದೆ ತರಾಟೆಗೆ ತೆಗೆದುಕೊಂಡಿತ್ತು. ಯಾರು ಜನರ ಮೇಲೆ ವಿಶ್ವಾಸವಿಡುವುದಿಲ್ಲವೋ, ತಮ್ಮ ಕ್ರಿಯೆಯ ಮೂಲಕ ಜನರ ವಿಶ್ವಾಸ ಗಳಿಸುವುದಿಲ್ಲವೋ, ಜನರ ತೀರ್ಪಿಗೆ ತಲೆ ಬಾಗಿ, ತಿದ್ದಿ ನಡೆದ ಹಾದಿ ಹಿಡಿಯುವುದಿಲ್ಲವೋ, ಅಂತಹವರಿಗೆ 'ಕವಡೆ' ಶಾಸ್ತ್ರಗಳೇ ಅಂತಿಮ ಎನ್ನಿಸಬಹುದು.

ಇಂತಹ ಸಮೀಕ್ಷೆಗಳು ವಾಸ್ತವಕ್ಕೆ ಹತ್ತಿರವಾದ ಸಂಗತಿಗಳನ್ನು ಹೇಳಿಯೇ ಇಲ್ಲವೆಂದೇನಲ್ಲ. ಬಹುತೇಕವಾಗಿ ಮತದಾನವಾದ ಬಳಿಕ ಹೇಳಿದ ಕೆಲ ಸಮೀಕ್ಷೆಗಳು ಸರಿಸುಮಾರು ಹತ್ತಿರದ ಫಲಿತಾಂಶವನ್ನು ದೃಢಪಡಿಸಿವೆ.

ಕರ್ನಾಟಕದ ವಿಧಾನಸಭಾ ಚುನಾವಣೆಯ ಬಗ್ಗೆ ಹಲವು ಸಮೀಕ್ಷೆಗಳು ಪ್ರಕಟವಾಗಿವೆ, ಆಗುತ್ತಲಿವೆ. ಸಿ.ಎನ್.ಎನ್.-ಐ.ಬಿ.ಎನ್. ಸಮೀಕ್ಷೆಯಂತೆ ಒಟ್ಟಾರೆ ರಾಜ್ಯದಲ್ಲಿ ಕಾಂಗ್ರೆಸ್ ಮುಂಚೂಣಿಯಲ್ಲಿರುವುದಾಗಿ ಹೇಳಿತು. ಇದಾದ ಬಳಿಕ ಡಿ.ಆರ್.ಎಸ್ ಮತ್ತು ನ್ಯೂಸ್ ಎಕ್ಸ್ ಎಂಬ ಸಂಸ್ಥೆ ತನ್ನದೊಂದು ಸಮೀಕ್ಷೆ ಪ್ರಕಟಿಸಿ ಮೊದಲ ಹಂತದಲ್ಲಿ ಬಿಜೆಪಿಗೆ 40, ಕಾಂಗ್ರೆಸ್ 29, ಜೆಡಿ(ಎಸ್)12 ಎಂದು ಹೇಳಿ, ಬಿಜೆಪಿಯ ಮುನ್ನಡೆಯನ್ನು ತೋರಿಸಿದೆ. ಈ ನಡುವೆಯೇ ಸಿ-ಫೋರ್ ಸಂಸ್ಥೆಯೆಂಬುದು ಮೊದಲ ಹಂತದಲ್ಲಿ ಕಾಂಗ್ರೆಸ್ 46, ಕಮಲ 25, ಜೆಡಿ(ಎಸ್)18 ಎಂದಿತು. ಅದರ ಮಗ್ಗುಲಲ್ಲೇ 'ಕಾಪ್ಸ್' ಎಂಬುದು ಕಾಂಗ್ರೆಸ್ 37, ಬಿಜೆಪಿ 35, ಜೆಡಿ(ಎಸ್) 16 ಎಂದು ಸಮದೂಗಿಸಲು ನೋಡಿತು. ಮತದಾನವಾದ ಬಳಿಕ ಇನ್ನು ಎಂತಹ ಸಮೀಕ್ಷೆಗಳು ಬರುತ್ತಿವೆಯೋ ಗೊತ್ತಿಲ್ಲ.

ನಮ್ಮ ಪ್ರಶ್ನೆ ಇಂತಹ ಸಮೀಕ್ಷೆಗಳನ್ನು ನಂಬಬೇಕೇ? ಇವುಗಳ ಅಘೋಷಿತ ಉದ್ದೇಶಗಳಾದರೂ ಏನು? ಇಂತಹ ಬಹುತೇಕ ಸಮೀಕ್ಷೆಗಳು ವಿವಿಧ ಪ್ರದೇಶಗಳ, ಜಾತಿಗಳ, ವರ್ಗಗಳ ಆಯ್ದ ಅಥವಾ ಸೀಮಿತ ಜನರನ್ನು ಆಯ್ಕೆ ಮಾಡುತ್ತವೆ. ಒಂದು ಮಾದರಿ ಸ್ಯಾಂಪಲ್ ಆಗಿ ಪರಿಗಣಿಸುತ್ತವೆ. ಇದನ್ನು ಒಟ್ಟು ಜನರ ಭಾವನೆ, ಅಭಿಮತ ಎಂದು ಪರಿಗಣಿಸುವುದು ಕಷ್ಟ. ಇಂತಹ ಸಮೀಕ್ಷೆಗಳ ಹಿಂದೆ ಗುಪ್ತ ಅಜೆಂಡಾಗಳೇ ಇರುವುದನ್ನು ತಳ್ಳಿ ಹಾಕಲಾಗದು. ಹಿಂದಿನ ಒಂದೆರಡು ಸಮೀಕ್ಷೆಗಳನ್ನೇ ನೋಡಿ. ಹಿಂದೆ ಭಾರತ ಹೊಳೆಯುತ್ತಿದೆ, ವಾಜಪೇಯಿಯೇ ಪುನರ್ ಅಧಿಕಾರಕ್ಕೆ ಬರಲಿದ್ದಾರೆಂದರು. ಆದದ್ದೇನು? ವಾಜಪೇಯಿ ವಿಶ್ರಾಂತಿ ಕೋಣೆಗೆ ಸರಿದರು. ಅದೇ ಹೊತ್ತಿನಲ್ಲಿ ಆಂಧ್ರದಲ್ಲಿ ಪುನಃ ಸ್ವರ್ಣಾಂಧ್ರದ ತೆಲುಗುದೇಶಂ ನಾಯ್ಡು ಗೆಲ್ಲುವರೆಂದರು. ಅವರು ಕುರ್ಚಿಯಿಂದ ಇಳಿದರು. ಇತ್ತೀಚಿನ ಉತ್ತರ ಪ್ರದೇಶ, ಗುಜರಾತ್ ಸಂಬಂಧಿಸಿದ ಕೆಲವು ಸಮೀಕ್ಷೆಗಳು ತಿರುಗು ಮುರುಗಾದವು. ಇನ್ನು ಪಶ್ಚಿಮ ಬಂಗಾಳ, ಕೇರಳದ ಬಗ್ಗೆಯೂ ಬರುವ ಬಹಳಷ್ಟು ಸಮೀಕ್ಷೆಗಳು ಪೂರ್ವಾಗ್ರಹಗಳಿಂದ ಮುಕ್ತವಾಗಿರುವುದು ಕಡಿಮೆ. ಹಲವಾರು ಹೊಸ ಬೆಳವಣಿಗೆಗಳು ಫಲಿತಾಂಶವನ್ನು ಪ್ರಭಾವಿಸುತ್ತವೆ.

ಈಗಲೂ ಕರ್ನಾಟಕದಲ್ಲಿ ಅಂತಹ ಒಂದು ಪೂರ್ವ ನಿರ್ಧಾರಿತ ನಿಲುವಿನಿಂದಲೇ ಒಂದರ ಮೇಲೆ ಒಂದು ಸ್ಪರ್ಧೆ ನಡೆಸುವಂತೆ ಸಮೀಕ್ಷಾ ವರದಿಗಳು ಪ್ರಕಟವಾಗುತ್ತಿವೆ. ಪತ್ರಿಕೆ, ಟಿ.ವಿ. ಮಾಧ್ಯಮಗಳು ಇಂತಹ ಒಲವನ್ನೇ ಧ್ವನಿಸತೊಡಗಿವೆ. ವಿಜಯಕರ್ನಾಟಕ, ಸಂಯುಕ್ತ ಕರ್ನಾಟಕದಂತಹ ಪತ್ರಿಕೆಗಳು, ಆಗಾಗ ಪ್ರಜಾವಾಣಿ ಪತ್ರಿಕೆಯೂ ಬಿಜೆಪಿ ಪರ ವಕಾಲತ್ತು ವಹಿಸಿ, ಅಲೆ ಸೃಷ್ಟಿಸಲು ಯತ್ನಿಸುತ್ತಲೇ ಇವೆ.

ಇಂತಹ ಸಮೀಕ್ಷೆಗಳು ಮತದಾರರ ಮನವನ್ನೇ ಪರಿವರ್ತಿಸುವ ಶಕ್ತಿ ಹೊಂದಿವೆ ಎನ್ನಲು ಸಾಧ್ಯವಿಲ್ಲ. ಆದರೆ ಕರ್ನಾಟಕದಲ್ಲಿ ಮುಂದಿನ ಸರ್ಕಾರ ಹೇಗಿರಬೇಕು, ಹೇಗಿರುತ್ತೆ ಎನ್ನುವಲ್ಲಿ ಯಾರಿಗೆ ಹಾಕಬೇಕು ಎಂಬಲ್ಲಿ ಗೊಂದಲವಿರುವ ಮಧ್ಯಮವರ್ಗದಂತಹ ಒಂದು ವಿಭಾಗದ ಅಭಿಪ್ರಾಯವನ್ನು ಇದು ಪ್ರಭಾವಿಸಬಹುದು. ರಾಜ್ಯದಲ್ಲಿ ಯಾವ ಪಕ್ಷಕ್ಕೂ ಬಹುಮತ ಸಿಗದೇ ಮತ್ತೆ ಸಮ್ಮಿಶ್ರ ಸರ್ಕಾರವೇ ಅನಿವಾರ್ಯ ಎಂಬಂತಹ ವಾತಾವರಣ ಕಾಣುತ್ತಿರುವಾಗ, ಬಿಜೆಪಿ-ಕಾಂಗ್ರೆಸ್‌ಪಕ್ಷಗಳು ತಾವೇ ಏಕೈಕವಾಗಿ ಸರ್ಕಾರ ರಚಿಸಬೇಕೆಂದೂ, ಏಕಪಕ್ಷದ ಸರ್ಕಾರ ರಚಿಸಲು ತಮಗೆ ಮತ ನೀಡಬೇಕೆಂದೂ ಕೇಳುತ್ತಿವೆ. ಜೆಡಿ(ಎಸ್) ನಂತಹ ಮೂರನೇಯ ಶಕ್ತಿ ಇರಬಾರದೆಂದೂ ಬಯಸುತ್ತವೆ. ಈ ಸನ್ನಿವೇಶದಲ್ಲಿ ಅತಂತ್ರವಿರಬಾರದೆಂಬುವವರನ್ನು ಗಟ್ಟಿಗೊಳಿಸುತ್ತಾ, ಕಾಂಗ್ರೆಸ್ -ಬಿಜೆಪಿ ಪಕ್ಷಗಳ ನಡುವೆಯೇ ರಾಜಕೀಯ ಧ್ರುವೀಕರಣಗೊಳ್ಳಲು ಪ್ರೇರೇಪಿಸಬಹುದು. ಇಂತಹ ರಾಜಕೀಯ ತಂತ್ರಗಾರಿಕೆಯನ್ನು ರೂಪಿಸಿ ಜಾರಿಗೊಳಿಸುವಲ್ಲಿ 'ಸಂಘ ಪರಿವಾರ' ಎಲ್ಲರಿಗಿಂತೂ ಮುಂಚೂಣಿಯಲ್ಲಿದೆ.

ಒಂದೊಂದು ಸಂಸ್ಥೆಯೂ ಒಂದೊಂದು 'ಹಿತಾನುಭವ' ಬಯಸುತ್ತದೆ. ಅವರದ್ದೇ ವರ್ಗ ಹಿತಗಳೂ ಇರುತ್ತವೆ. ಜನರ ಸಂಕಷ್ಟಗಳಿಗೆ ಸ್ಪಂದಿಸದ ಸಂಕಟಗಳ ಸೃಷ್ಟಿಕರ್ತ ಪಕ್ಷಗಳು ಅಧಿಕಾರ ಹಿಡಿಯುವ ರಂಗಿನಾಟ ಆಡುತ್ತವೆ. ಅದೇನೇ ಸಮೀಕ್ಷೆಗಳಿದ್ದರೂ ನೆಲದ ವಾಸ್ತವವೇ ಬೇರೆ. ಜನರೊಂದಿಗೆ ಸದಾ ಬೆರೆತು, ಜನದನಿಯಾಗಿ ದುಡಿಯುತ್ತಿರುವವರಿಗೆ ಅವರಿಗೆ ಜನರ ಹೃದಯದ ಮಿಡಿತ ಸರಿಯಾಗಿಯೇ ಕೇಳುತ್ತದೆ. ಅದಕ್ಕೆ ಬಣ್ಣದ ಟಿ.ವಿ., ಪತ್ರಿಕೆಗಳ ಒತ್ತಡಾಭಿಪ್ರಾಯಬೇಕಾಗಿಲ್ಲ.

# ಅಸ್ಪೃಶ್ಯತೆಯ ಗೋಡೆ ಒಡೆಯಿತು

**ಅಸ್ಪಶ್ಯತೆ ಮತ್ತು ಜಾತಿ ಭೇದ-ಭಾವ ನಮ್ಮ ಸಮಾಜದಲ್ಲಿ ಮನುಷ್ಯ-ಮನುಷ್ಯರ ನಡುವೆ ಅಡ್ಡಗೋಡೆಗಳನ್ನು ನಿರ್ಮಿಸಿದೆ ಎಂದು ಹೇಳುತ್ತಿರುತ್ತೇವೆ. ಆದರೆ ತಮಿಳುನಾಡಿನ ಒಂದು ಹಳ್ಳಿಯಲ್ಲಿ ನಿಜವಾಗಿಯೂ ಎರಡು ದಶಕಗಳ ಹಿಂದೆ ಒಂದು ಗೋಡೆಯನ್ನು ನಿರ್ಮಿಸಲಾಗಿತ್ತು, ಅದು ಈಗಲೂ ಇದೆ ಎಂಬ ಸುದ್ದಿ ನಮ್ಮನ್ನೆಲ್ಲಾ ತಲ್ಲಣಗೊಳಿಸಿದೆ. ಈ 600 ಮೀಟರ್ ಉದ್ದದ ಗೋಡೆಯ 150 ಮೀಟರ್ ಭಾಗವನ್ನು ಮೇ6ರಂದು ಪ್ರಜಾಪ್ರಭುತ್ವ ವಾದಿಗಳ ಮಧ್ಯಪ್ರವೇಶಕ್ಕೆ ಸ್ಪಂದಿಸಿದ ತಮಿಳುನಾಡಿನ ಡಿಎಂಕೆ ಸರಕಾರದ ಆದೇಶದ ಮೇರೆಗೆ ಒಡೆದು ಹಾಕಿ ಸಾರ್ವಜನಿಕ ಹಾದಿ ನಿರ್ಮಿಸಲಾಗಿದೆ. ಆದರೆ ಮುಕ್ಕಾಲು ಭಾಗ ಇನ್ನೂ ನಿಂತಿದೆ.**

ಉಥಪ್ಪುರಂ ತಮಿಳುನಾಡಿನ ಮಧುರೈ ಜಿಲ್ಲೆಯ ಒಂದು ಹಳ್ಳಿ. ತಮಿಳುನಾಡಿನಲ್ಲಿ ಅಸ್ಪಶ್ಯತೆಯ ನಿರ್ಮೂಲನದ ಉದ್ದೇಶದಿಂದ ಸಿಪಿಐ(ಎಂ) ಪಕ್ಷದ ಮುತುವರ್ಜಿಯಿಂದ ರಚನೆಗೊಂಡ 'ತಮಿಳುನಾಡು ಅಸ್ಪಶ್ಯತಾ ನಿರ್ಮೂಲನಾ ರಂಗ' ಕಳೆದ ಫೆಬ್ರುವರಿ ತಿಂಗಳಲ್ಲಿ ಮಧುರೈ ಜಿಲ್ಲೆಯಲ್ಲಿ 47 ಹಳ್ಳಿಗಳ ಸರ್ವೆ ನಡೆಸಿದಾಗ ಈ ಹಳ್ಳಿಯಲ್ಲಿ ದಲಿತರು ಮತ್ತು ದಲಿತೇತರರ ವಾಸಪ್ರದೇಶಗಳನ್ನು ಪ್ರತ್ಯೇಕಿಸುವ ಹತ್ತು ಅಡಿ ಎತ್ತರದ, 600 ಮೀಟರ್ ಉದ್ದದ ಗೋಡೆಯಿರುವುದು ಕಂಡು ಬಂತು. ಸುಮಾರು 2000 ದಲಿತ ಕುಟುಂಬಗಳಿರುವ ಈ ಹಳ್ಳಿಯಲ್ಲಿ ಬೇರೆ ಯಾವುದೇ ಜಾತಿಗೆ ಹೋಲಿಸಿದರೆ ದಲಿತರ ಸಂಖ್ಯೆಯೇ ಜಾಸ್ತಿ. ಆಗಾಗ ಜಾತಿಗಲಭೆಗಳು ನಡೆಯುತ್ತಿದ್ದ ಹಳ್ಳಿಯಿದು. 1990ರಲ್ಲಿ ಇಂತಹ ಒಂದು ಗಲಭೆಯ ನಂತರ ದಲಿತರು ಮತ್ತು ಮೇಲ್ಜಾತಿಗಳ ಮುಖಂಡರ ನಡುವಿನ ಒಪ್ಪಂದದ ಪ್ರಕಾರ ಈ ಗೋಡೆಯನ್ನು ನಿರ್ಮಿಸಲಾಯಿತು ಎಂದು ತಿಳಿದು ಬಂತು. ಈ ಗೋಡೆ ನಿರ್ಮಾಣವಾಗುವ ಮೊದಲು ಇದು ಎಲ್ಲಾ ಜಾತಿಗಳವರು ಬಳಸುತ್ತಿದ್ದ ಪ್ರವೇಶದ್ವಾರವಾಗಿತ್ತು. ಈ ಗೋಡೆ ದಲಿತರು ಹಳ್ಳಿಯ ಸಾರ್ವಜನಿಕ ಪ್ರದೇಶಗಳನ್ನು ಪ್ರವೇಶಿಸದಂತೆ ತಡೆಯಿತು. ಇದರ ವಿರುದ್ಧ



ಒಡೆದ ಗೋಡೆ ವೀಕ್ಷಿಸುತ್ತಿರುವ ಪ್ರಕಾಶ್ ಕಾರಟ್ ಮತ್ತಿತರರು

ಅಸ್ಪಶ್ಯತಾ ನಿರ್ಮೂಲನಾ ರಂಗ ಮಾರ್ಚ್ 25ರಂದು ಒಂದು ಬೃಹತ್ ಮತಪ್ರದರ್ಶನ ನಡೆಸಿ ಮಧುರೈ ಜಿಲ್ಲಾ ಕಲೆಕ್ಟರ್‌ಗೆ ಒಂದು ಮನವಿ ಪತ್ರವನ್ನು ಸಲ್ಲಿಸಿತು.

**ವಿದ್ಯುತ್ ತಂತಿ ಅಳವಡಿಸಿದರು!:** ಎಪ್ರಿಲ್ 17ರಂದು 'ಹಿಂದೂ' ಪತ್ರಿಕೆ ಇನ್ನಷ್ಟು ತಲ್ಲಣಗೊಳಿಸುವ ಒಂದು ಸುದ್ದಿಯನ್ನು ಪ್ರಕಟಿಸಿತು. ಅದರ ಪ್ರಕಾರ ಈ ಗೋಡೆಗೆ ವಿದ್ಯುತ್ ತಂತಿಗಳನ್ನು ಅಳವಡಿಸಿ ರಾತ್ರಿ ವಿದ್ಯುತ್ ಹರಿಸಲಾಗುತ್ತಿತ್ತು. ಮಾಧ್ಯಮಗಳಲ್ಲಿ ಈ ಗೋಡೆಯ ಬಗ್ಗೆ ಪ್ರಚಾರವಾದ ಹಿನ್ನೆಲೆಯಲ್ಲಿ ಜಾತಿವಾದಿ ಶಕ್ತಿಗಳು ಇನ್ನಷ್ಟು ದಮನಕಾರಿಯಾದಂತೆ ಕಾಣುತ್ತದೆ. ರಾತ್ರಿಯಲ್ಲಿ ಅದನ್ನು ಕೆಡವಬಹುದೆಂಬ ಭೀತಿಯಿಂದ ಈ ಹೀನ ಉಪಾಯಕ್ಕೆ ಇಳಿದಂತೆ ಕಾಣುತ್ತದೆ. ಆದರೆ ಈ ಸುದ್ದಿ ತಮಿಳುನಾಡಿನಲ್ಲೆಲ್ಲ ಕೋಲಾಹಲ ಎಬ್ಬಿಸಿತು. ಮಧುರೈ ಪೂರ್ವದ ಸಿಪಿಐ(ಎಂ) ಶಾಸಕ ನನ್ಮಾರನ್ ವಿಧಾನ ಸಭೆಯಲ್ಲಿ ಇದನ್ನು ಎತ್ತಿದರು. ವಿದ್ಯುತ್ ಮಂತ್ರಿ ವಿದ್ಯುತ್ ತಂತಿಗಳಿದ್ದರೆ ಅವನ್ನು ತೆಗೆಸುವುದಾಗಿ ಭರವಸೆ ನೀಡಿದರು. ಹಾಗೆಯೇ ಮಾಡಲಾಯಿತು.

ಆದರೆ ಈ ಗೋಡೆಯ ಬಗ್ಗೆ ಜಿಲ್ಲಾ ಆಡಳಿತದ ನಿಷ್ಕ್ರಿಯತೆ ಮುಂದುವರೆಯಿತು. ಈ ನಡುವೆ ಅಸ್ಪೃಶ್ಯತೆಯ ಆಚರಣೆಯ ಇನ್ನಷು ಮಾಹಿತಿಗಳು ಲಭ್ಯವಾದವು. ಇಲ್ಲಿಯ ಪಂಚಾಯತಿನ ಅಧ್ಯಕ್ಷರು ಒಬ್ಬ ದಲಿತರು. ಆದರೂ ಒಂದು ಬಸ್ ತಂಗುದಾಣ ನಿರ್ಮಿಸಬೇಕೆಂಬ ಪಂಚಾಯತಿನ ನಿರ್ಣಯ ಜಾರಿಗೆ ಬರಲಿಲ್ಲ. ಕಾರಣ ಅಲ್ಲಿ ಮೇಲ್ಜಾತಿಗಳವರು ದಲಿತರ ಪಕ್ಕದಲ್ಲಿ ಕೂರಬೇಕಾಗುತ್ತದೆ! ಗೋಡೆಯ ಈ ಭಾಗದಲ್ಲಿರುವ ಮೇಲ್ಜಾತಿ ಪ್ರದೇಶಗಳಿಂದ ಹರಿಯುವ ಚರಂಡಿಯ ವಾಸನೆಯನ್ನು ನಿವಾರಿಸಲು ಕಾಂಕ್ರೀಟ್ ಸ್ಲಾಬ್‌ಗಳನ್ನು ಹಾಕಿಸಲೂ ವಿರೋಧ-ದಲಿತರು ಮೇಲ್ಜಾತಿಯವರ ಸಮ್ಮುಖ ಅದರ ಮೇಲೆ ಕುಳಿತಿರಲು ಅವಕಾಶ ಮಾಡಿದಂತಾಗುತ್ತದೆ ಎಂದು! ದಲಿತರಿಗೆ ಮೇಲ್ಜಾತಿಗಳವರ ಚಹಾದಂಗಡಿಗಳಲ್ಲಿ, ಕೆರೆ-ಬಾವಿ ಗಳಲ್ಲಿ ಪ್ರವೇಶವಿಲ್ಲ.

**ಬೃಹತ್ ಮತಪ್ರದರ್ಶನ:** ಅಸ್ಪೃಶ್ಯತಾ ನಿರ್ಮೂಲನಾ ರಂಗ ಕಾರ್ಯಾಚರಣೆಗೆ ಇಳಿಯಿತು. ಎಪ್ರಿಲ್ 29 ರಂದು ತಾಲೂಕು ಕೇಂದ್ರ(ಪೇರೈಯೂರು)ದಲ್ಲಿ ಬೃಹತ್ ಮತಪ್ರದರ್ಶನ ನಡೆಸಲಾಯಿತು. ಸುಮಾರು 2000 ಮಂದಿ ಭಾಗವಹಿಸಿದ್ದ ಈ ರ್‍ಯಾಲಿಯಲ್ಲಿ ಉಥಪ್ಪುರಂನ ಪ್ರತಿಯೊಂದು ದಲಿತ ಕುಟುಂಬದಿಂದಲೂ ಜನ ಬಂದಿದ್ದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಪಿ.ಸಂಪತ್ ಮತ್ತು ಮಧುರೈ ಜಿಲ್ಲಾ ಮುಖಂಡರು ಭಾಗವಹಿಸಿದ್ದ ಈ ಸಭೆ ಮೇ ಅಂತ್ಯದೊಳಗೆ ವಿದ್ಯುತ್ ತಂತಿ ಅಳವಡಿಸಿದ ಬಗ್ಗೆ ತನಿಖೆಯೂ ಸೇರಿದಂತೆ ಈ ಊರಿನ ದಲಿತರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿತು.

ಮೇ 6ರಂದು ಜಿಲ್ಲಾ ಆಡಳಿತ ಮುಖ್ಯ ಮಂತ್ರಿಗಳ ಆದೇಶದಂತೆ ಕಾರ್ಯಪ್ರವೃತ್ತವಾಯಿತು. ದಲಿತರು ಸಾರ್ವಜನಿಕ ಬಳಕೆಯ ಪ್ರದೇಶಗಳಿಗೆ ಹೋಗದಂತೆ ಅಡ್ಡವಾಗಿದ್ದ ಪ್ರದೇಶವನ್ನು ಗುರುತಿಸಿ ಈ ಗೋಡೆಯ 150 ಮೀಟರ್ ಭಾಗವನ್ನು ಕೆಡವಿ ರಸ್ತೆಯ ನಿರ್ಮಾಣ ಆರಂಭವಾಯಿತು. ಈ ಕಾರ್ಯಾಚರಣೆಗೆ ಮೇಲ್ಜಾತಿಗಳವರಿಂದ ನೇರ ಅಡ್ಡಿಯೇನೂ ಬರದಿದ್ದರೂ ಇದನ್ನು ಪ್ರತಿಭಟಿಸಿ ಅವರು ತಮ್ಮ ಮನೆಗಳನ್ನು ಖಾಲಿ ಮಾಡಿ ನಾಲ್ಕು ಕಿಲೋಮೀಟರ್ ದೂರದ ತಲೈಯುತು ಬೆಟ್ಟಕ್ಕೆ ಹೋಗಿದ್ದಾರಂತೆ. ಅವರನ್ನು ಹಿಂದಕ್ಕೆ ಕರೆತರಲು ಜಿಲ್ಲಾ ಆಡಳಿತ ಪ್ರಯತ್ನಿಸುತ್ತಿದೆಯಂತೆ. ಆದರೆ ದಲಿತರಿಗೆ ಇಷ್ಟಾದರೂ ಗೋಡೆ ಒಡೆದಿರುವುದಕ್ಕೆ ಸಂತಸವಾಗಿದೆ.

**ಭಾರೀ ಸ್ವಾಗತ:** ಮರುದಿನ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಈ ಹಳ್ಳಿಗೆ ಭೇಟಿ ನೀಡಿದಾಗ ಅವರಿಗೆ ಹಳ್ಳಿಗರಿಂದ ಭಾರೀ ಸ್ವಾಗತ ಕಾದಿತ್ತು. ಅವರು ಹಳ್ಳಿಯಲ್ಲಿ ಸಂಚರಿಸಿ ಹಳ್ಳಿಯನ್ನು ವಿಭಜಿಸಿದ ಗೋಡೆಯನ್ನು ನೋಡಿದರು, ಅದನ್ನು ಒಡೆದು ಈಗ ದಾರಿ ನಿರ್ಮಾಣವಾಗುತ್ತಿರುವುದನ್ನೂ ನೋಡಿದರು.

'ಮೇ6 ಉಥಪ್ಪುರಂಗೆ, ತಮಿಳುನಾಡಿಗೆ ಮತ್ತು ಭಾರತಕ್ಕೆ ಒಂದು ಐತಿಹಾಸಿಕ ದಿನ, 18 ವರ್ಷಗಳಿಂದ ಜನಗಳನ್ನು ಒಡೆದ, ಜಾತಿದಮನದ ಮತ್ತು ಭೇದಭಾವದ ಸಂಕೇತವಾಗಿದ್ದ ಈ ಗೋಡೆ ಒಡೆದಿದೆ, ಈ ಗೋಡೆಯನ್ನು ಸಂಪೂರ್ಣವಾಗಿ ಧ್ವಂಸ ಮಾಡುವತ್ತ ಇದು ಮೊದಲ ಹೆಜ್ಜೆ' ಎಂದ ಅವರು 'ಇದು ಹೊಸ ಉಥಪ್ಪುರಂನ ಹೊಸ ಅಧ್ಯಾಯವನ್ನು ಆರಂಭಿಸಲಿ, ಒಂದು ಪ್ರಜಾಸತ್ತಾತ್ಮಕ ಮತ್ತು ಸಮೃದ್ಧ ಉಥಪ್ಪುರಂನ ಆರಂಭವಾಗಲಿ,ಈ ಸಂದೇಶ ತಮಿಳುನಾಡಿನ ಎಲ್ಲೆಡೆ ಪಸರಿಸಲಿ, ಇದು ಒಂದು ಸಂಪೂರ್ಣ ಪ್ರಗತಿಯ ಮಹಾ ಆರಂಭವಾಗಲಿ' ಎಂದು ಹಾರೈಸಿದರು. ಯಾವುದೇ ಒಂದು ವಿಭಾಗದ ದಮನ ಇರುವವರೆಗೆ ಬೇರೆ ಯಾವುದೇ ವಿಭಾಗದ ಉದ್ಧಾರ ಸಾಧ್ಯವಿಲ್ಲ ಎನ್ನುತ್ತಾ ಉಥಪ್ಪುರಂನ ಎಲ್ಲಾ ಜನವಿಭಾಗಗಳು ಶಾಂತಿಯನ್ನು ಕಾಪಾಡಿ, ಸಾಮರಸ್ಯದಿಂದ ಬಾಳಬೇಕು ಎಂದು ಅವರು ಕರೆ ನೀಡಿದರು.

# ಅಯ್ಯೋ ನನ್ನ ಕಾಪಾಡೋರು ಯಾರೂ ಇಲ್ವೇ....?

"ಯಾಕ್ರೀ ಯಡ್ಡಿಯವರೇ ಹಿಂಗೆ ತಲೆ ಮೇಲೆ ಕೈ ಹೊತ್ತುಕೊಂಡು ಕುತ್ಕೊಂಡಿದೀರಿ?"

"ಯಾಕೋ ನನ್ನ ಗ್ರಹಚಾರನೇ ನೆಟ್‌ಗಿಲ್ಲ ಕಣಪ್ಪ"

"ಯಾಕ್ರಿ ಬಂಗಾರಪ್ಪ ನಿಮ್ಮ ವಿರುದ್ದ ನಿಂತ್ಕೊತಿದ್ದ ಹಾಗೆ ಹೀಗೆ ಹೆದರಿಕೊಂಡಿದ್ದೀರ?"

"ಅಲ್ಲಪ್ಪ ಅದಕ್ಕೆಲ್ಲ ನಾನು ಹೆದರೋನಲ್ಲ"

"ಮತ್ತಿನ್ನೇನ್ರೀ ದೇವೇಗೌಡ್ರು ಅವ್ರಿಗೆ ಸಪೋರ್ಟ್ ಮಾಡಿದ್ದಾರೆ ಅಂತಾನ"?

"ಅದಕ್ಕೂ ನಾನು ಹೆದರೋನಲ್ಲ"

"ಮತ್ತೆ ಕಾಂಗ್ರೆಸ್‌ನೋರು ಬಂಗಾರಪ್ಪನೋರಿಗೆ ಬೆಂಬಲ ಕೊಟ್ಟಿದ್ದಾರೆ ಅಂತ್ಲಾ?"

"ಛೇ ಅವೆಲ್ಲ ನನ್ಗೆ ಲೆಕ್ಕ ಇಲ್ಲ. ಅದ್ಕೆಲ್ಲ ನಾನು ಹೆದರೋನಲ್ಲ"

"ಮತ್ತಿನ್ನೇನ್ರೀ ನಿಮ್ಮ ಚಿಂತೆಗೆ ಕಾರಣ?"

"ಹೇಳೋ ಹಾಂಗೂ ಇಲ್ಲ ಅನುಭವಿಸೋ ಹಾಂಗೂ ಇಲ್ಲ ಕಣ್ರೀ ಅಂಥ ಸಂಕಟ ನನ್ನದು"

"ಅಲ್ರೀ ಯಡ್ಡಿಯವ್ರೆ ಅದೇನ್ರೀ ನಿಮ್ದು ಅಂತ ಗುಪ್ತ ಸಂಕಟ? ನಾನು ಯಾರ್ಗೂ ಹೇಳೋನಲ್ಲ ನನ್ನತ್ರ ಹೇಳ್ಕೊಳ್ಳಿ ಸ್ವಲ್ಪ ಮನ್ಸು ಹಗುರಾಗುತ್ತೆ"

"ನನ್ನ ಚಿಂತೆ ನನ್ನ ವಿರೋಧಿಗಳದ್ದು ಅಲ್ರಿ"

"ಮತ್ತೆ?"

"ನನ್ನ ಮಿತ್ರರದ್ದೇ, ನನ್ನ ಪಕ್ಷದವರದ್ದೇ ನನಗೆ ಚಿಂತೆ".

"ಹಾಗಂದ್ರೆ, ಏನ್ರೀ? ನೀವೇ ಭಾವಿ ಮುಖ್ಯಮಂತ್ರಿ ಅಂತ ಘೋಷಣೆ ಮಾಡಿದ್ದಾರಲ್ರೀ ನಿಮ್ಮ ಪಕ್ಷದೋರು."

"ಭಾವಿ ಮುಖ್ಯಮಂತ್ರಿ ಅಂತ ಹೇಳಿ ಬಾವಿಗೆ ತಳ್ಳೊಕೆ ನೋಡ್‌ತಿದಾದ್ರೀ, ನನ್ನ ಮಿತ್ರರೇ ನನ್ನ ಬುಡಕ್ಕೆ 'ಜಲಸಂಪನ್ಮೂಲ' ಮಾಡ್ತಿದಾರೆ"

"ಸರ್ರ್ಯಾಗಿ ಹೇಳ್ರೀ ನಿಮ್ಮ ರಾಜಕೀಯ ಭಾಷೇಲಿ ಹೇಳಿದ್ರೆ ನನಗೆ ಅರ್ಥವಾಗೋದಾದ್ರೂ ಹೇಗೆ?"



ಶ್ರೀ

"ಇನ್ನೂ ಏನು ಸರ್ರ್ಯಾಗಿ ಹೇಳ್ಬೆಕ್ರೀ? ಮೊದ್ಲೆ ಆಗಿರೋ ಗಾಯನ ಕೆರೆದೂ ಕೆರೆದೂ ಉರಿ ಹೆಚ್ಚುಸ್ತಿದೀರಲ್ಲ. ಶಿಕಾರಿಪುರದಲ್ಲಿ 'ಬಂ'ಗೆ ಕಾಂಗ್ರೆಸ್ಸು, ಜೆಡಿಎಸ್ಸು, ಮಾತ್ರ ಅಲ್ಲ ನಮ್ಮ ಪಕ್ಷದೋರೆ, ನನ್ನ ಮಿತ್ರರು ಅಂತ ಪೋಸ್ ಕೊಡೋರೆ ನನ್ನನ್ನು ಸೋಲಿಸೋಕೆ ಪಣ ತೊಟ್ಟಿದ್ದಾರೆ"

"ಛೇ.. ಛೇ.. ಅಂತ ಮಿತ್ರರಿದ್ದರೆ ಶತ್ರುಗಳೇ ಬೇಡ ಬಿಡಿ. ಆದ್ರೂ ಇದೆಲ್ಲ ಹೀಗ್ಯಾಕೆ ಆಗ್ತಿದೆ ಅಂತ?"

"ಏನೋ ಗೊತ್ತಾಗ್ತಿಲ್ಲ ಕಣ್ರೀ. ನನ್ನ ಚಿಡ್ಡಿ ಸುಟ್ಟು ಮಾಟದ ಸೀನ್ ಕ್ರಿಯೇಟ್ ಮಾಡಿದ್ದು ಹಿಂಗೆ ರಿವರ್ಸ್ ಎಫೆಕ್ಟ್ ಏನಾದ್ರೂ ಆಗ್‌ತಿದೆಯೋ ಏನೋ?"

"ಇಂಥ ಸೀನ್ ಕ್ರಿಯೇಟ್ ಮಾಡೋ ಸೂಪರ್ ಸುಪ್ರೀಂ ಐಡಿಯಾ ಕೊಟ್ಟೋರು ನಿಮ್ಮ ಹೃದಯ ಗೆದ್ದ ಗೆಳೆಯರೇ ತಾನೇ? ಏನಾದ್ರೂ ಆಗ್ಲಿ ನಿಮ್ಮ ಚಿಡ್ಡಿ ಭದ್ರವಾಗಿ ಇಟ್ಕೊಳ್ರೀ"

"ಅಯ್ಯೋ ನಾನೀಗ ಚಡ್ಡೀನೇ ಹಾಕ್ಕೋತಿಲ್ಲ ಕಣ್ರೀ... ಒಟ್ಟಿನಲ್ಲಿ ಏನು ಗ್ರಹಚಾರಾನೋ ನನ್ನದು..."

"ಅವೆಲ್ಲ ಇರ್ಲಿ ಬಿಡಿ. ಏನಾಗುತ್ತೋ ಆಗುತ್ತೆ. ನಿಮ್ಮ ಪಕ್ಷ ಬೆಲೆ ಏರಿಕೆ ವಿರುದ್ಧ ಪ್ರಚಾರ ಮಾಡ್‌ತಿದೆ ಆದ್ರೆ, ನಿಮ್ಮ ಪಾರ್ಟಿ ಸೀಟಿನ ಬೆಲೆ ಸಿಕ್ಕಾಪಟ್ಟೆ ಏರಿ ನಿಮಗೆ ಒಳ್ಳೆ ಲಾಭಾನೇ ಅಲ್ವೇ?"

"ಅದ್ರಿಂದ ನನಗೆ ಏನ್ರೀ ಲಾಭ? ಎಲ್ಲಾ ಫಂಡು ಪಾರ್ಟಿಗೆ ಹೋಗುತ್ತೆ. ನಾನು ಈ ಬಾರಿ ಮುಖ್ಯಮಂತ್ರಿ ಆಗದಿದ್ರೆ ಪರಮನೆಂಟಾಗಿ ಮೂಲೇಲಿ ಕೂತ್ಕೋಬೇಕಾಗುತ್ತೆ"

"ಅಲ್ರೀ ಯಡ್ಡಿಯವ್ರೇ... ನಿಮ್ಮ ಪ್ರಣಾಳಿಕೆಲಿ ಯಾವ ಯಾವ ಮಠಗಳಿಗೆ ಎಷ್ಟೆಷ್ಟು ಕೋಟಿ ಅಂತ ನಿರ್ದಿಷ್ಟವಾಗಿ ಹೇಳಿದ್ರೆ ಮಠಾಧೀಶರು ಸಂಪ್ರೀತರಾಗಿ ಆ ಮಾಟ ಮಂತ್ರದ ದುಷ್ಟ ಶಕ್ತಿಗಳ ಪ್ರಭಾವ ಏನಾದ್ರೂ ಕಡಿಮೆ ಆಗ್ತಿತ್ತೋ ಏನೋ?"

"ಅಲ್ಲಾ ಕಣ್ರೀ. ಏನೋ ಹೇಗಾದ್ರು ಮಾಡಿ ಈ ಸಾರಿನಾದ್ರೂ ಮುಖ್ಯ ಮಂತ್ರಿ ಆಗೋಣಾಂದ್ರೆ-ಈ ದರಿದ್ರ ಚುನಾವಣಾ ಸಮೀಕ್ಷೆಗಳು ಕಾಂಗ್ರೆಸ್‌ಗೆ ಮುನ್ನಡೆ ಅಂತ ಇದಾವಲ್ರೀ ಏನ್ರಿ ಮಾಡೋದು? ಆ ಅಡ್ವಾಣಿಯವರು ಇಲ್ಲಿ ಬಂದು ಬಹುಮತ ಬರದಿದ್ದರೆ ವಿರೋಧ ಪಕ್ಷದಲ್ಲಿ ಕೂರ್‌ತೀವಿ ಅಂದ್ರಲ್ಲ. ನನ್ನ ಅಭಿಪ್ರಾಯ ಏನೂಂತ ನಾದ್ರೂ ಕೇಳಬಾರದಾ ಆ ಥರ ಹೇಳೋ ಮುಂಚೆ"

"ಹೌದು ಸಾರ್ ನಿಮ್ಮ ಪಕ್ಷದವರೇ ಆ ಥರ ಹೇಳೋದು ನಿಜವಾಗ್ಲೂ ದುಃಖದ ವಿಷಯ ಸರ್"

"ಇವರೇ, ಸ್ವಲ್ಪ ಹತ್ರ ಬನ್ನಿ, ಚುನಾವಣಾ ಫಲಿತಾಂಶ ಬಂದ ಮೇಲಿನ ಮಾತು ಇದು. ಯಾರಿಗೂ ಹೇಳ್ಬೇಡಿ. ನನಗೆ ಮಾತ್ರ ಹೇಳ್ರಿ. ಏನಾದ್ರೂ ಒಂದಷ್ಟು ಎಂ.ಎಲ್.ಎ.ಗಳನ್ನು ಕರ್ರೊಂಡು ಆ 'ಕ್ವೀನ್ಸ್' ರಸ್ತೆಗೆ ಹೋದ್ರೆ ಸಿ.ಎಂ. ಸೀಟ್ ಸಿಗೋ ಛಾನ್ಸ್ ಇದೆಯೇನ್ರಿ.

"ಕ್ವೀನ್ಸ್ ರಸ್ತೆ ಅಂದ್ರೆ ಯಾವ್ದು ಸಾರ್",

"ಅಂಗದ್ರೆ ಕಮಲ ಬಿಟ್ಟು ಕೈ ಕಡೆ ಏನಾದ್ರೂ ಹೋದ್ರೆ ಅಂತ ಕಣ್ರಿ. ಅಷ್ಟು ಗೊತ್ತಾಗಲ್ವ"

"ಸಾರ್ ನೀವೇನಾ ಮಾತಾಡ್ತಿರೋದು"

ನಾನು ಕನಸೋ ನನಸೋ ಅಂತ ಮೈ ಚಿವುಟಿಕೊಂಡರೆ ಎಚ್ಚರ ಆಗಿಬಿಡೋದಾ? □

# ಪರ್ಯಾಯ ನೀತಿಗಳಿಗಾಗಿ ಹೋರಾಡಲು ಶಾಂತಿ, ಸಾಮರಸ್ಯದ ಕರ್ನಾಟಕವನ್ನು ಉಳಿಸಿಕೊಳ್ಳಬೇಕು

**ವಿ.ಜೆ.ಕೆ.ನಾಯರ್**

**ಈ ಬಾರಿಯ ಕರ್ನಾಟಕ ವಿಧಾನಸಭಾ ಚುನಾವಣೆಗಳಲ್ಲಿ ಕೋಮುವಾದಿಗಳನ್ನು ಸೋಲಿಸಿ, ಶಾಂತಿ-ಸೌಹಾರ್ದದ ಕರ್ನಾಟಕವನ್ನು ಉಳಿಸಿಕೊಳ್ಳಬೇಕು, ಜಾತ್ಯಾತೀತ ಮತ್ತು ಎಡಶಕ್ತಿಗಳನ್ನು ಬಲಪಡಿಸಬೇಕು ಎಂದು ಸಿಪಿಐ(ಎಂ) ಕರೆ ನೀಡಿದೆ. ರಾಜ್ಯದ ಜನತೆ ಕೋಮುವಾದಿಗಳನ್ನು ಏಕೆ ಸೋಲಿಸಬೇಕು ಎಂಬುದನ್ನು ಈ ಪಕ್ಷದ ರಾಜ್ಯ ಕಾರ್ಯದರ್ಶಿಗಳು ಇಲ್ಲಿ ವಿವರಿಸುತ್ತಾರೆ.**

ಕರ್ನಾಟಕದ ಮತದಾರರು 2004ರ ಚುನಾವಣೆಗಳಲ್ಲಿ ಮುಂದಿನ ಐದು ವರ್ಷಗಳಿಗೆ ಅಂದರೆ 2009ರವರೆಗೆ ಒಂದು ಸ್ಥಿರ ಸರ್ಕಾರವನ್ನು ಪ್ರತಿಷ್ಠಾಪಿಸಬೇಕು ಎಂಬ ಉದ್ದೇಶದಿಂದ ಭಾಗವಹಿಸಿದರು. ಆದರೆ ರಾಜಕೀಯ ವ್ಯವಸ್ಥೆಯಲ್ಲಿನ ಅಸ್ಥಿರತೆಯಿಂದಾಗಿ ಮಧ್ಯಂತರ ಚುನಾವಣೆ ಜನರ ಮೇಲೆ ಹೇರಲ್ಪಟ್ಟಿದೆ. ಇದಕ್ಕೆ ಕಾರಣ ದೇಶವನ್ನು ಅಥವಾ, ರಾಜ್ಯವನ್ನು ಆಳಿದ ಪಕ್ಷಗಳು. 2004ರ ಚುನಾವಣೆಗಳ ನಂತರ ಮೂರು ಮುಖ್ಯಮಂತ್ರಿಗಳು ಪ್ರತಿಜ್ಞೆ ಸ್ವೀಕರಿಸಿದರು. ಈ ಪಕ್ಷಗಳು ಅಧಿಕಾರಕ್ಕಾಗಿ ಜಗಳವಾಡಿದವು, ಮಾತ್ರವಲ್ಲ. ಟಿಕೆಟ್‌ಗಳ ಹಂಚಿಕೆಯಲ್ಲೂ ತಮ್ಮ ದೌರ್ಬಲ್ಯಗಳನ್ನು ತೋರಿಸಿಕೊಟ್ಟಿವೆ. ಈ ಹಿಂದೆ ಜನಗಳನ್ನು ಲೂಟಿ ಹೊಡೆದು ನೂರಾರು ಕೋಟಿ ರೂಪಾಯಿಗಳನ್ನು ದೋಚಿಕೊಂಡ ಹಣಬಲದ, ಭುಜಬಲದ ಹಲವು ಅಭ್ಯರ್ಥಿಗಳನ್ನು ಈ ಪಕ್ಷಗಳು ನಿಲ್ಲಿಸಿವೆ. ಬಹಿರಂಗವಾಗಿ ಸೀಟುಗಳಿಗಾಗಿ ಜಗಳವಾಡಿದವರೇ ವಿಧಾನಸಭೆಯ ಒಳಗೆ ಮತ್ತು ಹೊರಗೆ ಜಗಳವಾಡಿ ಸರ್ಕಾರ ಉರುಳುವಂತೆ ಮಾಡಿದವರು.

ಈ ಎಲ್ಲಾ ಮೂರು ಪಕ್ಷಗಳು ಈ ಪರಿಸ್ಥಿತಿಗೆ ಹೊಣೆಯಾದರೂ ಇವುಗಳಲ್ಲಿ ಒಂದು ಪಕ್ಷ ತಾನು ಗುಜರಾತ್ ಮಾದರಿಯನ್ನು ಅನುಸರಿಸುವುದಾಗಿ ಬಹಿರಂಗವಾಗಿಯೇ ಸಾರುತ್ತಿದೆ. ಸಾವಿರಾರು ಜನಗಳನ್ನು ಸಾಯಿಸಿದ, ಆಸ್ತಿ-ಪಾಸ್ತಿಗಳನ್ನು ಸುಟ್ಟು ಭಸ್ಮ ಮಾಡಿದ, ಅಲ್ಪಸಂಖ್ಯಾತರು ತಮ್ಮದೇ ನಾಡಿನಲ್ಲಿ ನಿರಾಶ್ರಿತರಾಗಿ ಶಿಬಿರಗಳಲ್ಲಿ ಬದುಕುವಂತೆ ಮಾಡಿರುವ ಗುಜರಾತ್ ಮಾದರಿಯನ್ನು ಅನುಸರಿಸುವುದು ಅಪಾಯಕಾರಿ. ಈ ಪಕ್ಷಕ್ಕೆ ಕೇಂದ್ರದಲ್ಲಾಗಲೀ, ರಾಜ್ಯದಲ್ಲಾಗಲೀ ಅಸಂಬದ್ಧ, ಕ್ಷುಲ್ಲಕ ಪ್ರಶ್ನೆಗಳನ್ನು ಎತ್ತಿಕೊಂಡು ಕೋಮುಗಲಭೆಗಳನ್ನು ಸೃಷ್ಟಿಸಿಯೇ ಅಧಿಕಾರ ಪಡೆಯಲು ಸಾಧ್ಯವಾಗಿರುವುದು. ಕರ್ನಾಟಕದ ಜನತೆ ಧಾರ್ಮಿಕ ಸಹಿಷ್ಣುತೆಯ ತಳಪಾಯದ ಮೇಲೆ ಒಂದು ಸಮಾಜವನ್ನು ಕಾಪಾಡಿಕೊಂಡು ಬಂದಿದ್ದಾರೆ. ಇಲ್ಲಿ ಕೋಮುವಾದಕ್ಕೆ ಯಾವುದೇ ಅವಕಾಶವಿರಬಾರದು

ಈ ಪಕ್ಷಗಳ ಆರೋಪಗಳು, ಪ್ರತ್ಯಾರೋಪಗಳನ್ನು ನೋಡಿದರೆ ಅವುಗಳ ನಡುವಿನ ವ್ಯತ್ಯಾಸ ಬಹುಮಟ್ಟಿಗೆ ಜಾತ್ಯಾತೀತತೆಯ ನೀತಿಗಳಿಗೆ ಸಂಬಂಧಪಟ್ಟಿದೆಯಷ್ಟೇ. ಜಾತ್ಯಾತೀತತೆ ನಮ್ಮ ಸಂವಿಧಾನದ ಪೀಠಿಕೆಯ ನಾಲ್ಕು ಆಧಾರ ಸ್ತಂಭಗಳಲ್ಲಿ ಒಂದು. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ರಂಗಗಳಲ್ಲಿ ಜನಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಸಂಬಂಧಪಟ್ಟಂತೆ ಈ ಪಕ್ಷಗಳ ನಡುವೆ ಬಹಳವೇನೂ ವ್ಯತ್ಯಾಸವಿಲ್ಲ. ಎಡಪಕ್ಷಗಳು, ಸಿಪಿಐ(ಎಂ)ಗೆ ಮಾತ್ರ ಭಾರತದ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿದ ಜಾತ್ಯಾತೀತ, ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ನೀತಿಗಳಿಗೆ ಅನುಗುಣವಾದ ಒಂದು ಕಾರ್ಯಕ್ರಮವಿದೆ. ಇಂತಹ ಕಾರ್ಯಕ್ರಮದಿಂದ ಮಾತ್ರವೇ ನಮ್ಮ ದೇಶದ ಸಾರ್ವಭೌಮತೆಯನ್ನು, ಶ್ರಮಪಟ್ಟು ಗೆದ್ದುಕೊಂಡ ಸ್ವಾತಂತ್ರ್ಯವನ್ನು ರಕ್ಷಿಸುವುದು ಸಾಧ್ಯ.

**ನಿಜವಾದ 'ವಚನ ಭ್ರಷ್ಟತೆ' ಇರುವುದು ಜನಗಳ ವಿಶ್ವಾಸಕ್ಕೆ ದ್ರೋಹ ಬಗೆಯುವುದರಲ್ಲಿಯೇ ವಿನಹ, ಜನಗಳನ್ನು ಲೂಟಿ ಹೊಡೆದು ಅದರಲ್ಲಿ ಪಾಲು ಗಿಟ್ಟಿಸಿಕೊಳ್ಳುವ ಸಂದರ್ಭಸಾಧಕ ನಿಲುವನ್ನು ಬದಲಿಸುವಲ್ಲಿ ಅಲ್ಲ.**

ಬಿಜೆಪಿ ನೇತೃತ್ವದ ಕೂಟ 1998 ರಿಂದ 2004ರವರೆಗೆ ದೇಶವನ್ನು ಆಳಿತು. ಕಳೆದ ಸಾರ್ವತ್ರಿಕ ಚುನಾವಣೆಗಳ ವೇಳೆ ಅವರು 'ಭಾರತ ಹೊಳೆಯುತ್ತಿದೆ' ಎಂಬ ಸುಳ್ಳು ಪ್ರಚಾರ ನಡೆಸಿದರು. ಕರ್ನಾಟಕದ ಜನತೆಯೂ ಸೇರಿದಂತೆ ಸಮಸ್ತ ಭಾರತದ ಜನತೆ ಅದನ್ನು ತಿರಸ್ಕರಿಸಿತು. ಕರ್ನಾಟಕದಲ್ಲಿ ಒಂದು ಸಂದರ್ಭಸಾಧಕ ಮೈತ್ರಿ ಮಾಡಿಕೊಂಡು ಅವರು ಅಧಿಕಾರದಲ್ಲಿ ಭಾಗಿಯಾದರು. ಈಗ 'ವಚನ ಭ್ರಷ್ಟತೆ'ಯ ಪ್ರಶ್ನೆ ಎಬ್ಬಿಸುವವರು ಅವರೇ. ಧರಂಸಿಂಗ್ ನೇತೃತ್ವದ ಕಾಂಗ್ರೆಸ್- ಜನತಾದಳ ಸರ್ಕಾರವನ್ನು ಉರುಳಿಸಿ 2006ರಲ್ಲಿ ಈ ಎರಡು ಪಕ್ಷಗಳು ಮಾಡಿಕೊಂಡ ಸಂದರ್ಭಸಾಧಕ ಮೈತ್ರಿಗಳು ಬಹಳ ದಿನ ಉಳಿಯಲಿಲ್ಲ. ಸ್ವಾಭಾವಿಕವಾಗಿಯೇ ಯಡಿಯೂರಪ್ಪನವರ ಒಂದು ವಾರದ ಮಂತ್ರಿ ಮಂಡಲ ಉರುಳಿತು .


ಮಂಗಳೂರಿನ ಸಿಪಿಐ(ಎಂ) ಪ್ರಚಾರ

## ವಚನಭ್ರಷ್ಟರು ಯಾರು?

ಜನತೆಗೆ ನೀಡಿದ ವಚನಗಳನ್ನು ಮುರಿದವರು ಯಾರ್ಯಾರು ಎಂದು ಪರೀಕ್ಷಿಸುವುದು ಒಳ್ಳೆಯದು. ಪ್ರತಿಯೊಂದು ರಾಜಕೀಯ ಪಕ್ಷ ಮತ್ತು ಪ್ರತಿಯೊಬ್ಬ ಅಭ್ಯರ್ಥಿ ಸಂವಿಧಾನವನ್ನು ರಕ್ಷಿಸುವ ಮತ್ತು ಭಾರತದ ಸಂವಿಧಾನಕ್ಕೆ ಅನುಗುಣವಾಗಿ ವರ್ತಿಸುವ ಪ್ರತಿಜ್ಞೆ ಕೈಗೊಳ್ಳುತ್ತಾರೆ. ಸಂವಿಧಾನದ ನಾಲ್ಕು ಸ್ತಂಭಗಳು, ಅಂದರೆ ಸಾರ್ವಭೌಮ, ಸಮಾಜವಾದಿ, ಪ್ರಜಾಸತ್ತಾತ್ಮಕ ಗಣತಂತ್ರದ ಉದ್ದೇಶ ಈ ದೇಶಗಳ ಎಲ್ಲಾ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ನಂಬಿಕೆ ಮತ್ತು ಆರಾಧನೆಯ ಸ್ವಾತಂತ್ರ್ಯ, ಸ್ಥಾನಮಾನ ಮತ್ತು ಅವಕಾಶದ ಸಮಾನತೆ ಒದಗಿಸುವುದು. ಯಾವುದೇ ರಾಜಕೀಯ ಪಕ್ಷ ಅಥವಾ ಅಭ್ಯರ್ಥಿ ಪ್ರತಿಜ್ಞೆ ಕೈಗೊಂಡು ಈ ನೀತಿಗಳನ್ನು ರಕ್ಷಿಸುವುದಾಗಿ ದೃಢಪಡಿಸುತ್ತಾರೆ. ಆದ್ದರಿಂದ ಇದಕ್ಕಿಂತ ಭಿನ್ನವಾಗಿ ವರ್ತಿಸುವುದೆಂದರೆ ಭಾರತದ ಜನತೆಗೆ ವಿಶ್ವಾಸಘಾತ ಬಗೆದಂತೆ.

**ಇಷ್ಟೆ ಅಲ್ಲ, 'ಜಾತ್ಯಾತೀತತೆ' ಗೆ ಬಹಿರಂಗವಾಗಿಯೇ ವಿರುದ್ಧವಾಗಿರುವ ಬಿಜೆಪಿ ಸಾಮ್ರಾಜ್ಯಶಾಹಿಗಳ ಆದೇಶಗಳನ್ನು ಪಾಲಿಸುವಲ್ಲಿ ಇತರೆಲ್ಲಾ ಆಳುವ ವರ್ಗಗಳ ಪಕ್ಷಗಳಿಗಿಂತ ಭಿನ್ನವಾಗಿಯೇನೂ ಇಲ್ಲ.**

ನಿಜವಾದ 'ವಚನ ಭ್ರಷ್ಟತೆ' ಇರುವುದು ಜನಗಳ ವಿಶ್ವಾಸಕ್ಕೆ ದ್ರೋಹ ಬಗೆಯುವುದರಲ್ಲಿಯೇ ವಿನಹ, ಜನಗಳನ್ನು ಲೂಟಿ ಹೊಡೆದು ಅದರಲ್ಲಿ ಪಾಲು ಗಿಟ್ಟಿಸಿಕೊಳ್ಳುವ ಸಂದರ್ಭಸಾಧಕ ನಿಲುವನ್ನು ಬದಲಿಸುವಲ್ಲಿ ಅಲ್ಲ.

ಇತರರು ವಚನಭ್ರಷ್ಟರು ಎಂದು ಆಪಾದಿಸುವ ರಾಜಕೀಯ ಪಕ್ಷವೇ ಬಹಿರಂಗವಾಗಿ ಜಾತ್ಯಾತೀಕ ನೀತಿಗಳ ವಿರುದ್ಧ ವರ್ತಿಸುತ್ತಿದೆ. ಅವರು ಆಳ್ವಿಕೆಯಿಂದ ಮತ-ಧರ್ಮವನ್ನು ದೂರವಿಡಲು ನಿರಾಕರಿಸಿ ವಿಚಾರ ಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ, ನಂಬಿಕೆ ಮತ್ತು ಆರಾಧನೆಯ ಸ್ವಾತಂತ್ರ್ಯವನ್ನು ನಿರಾಕರಿಸುತ್ತಿದ್ದಾರೆ. ಅವರು ಪ್ರಥಮತಃ ಧಾರ್ಮಿಕ ಅಲ್ಪಸಂಖ್ಯಾತರ ಬಗ್ಗೆ ಅಸಹಿಷ್ಣುಗಳಾಗಿದ್ದಾರೆ. ಅವರ ಆರಾಧನಾ ಸ್ಥಳಗಳ ಮೇಲೆ ಧಾಳಿ ಮಾಡಿ, ಧ್ವಂಸ ಮಾಡಿ ಅವರ ಆರಾಧನಾ ಸ್ವಾತಂತ್ರ್ಯದ ಮೇಲೆ ದಾಳಿ ಮಾಡುತ್ತಿದ್ದಾರೆ. ಅವರ ಕುಕೃತ್ಯಗಳನ್ನು ಬಯಲಿಗೆಳೆಯುವ ಎಲ್ಲರ ಬಗ್ಗೆ ಅಸಹಿಷ್ಣುಗಳಾಗಿದ್ದಾರೆ. ಅವರ ಕುಕೃತ್ಯಗಳನ್ನು ಬಯಲಿಗೆಳೆಯುವ ರಾಜಕೀಯ ಪಕ್ಷಗಳ ಸದಸ್ಯರ ಮೇಲೆ, ಮುಖಂಡರ ಮೇಲೆ, ಕಚೇರಿಗಳ ಮೇಲೆ ಧಾಳಿ ನಡೆಸುತ್ತಾರೆ. ಈ ಅಸಹಿಷ್ಣುತೆ ಸಹಜವಾಗಿಯೇ ಪತ್ರಕರ್ತರು, ಕಲಾವಿದರು, ಲೇಖಕರು ಮತ್ತು ಸದ್ಭಾವನೆಯ ನಾಗರಿಕರ ಅಭಿಪ್ರಾಯ ಸ್ವಾತಂತ್ರ್ಯವನ್ನು ನಿರಾಕರಿಸಲು ಮುಂದಾಗುತ್ತದೆ.

## ಸಾಮ್ರಾಜ್ಯಶಾಹಿಗಳ ಆದೇಶಪಾಲಕರು

ಹೀಗೆ ಇದು ಸ್ಪಷ್ಟವಾಗಿ ಪ್ರಜಾಪ್ರಭುತ್ವದ ನೀತಿಗಳ ಮೇಲೆ ಮಾಡಿರುವ ಧಾಳಿ. ಪ್ರಜಾಪ್ರಭುತ್ವವಿಲ್ಲದೆ ಜನಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯದ ಭರವಸೆ ನೀಡಲು ಸಾಧ್ಯವಿಲ್ಲ. ಇಷ್ಟೆ ಅಲ್ಲ, 'ಜಾತ್ಯಾತೀತತೆ' ಗೆ ಬಹಿರಂಗವಾಗಿಯೇ ವಿರುದ್ಧವಾಗಿರುವ ಬಿಜೆಪಿ ಸಾಮ್ರಾಜ್ಯಶಾಹಿಗಳ ಆದೇಶಗಳನ್ನು ಪಾಲಿಸುವಲ್ಲಿ ಇತರೆಲ್ಲಾ ಆಳುವ ವರ್ಗಗಳ ಪಕ್ಷಗಳಿಗಿಂತ ಭಿನ್ನವಾಗಿಯೇನೂ ಇಲ್ಲ. ಈ ವಿದೇಶಿ ಶಕ್ತಿಗಳು ನಮ್ಮ ದೇಶದ ಮತ್ತು ಜನತೆಯ ಸಾರ್ವಭೌಮತೆಯನ್ನು ಕುಂಠಿತಗೊಳಿಸ ಹೊರಟಿವೆ. ಈ ವಿದೇಶಿ ಶಕ್ತಿಗಳು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಆರ್ಥಿಕ ನೀತಿಯನ್ನು ಹೇರುತ್ತಿವೆ. ಬಹುಪಾಲು ಭಾರತೀಯ ಜನಗಳನ್ನು ಸುಲಿದು ಹಿಂಡುವ ನೀತಿ ಇದು. ನಮ್ಮ ರಾಜ್ಯದಲ್ಲಿ ಸಾವಿರಾರು ರೈತರ ಆತ್ಮಹತ್ಯೆಗೆ ಕಾರಣವಾದ ಈ ವಿದೇಶಿ ಹೇರಿಕೆಯ ನೀತಿಗಳಿಗೆ ಆಳುವವರ್ಗಗಳ ಪಕ್ಷಗಳ ವಿರೋಧವಿಲ್ಲ. ಅಷ್ಟೇ ಅಲ್ಲ, ಅವು ಈ ನೀತಿಗಳನ್ನು ಸಕ್ರಿಯವಾಗಿ ಜಾರಿಗೆ ತರುತ್ತಿವೆ.

ಉದಾರೀಕರಣದ ಪ್ರಕ್ರಿಯೆಯ ಜನ್ಮದಾತರು ತಾವೇ ಎಂಬ ಬಗ್ಗೆ ಕಾಂಗ್ರೆಸ್ ಮತ್ತು ಬಿಜೆಪಿಯವರ ನಡುವೆ ಸ್ಪರ್ಧೆಯೇ ಇದೆ. ತಮ್ಮ ನೀತಿಯನ್ನು ಅವರು ಕದ್ದಿದ್ದಾರೆ ಎಂದು ಅವರು ಪರಸ್ಪರ ಆರೋಪಿಸುತ್ತಿದ್ದಾರೆ. ಆದರೆ ಈ ನೀತಿಗಳ ಅಡಿಯಲ್ಲಿಯೇ ಸಬ್ಸಿಡಿಗಳನ್ನು ಕಡಿತ ಮಾಡಿ ಕೃಷಿ ಸಲಕರಣೆಗಳ ಖರ್ಚುಗಳನ್ನು ಏರಿಸಲಾಗುತ್ತಿದೆ, ಸಾಲ ಸೌಲಭ್ಯಗಳನ್ನು ಕಡಿತ ಮಾಡಲಾಗುತ್ತಿದೆ, ರೈತರ ಬೆಳೆಗಳಿಗೆ ಲಾಭಕಾರೀ ಬೆಲೆಗಳನ್ನು ಕೊಡುತ್ತಿಲ್ಲ, ಖಾಸಗೀ ಗುತ್ತೇದಾರಿಗಳು ಮಾರುಕಟ್ಟೆಯನ್ನು ತಮಗೆ ಬೇಕಾದಂತೆ ತಿರುಚಲು ಅವಕಾಶವಾಗುತ್ತಿದೆ. ಇದರಿಂದ ಜೀವನಾವಶ್ಯಕ ಸರಕುಗಳ ಬೆಲೆಗಳು ಏರುವಂತಾಗಿದೆ. ಅತ್ತ ಬೆಳೆ ಬೆಳೆಯುವವರನ್ನು ಸುಲಿದು ಅವರು ಆತ್ಮಹತ್ಯೆಗಳಿಯುವಂತಾಗಿದೆ. ರಾಜ್ಯದ 79 ಲಕ್ಷ ರೈತರಲ್ಲಿ 23 ಲಕ್ಷ ಮಂದಿಗೆ ಮಾತ್ರ ಕೃಷಿಗೆ ಸಾಂಸ್ಥಿಕ ಸಾಲ ಸಿಗುತ್ತಿದೆ. ಸಣ್ಣ ರೈತರಿಗೆ ಇದು ಸಿಗುವುದೇ ಇಲ್ಲ. ವಿದೇಶಿ ಶಕ್ತಿಗಳ ಆದೇಶಗಳನ್ನು ಅನುಸರಿಸದೇ ಇರುವುದಾದರೆ, ರಾಜ್ಯದಲ್ಲಿನ 2800 ಗ್ರಾಮೀಣ ಬ್ಯಾಂಕ್ ಶಾಖೆಗಳು, ಸಹಕಾರಿ ಸಂಘಗಳು ಹಾಗೂ ಶೆಡ್ಯೂಲ್ ಬ್ಯಾಂಕ್ ಶಾಖೆಗಳನ್ನು ಬಳಸಿ ಸಾಂಸ್ಥಿಕ ಸಾಲಗಳನ್ನು ಪಡೆಯಬಹುದಾದ ರೈತರ ಸಂಖ್ಯೆಯನ್ನು ಸುಲಭವಾಗಿಯೇ ಇಮ್ಮಡಿಗೊಳಿಸಬಹುದು.

ಈ ಪ್ರತಿಯೊಂದು ಪಕ್ಷವೂ ಜನಗಳ ಬವಣೆಗಳು, ಬೆಲೆಗಳ ನಾಗಾಲೋಟ, ಮೂಲ ರಚನೆಗಳ ಮತ್ತು ನಾಗರಿಕ ಸೌಲಭ್ಯಗಳ ಅಭಾವ, ಶಿಕ್ಷಣದ, ಆರೋಗ್ಯ ರಕ್ಷಣೆಯ ಅಭಾವ ಇತ್ಯಾದಿಗಳಿಗೆ ಇನ್ನೊಂದು ಪಕ್ಷವೇ ಕಾರಣ ಎಂದು ಪರಸ್ಪರ ಆರೋಪಿಸುತ್ತವೆ. ಈಗಿನ ಪರಿಸ್ಥಿತಿಗಳಿಗೆ ವಿಶೇಷವಾಗಿ ವಿಪರೀತ ಬೆಲೆಯೇರಿಕೆಗೆ ಕಾಂಗ್ರೆಸ್ ಮತ್ತು ಯುಪಿಎ ಮಿತ್ರರು ಹೊಣೆಯೆಂದು ಪ್ರಚಾರ ನಡೆಸುತ್ತಿರುವ ಬಿಜೆಪಿಯವರೇ ತಾವು ಅಧಿಕಾರದಲ್ಲಿದ್ದಾಗ ತಮ್ಮದು ಉದಾರೀಕರಣದ ಎರಡನೇ ಘಟ್ಟ ಎಂದು ಬೀಗುತ್ತಿದ್ದರು. ರೈತರನ್ನು ಆತ್ಮಹತ್ಯೆಗಳಿಂದ ತಡೆಯುವಲ್ಲಿ, ಸಾರ್ವತ್ರಿಕ ರೇಷನ್ ವ್ಯವಸ್ಥೆಯನ್ನು ವಿಸ್ತರಿಸುವಲ್ಲಿ, ಜನಗಳು ಕೈಗೆಟುಕುವ ಬೆಲೆಗಳಲ್ಲಿ ವಾಸದ ನಿವೇಶನಗಳನ್ನು ಪಡೆಯಲಾಗುವಂತೆ ಮಾಡುವಲ್ಲಿ ಸರಕಾರ ಮಧ್ಯ

ಪುಟ 10ಕ್ಕೆ




**ಭ್ರಷ್ಟ, ದುಷ್ಟ ಮತ್ತು ಖದೀಮ ಪಕ್ಷಗಳಲ್ಲಿ ಅತ್ಯಂತ ಕಡಿಮೆ ಅಪಾಯಕಾರಿಯಾದ ಒಂದನ್ನು ಆಯ್ಕೆ ಮಾಡುವ ದುರದೃಷ್ಟಕರ ಅನಿವಾರ್ಯತೆ ಮತದಾರರ ಮುಂದಿದೆ. ಆದ್ದರಿಂದ ಕಳೆದ ಬಾರಿ 6 ರಲ್ಲಿ 4 ಸ್ಥಾನ ಪಡೆದ ಬಿಜೆಪಿಗೆ ಫಲಿತಾಂಶ ತಿರುವುಮುರುವು ಆಗುವ ಸೂಚನೆಗಳಿವೆ.**


## ಉಡುಪಿ ಜಿಲ್ಲೆ

# ಬಿಜೆಪಿಗೆ ಕಾದಿದೆ ಅಘಾತ !

ಕರ್ನಾಟಕದ ಕರಾವಳಿಯ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಸಂಪೂರ್ಣ ಕೇಸರೀಕರಣಗೊಳಿಸಿ ಬಿಟ್ಟೆವೆಂದು ಬೀಗುತ್ತಿರುವ ಬಿಜೆಪಿ ಹಾಗೂ ಅದರ ಸಂಘ ಪರಿವಾರಕ್ಕೆ ಮೇ 16 ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಉಡುಪಿ ಜಿಲ್ಲೆಯಲ್ಲಂತೂ ಆಘಾತ ಕಾದಿದೆ. 2004ರ ಚುನಾವಣೆಯಲ್ಲಿ ಉಡುಪಿ ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಬೈಂದೂರು ಮತ್ತು ಬ್ರಹ್ಮಾವರವನ್ನು ಹೊರತುಪಡಿಸಿ ಉಳಿದ ನಾಲ್ಕರಲ್ಲಿ ಬಿಜೆಪಿ ಜಯಗಳಿಸಿದ್ದರೆ ಈ ಬಾರಿ ಈ ಫಲಿತಾಂಶ ತಿರುವು ಮುರುವಾಗುವ ಎಲ್ಲಾ ಸೂಚನೆಗಳಿವೆ.

**ಶ್ರೀಮಂತರು, ಕ್ರಿಮಿನಲ್‌ಗಳು ಹಾಗೂ 'ಬರಿಗೈ ದಾಸ'ರು**

ಕ್ಷೇತ್ರಗಳ ಮರುವಿಂಗಡಣೆಯ ಬಳಿಕ ಬ್ರಹ್ಮಾವರ ಕ್ಷೇತ್ರವು ಉಡುಪಿ ಮತ್ತು ಕುಂದಾಪುರಗಳ ನಡುವೆ ಹಂಚಿಹೋಗಿದ್ದು ಇದೀಗ ಜಿಲ್ಲೆಯಲ್ಲಿ ಉಳಿದುಕೊಂಡಿರುವುದು ಕೇವಲ ಐದು ಕ್ಷೇತ್ರಗಳು ಮಾತ್ರ. ಚುನಾವಣೆಯಲ್ಲಿ ಮುಖ್ಯ ಸ್ಪರ್ಧೆ ಇರುವುದು ಕಾಂಗ್ರೆಸ್, ಬಿಜೆಪಿ ಮತ್ತು ಜಾತ್ಯಾತೀತ ಜನತಾದಳದ ನಡುವೆಯಾದರೂ ಅಲ್ಲಲ್ಲಿ ಪಕ್ಷೇತರರು ಮತ್ತು ಬಂಡಾಯ ಅಭ್ಯರ್ಥಿಗಳು ಸ್ಪರ್ಧಿಸಿರುವುದು ಕೇವಲ ಸಾಂಕೇತಿಕ ಮಹತ್ವ ಹೊಂದಿದೆ. ಒಟ್ಟಿನಲ್ಲಿ ಭ್ರಷ್ಟ ದುಷ್ಟ ಮತ್ತು ಖದೀಮ ಪಕ್ಷಗಳಲ್ಲಿ ಅತ್ಯಂತ ಕಡಿಮೆ ಅಪಾಯಕಾರಿಯಾದ ಒಂದನ್ನು ಆಯ್ಕೆ ಮಾಡುವ ದುರದೃಷ್ಟಕರ ಅನಿವಾರ್ಯತೆ ಈ ಜಿಲ್ಲೆಯ ಮತದಾರರ ಮುಂದಿದೆ. ಬೈಂದೂರು ಕ್ಷೇತ್ರವೊಂದರಲ್ಲಿ ಮಾತ್ರ ರೈತ, ಕಾರ್ಮಿಕರ ಮುಂದಾಳು 'ಬರಿಗೈ ದಾಸ' ರೆಂದೇ ವರ್ಣಿಸಲ್ಪಟ್ಟ ಸಿಪಿಐ(ಎಂ) ನ ಕಾಂ:ಯು.ದಾಸಭಂಡಾರಿ ಸ್ಪರ್ಧಿಸುತ್ತಿರುವುದೊಂದು ಸುದ್ದಿ ಆಶಾಕಿರಣ. ಉಳಿದಂತೆ ಮೂರು ಮುಖ್ಯ ರಾಜಕೀಯ ಪಕ್ಷಗಳ ಹೆಚ್ಚಿನವರು ಕೋಟ್ಯಾಧಿಪತಿಗಳು, ಭಾರೀ ಶ್ರೀಮಂತ ಕುಳಗಳು ಇಲ್ಲವೇ ಕ್ರಿಮಿನಲ್ ಹಿನ್ನೆಲೆಯವರು.


ಪೇಜಾವರ ಶ್ರೀ

**ಅಣಕು ಪರಿಸರವಾದ**


ಉಡುಪಿ ಜಿಲ್ಲೆಯ ದಕ್ಷಿಣ ತುದಿಯ ಕಾಪು ಕ್ಷೇತ್ರವು ದಶಕಗಳ ಕಾಲದಿಂದಲೂ ಕಾಂಗ್ರೆಸ್‌ನ ಭದ್ರಕೋಟೆ. 1967ರಲ್ಲಿ ಪಿಎಸ್‌ಪಿ ಉಮೇದಾರರಾಗಿ ಶ್ರೀ ಬಿ.ಭಾಸ್ಕರ ಶೆಟ್ಟಿ ಗೆದ್ದಿರುವುದು ಬಿಟ್ಟರೆ ಕಾಂಗ್ರೇಸ್ಸೇತರರೊಬ್ಬರು ಇಲ್ಲಿ ಜಯಗಳಿಸಿರುವುದು 2004ರ ಚುನವಾಣೆಯಲ್ಲಿ ಮಾತ್ರ. ಸತತ ನಾಲ್ಕು ಬಾರಿ ಕಾಪು ಕ್ಷೇತ್ರದಲ್ಲಿ ಗೆದ್ದು ಸಚಿವ ಸ್ಥಾನ ಹೊಂದಿದ್ದ ವಸಂತ ಸಾಲ್ಯಾನರವರು ಸೋತು ಬಿಜೆಪಿಯ ಲಾಲಾಜಿ ಮೆಂಡನ್‌ಗೆ ಶರಣಾದುದಕ್ಕೆ ಬಿಜೆಪಿಯ ಜನಪ್ರಿಯತೆಗಿಂತಲೂ ಕಾಂಗ್ರೆಸ್‌ನವರ ದುರಹಂಕಾರ ಮತ್ತು ಆ ಪಕ್ಷದೊಳಗಿನ ಒಡಕೇ ಪ್ರಮುಖ ಕಾರಣವಾಗಿತ್ತು. ಕಾಂಗ್ರೆಸ್ ಸರ್ಕಾರದ ಕಾಲದಲ್ಲಿ ಮಂಜೂರಾತಿ ಪಡೆದಿದ್ದ ನಾಗಾರ್ಜುನ ವಿದ್ಯುತ್ ಯೋಜನೆಯಲ್ಲಿ ಬಿಜೆಪಿ ತನ್ನದೇ ಚೇಲಾಗಳಾದ ಅಣಕು ಪರಿಸರವಾದಿಗಳ ಮೂಲಕ ವಿರೋಧಿ ಕಾಂಗ್ರೆಸ್ಸನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿತು. ಬಿಜೆಪಿಯ ಕುಮ್ಮಕ್ಕಿನಿಂದ ನಾಗಾರ್ಜುನ ವಿರೋಧಿ ಹೋರಾಟ ಸಮಿತಿಯೊಂದು ರಚನೆಯಾಗಿ ವಿದ್ಯುತ್ ಯೋಜನೆಯ ಕುರಿತು ಭಯಾನಕ ಚಿತ್ರಣ ನೀಡಿ ಕಾಂಗ್ರೆಸ್‌ನ ಕಾಲು ಎಳೆಯಲಾಯಿತು. ಇದರಿಂದ ಕಂಗೆಟ್ಟ ಕಾಂಗ್ರೆಸ್‌ನವರು ತಲೆಗೊಂದರಂತೆ ಮಾತನಾಡಲಾರಂಭಿಸಿದರು. ಸ್ವತಃ ವಸಂತ ಸಾಲ್ಯಾನರಿಗೇ ಯಾವುದೇ ಖಚಿತ ನಿಲುಮೆ ಇರಲಿಲ್ಲ. ಇದರ ಲಾಭ ಪಡೆದವರು ಬಿಜೆಪಿಯವರು. ಲಾಲಾಜಿ ಮಂಡನ್ 1300 ರಷ್ಟು ಅಲ್ಪ ಅಂತರದಿಂದ ಗೆಲುವು ಸಾಧಿಸಿದರು. ಆದರೆ ಇದೀಗ 2008ರ ಚುನಾವಣೆಯ ಹೊತ್ತಿಗೆ ಬಿಜೆಪಿಯ 'ಢೋಂಗಿ ಪರಿಸರ ಪ್ರೇಮ' ದ ನಿಜರೂಪ ಬೆಳಕಿಗೆಬಂದಿದೆ. ಕೋ-ಜಾ ಸರ್ಕಾರದಲ್ಲಿ ಉಸ್ತುವಾರಿ ಸಚಿವರಾಗಿದ್ದ ಡಾ: ವಿ.ಎಸ್. ಆಚಾರ್ಯ ಮತ್ತು ಉಡುಪಿಯ ಮಾಜಿ ಶಾಸಕ ಕೆ.ರಘುಪತಿಭಟ್ ಇವರಿಬ್ಬರೂ ನಾಗಾರ್ಜುನ ಯೋಜನೆಯ ಕಟ್ಟಾ ಬೆಂಬಲಿಗರಾಗಿದ್ದಾರೆ. ಇವರನ್ನು ನಂಬಿ ಮೋಸ ಹೋದ ಈ ಪ್ರದೇಶದ ಮತದಾರರಿಗೆ ಬಿಜೆಪಿಯ ಖದೀಮತನದ ಅರಿವಾಗಿದೆ. ಇದೀಗ ನಾಗಾರ್ಜುನ ವಿರೋಧಿ ಹೋರಾಟ ಸಮಿತಿಯ ಮುಂದಾಳುಗಳು ಈ ವಿ.ಎಸ್.ಆಚಾರ್ಯರನ್ನು ನಂದಿಕೂರು ದೇವಸ್ಥಾನಕ್ಕೆ ಕರೆತಂದು ಬಿಜೆಪಿ ಅಧಿಕಾರಕ್ಕೆ ಬಂದರೆ ನಾಗಾರ್ಜುನ ಯೋಜನೆಯನ್ನು ಎತ್ತಂಗಡಿ ಮಾಡಿಸುವುದಾಗಿ ಆಶ್ವಾಸನೆ ಕೊಡಿಸಿದ್ದಾರೆ, ಆ ಮೂಲಕ ತೇಪೆ ಹಚ್ಚುವ ಕೆಲಸ ಮಾಡಿದ್ದಾರೆ. ಆದರೆ ಬಿಜೆಪಿ ನಾಯಕರ ಈ ಕಪಟತನವನ್ನು ಅರಿಯಲಾರದಷ್ಟು ಈ ಕ್ಷೇತ್ರದ ಜನ ಬೆಪ್ಪು ತಕ್ಕಡಿಗಳಲ್ಲ! ಕಾಪು ಕ್ಷೇತ್ರದಲ್ಲಿ ಬಿಜೆಪಿಗೆ ಗೆಲುವು ದಕ್ಕುವುದು ದೂರದ ಮಾತು.

ಜಿಲ್ಲಾ ಕೇಂದ್ರವಿರುವ ಉಡುಪಿ ಕ್ಷೇತ್ರದಲ್ಲೂ ಕ್ಷೇತ್ರ ಮರುವಿಂಗಡನೆಯ ಬಳಿಕ ಸಾಕಷ್ಟು ಬದಲಾವಣೆಗಳಾಗಿವೆ. ಬೇರೆ ಬೇರೆ ಪಕ್ಷಗಳ ಭದ್ರಕೋಟೆಯೆನಿಸಿದ ಪ್ರದೇಶಗಳು ಇತರ ಕ್ಷೇತ್ರಗಳಿಗೆ ವರ್ಗಾಯಿಸಲ್ಪಟ್ಟಿದ್ದು ಪರಿಸ್ಥಿತಿಯು ಗೊಂದಲಮಯವಾಗಿದೆ. ಕಳೆದ ಚುನಾವಣೆಯ ವೇಳೆ ಬಿಜೆಪಿಗೆ ಓಟುಗಳನ್ನು ತಂದಿದ್ದ ಹಿಂದುತ್ವದ ಅಲೆ ಈಗ ಕಳೆಗುಂದಿದೆ. ಜನತೆ ಸದಾಕಾಲ ಸಮೂಹ ಸನ್ನಿಯ ಮಂಪರಿನಲ್ಲೇ ಇರಲಾರರು. ಜನವರಿ ತಿಂಗಳಲ್ಲಿ ಉಡುಪಿ ಪರ್ಯಾಯದ ವೇಳೆ ಸಂಘ ಪರಿವಾರ ಮತ್ತು ಪೇಜಾವರ ಶ್ರೀಗಳ ನಡುವೆ ಸಂಬಂಧ ಹದಗೆಟ್ಟಿದ್ದ ಪರಿಣಾಮವಾಗಿ


ಪ್ರಮೋದ್ ಮಧ್ವರಾಜ್

**ಅದಮಾರು ಶ್ರೀಮತಿ ಆಚಾರ್ಯ**

ಬಿಜೆಪಿಗೆ ಮಠಾಧಿಪತಿಗಳ ಆಶೀರ್ವಾದವೂ ದೊರೆಯಲಾರದು. ಹಾಗಾಗಿ ಮೇಲ್ಜಾತಿಯವರ ಓಟುಗಳು ರಘುಪತಿ ಭಟ್ಟರಿಗೆ ಬೀಳುವ ಖಾತರಿ ಇಲ್ಲ. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪ್ರಮೋದ್ ಮಧ್ವರಾಜ್‌ಗೆ ಹೆಚ್ಚಿನ ಬೆಂಬಲ ವ್ಯಕ್ತವಾಗುತ್ತಿದೆ. ತನಗೆ ಟಿಕೆಟ್ ದೊರತರೂ ಅದನ್ನು ತ್ಯಜಿಸಿ ಪ್ರಮೋದ್ ಮಧ್ವರಾಜ್‌ರಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ ಮಾಜಿ ಶಾಸಕ ಯು.ಆರ್.ಸಭಾಪತಿ ಬಿಜೆಪಿಯನ್ನು ಸೋಲಿಸುವುದೇ ತಮ್ಮ ಏಕಮಾತ್ರ ಗುರಿಯೆಂದಿದ್ದಾರೆ. ಸ್ವತಃ ಪ್ರಮೋದ್ ಮಧ್ವರಾಜ್ ತಾಯಿ ಬಿಜೆಪಿಯ ಸಂಸದೆ ಶ್ರೀಮತಿ ಮನೋರಮ ಮಧ್ವರಾಜ್ ಕಣ್ಣು ಬೇನೆಯ ಕಾರಣವೊಡ್ಡಿ ಬಿಜೆಪಿ ಪರ ಪ್ರಚಾರದಿಂದ ಹಿಂದೆ ಸರಿದಿದ್ದಾರೆ. ಇದೆಲ್ಲವೂ ಬಿಜೆಪಿಗೆ ಮುಳುವಾಗಲಿದೆ. ಬಿಜೆಪಿಯ ಕೆ.ರಘುಪತಿಭಟ್ಟರು ಆದಿವುಡುಪಿ-ಮಣಿಪಾಲ ರಸ್ತೆಯ ಅಗಲೀಕರಣದ ಯೋಜನೆ ತನ್ನ ಸಾಧನೆಯೆಂದು ಬಿಂಬಿಸುತ್ತಿದ್ದಾರೆ. ಆದರೆ ಇದು ವಾಸ್ತವವಾಗಿ ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ರೂ 120 ಕೋಟಿಯ ಮಂಜೂರಾತಿ ಪಡೆದ ಮಲ್ಪೆ- ಮೊಳಕಾಲ್ಮೂರು ರಾಜ್ಯ ಹೆದ್ದಾರಿ 65ರ ಕುಡ್ಲೆಂಪ್ ಯೋಜನೆಯಾಗಿದ್ದು, ಬಿಜೆಪಿಗೆ ಇದರಲ್ಲಿ ಯಾವ ಪಾತ್ರವೂ ಇಲ್ಲ. ಹಲವಾರು ವರ್ಷಗಳಿಂದ ನೆನಗುದಿಗೆ ಬಿದ್ದಿದೆ. ಈ ಯೋಜನೆಗೆ ಈವರೆವಿಗೂ ಅಡ್ಡಗಾಲು ಹಾಕಿದ್ದವರು ಬಿಜೆಪಿಯವರೇ, ಯಾಕೆಂದರೆ ಈ ರಸ್ತೆಯ ಇಕ್ಕೆಲಗಳಲ್ಲಿ ಅಂಗಡಿ ಮುಂಗಟ್ಟು ಮತ್ತು ವ್ಯಾಪಾರದ ಮಳಿಗೆಗಳನ್ನು ಹೊಂದಿದ್ದವರು ಬಿಜೆಪಿಯವರ ಕಟ್ಟಾ ಅನುಯಾಯಿಗಳೇ. ಇದೀಗ ಇವರಿಗೆಲ್ಲ ಹೇರಳ ಪರಿಹಾರ ಕೊಡಿಸಿ ಜಾಗ ಖಾಲಿ ಮಾಡುವಂತೆ ಪುಸಲಾಯಿಸುವುದರಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಇದೇ ಅವರ ಸಾಧನೆ.ಆದರೆ ಈ ಪರಿಹಾರವನ್ನು ನೀಡಿದ್ದು ಬಿಜೆಪಿಯವರ ಜೇಬಿನಿಂದಲ್ಲ. ಅದು ಸರ್ಕಾರದ ಹಣ, ಜನತೆಯ ತೆರಿಗೆಯ ಹಣ! ಕಾರ್ಕಳ ಕ್ಷೇತ್ರವಂತೂ ಸತತವಾಗಿ ಆರು ಬಾರಿ ಮಾಜಿ ಮುಖ್ಯಮಂತ್ರಿ ವೀರಪ್ಪಮೊಯಿಲಿ ಅವರನ್ನು ಗೆಲ್ಲಿಸಿದ ಕ್ಷೇತ್ರ. 2003ರವರೆಗೆ ಅಲ್ಲಿ ಶಾಸಕರಾಗಿದ್ದವರೂ ಕಾಂಗ್ರೆಸ್‌ನ ಶ್ರೀ ಗೋಪಾಲಭಂಡಾರಿ. 2004ರಲ್ಲಿ ಸುನಿಲ್ ಕುಮಾರ್ ಎಂಬ ಸಂಘ ಪರಿವಾರದ ಬೆಂಕಿ ನವಾಬನೊಬ್ಬ ಚಿಕ್ಕಮಗಳೂರಿನಿಂದ ಕಾರ್ಕಳಕ್ಕೆ ವಕ್ಕರಿಸಿ ಕೋಮುವಾದ ಮತ್ತು ದುಂಡಾವರ್ತನೆ ಮೂಲಕವೇ ಜನನಾಯಕನೆನಿಸಿಕೊಂಡ. ಬಾಬಾಬುಡನ್‌ಗಿರಿ ದತ್ತ ಪೀಠದ ವಿವಾದ ಶಿಶುವಾಗಿರುವ ಈತ ಶಾಸಕನಾದ ಮೇಲೂ ಮಾಡಿದ ಸಾಧನೆ ಶೂನ್ಯ. ಈ ಬಾರಿ ಸುನಿಲ್‌ಕುಮಾರ್‌ನ ಆಟ ಇಲ್ಲಿ ನಡೆಯಲಾರದು. ಬಿಜೆಪಿಯವರು ಮೊನ್ನೆ ಗುಜರಾತ್ ಕುಖ್ಯಾತಿಯ ನರೇಂದ್ರ ಮೋದಿಯನ್ನು ಕರೆಸಿ ಭಾಷಣ ಮಾಡಿಸಿದಾಗಲೂ, ಸಾಕಷ್ಟು ಜನ ಸೇರದೇ ಇಡೀ ಕಾರ್ಯಕ್ರಮ ಠುಸ್ ಆಗಿದೆ. ಈ ಸಭೆಯಲ್ಲಿ ಕ್ಷೌರಿಕ ವೃತ್ತಿಯ ಸವಿತಾ ಸಮಾಜಕ್ಕೆ ಸೇರಿದ ಗೋಪಾಲ ಭಂಡಾರಿಯವರ ಕುಲ ಕಸಬಿನ ಬಗ್ಗೆ ಸುನಿಲ್ ಕುಮಾರ್ ಹೀನಾಯವಾಗಿ ಮಾತನಾಡಿದ್ದು ಹಿಂದುಳಿದ ವರ್ಗಗಳ ಆಕ್ರೋಶಕ್ಕೆ ಕಾರಣವಾಗಿದೆ. ಸುನಿಲ್ ಕುಮಾರ್‌ಗೆ ಈ ಬಾರಿ ಸೋಲು ಕಟ್ಟಿಟ್ಟ ಬುತ್ತಿ.


ಡಾ. ವಿ.ಎಸ್. ಆಚಾರ್ಯ

ಉಡುಪಿ ಜಿಲ್ಲೆಯ ಬ್ರಹ್ಮಾವರ ಕ್ಷೇತ್ರವು ಕುಂದಾಪುರ ಮತ್ತು ಉಡುಪಿ ಕ್ಷೇತ್ರಗಳ ನಡುವೆ ಹಂಚಿ ಹೋಗಿರುವುದರಿಂದ ಕುಂದಾಪುರ ಕ್ಷೇತ್ರವೂ ಪ್ರತಿಷ್ಠೆಯ ಕಣವಾಗಿದೆ. ಮಾಜಿ ಸಚಿವ ಕಾಂಗ್ರೆಸ್‌ನ ಕೆ.ಜಯಪ್ರಕಾಶ ಹೆಗ್ಡೆ ಮತ್ತು ಬಿಜೆಪಿಯ ನಿಕಟಪೂರ್ವ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿಯ ನಡುವೆ ಇಲ್ಲಿ ಹಣಾಹಣಿ ನಡೆದಿದೆ. ಬಿಜೆಪಿಯ ಹಾಲಾಡಿ ಶ್ರೀನಿವಾಸ ಶೆಟ್ಟರ 'ಅಪಾರ ಜನಪ್ರಿಯತೆ'ಗೆ ಕಾರಣವೇ ಅವರೊಬ್ಬ ಕೊಡುಗೈದಾನಿಗಳೆಂಬ ಖ್ಯಾತಿ! ತನ್ನಲ್ಲಿ ಸಹಾಯ ಬೇಡಿ ಬಂದವರಿಗೆಲ್ಲ ಹಣ ನೀಡುವ ಈ 'ದಾನಶೂರ ಕರ್ಣ'ನ ಹಣದ ಮೂಲವೇನು ಎಂಬುದು ಯಾರಿಗೂ ತಿಳಿದಿಲ್ಲ! ಮೊನ್ನೆ ನಾಮಪತ್ರ ಸಲ್ಲಿಸುವಾಗ ಅವರು ನೀಡಿದ ಘೋಷಣೆಯ ಪ್ರಕಾರ ಅವರ ಬಳಿ ನಗದು ಹಣ ಇಲ್ಲ! ಸ್ಥಿರಾಸ್ತಿ ಇಲ್ಲ. ಬ್ಯಾಂಕ್ ಖಾತೆಯಲ್ಲೂ ದುಡ್ಡಿಲ್ಲ. ಆದರೆ ಅವರಿಗೆ 54 ಲಕ್ಷ ರೂಪಾಯಿ ಸಾಲ ಮಾತ್ರ ಇದೆ! ಯಾವುದೇ ಸ್ಥಿರಾಸ್ತಿ ಇಲ್ಲದ ಈ ಬಡಪಾಯಿ ಹಾಲಾಡಿ ಶ್ರೀನಿವಾಸ ಶೆಟ್ಟರಿಗೆ 54 ಲಕ್ಷ ರೂಪಾಯಿ ಸಾಲ ನೀಡಿದ 'ಭೂಪ' ಯಾರು? ಇವರಿಗೆ ಯಾವ ಆಧಾರದಲ್ಲಿ ಸಾಲ ದೊರೆತಿದೆ? ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್‌ನಿಂದ ಸ್ಪರ್ಧಿಸುತ್ತಿರುವ ಮಾಜಿ ಸಚಿವ ಜಯಪ್ರಕಾಶ್‌ಹೆಗ್ಡೆಯವರು ಅಭಿವೃದ್ಧಿಕಾರ್ಯಗಳ ಹೆಸರಿನಲ್ಲಿ ಮತ ಯಾಚಿಸುತ್ತಿದ್ದಾರೆ. ಕುಂದಾಪುರದಲ್ಲಿ ಈ ಬಾರಿ ಬಿಜೆಪಿಗೆ ಸೋಲಾಗುವ ನಿಚ್ಚಳ ಸಾಧ್ಯತೆಗಳಿವೆ.

ಉಡುಪಿ ಜಿಲ್ಲೆಯ ಉತ್ತರ ತುದಿಯ ಬೈಂದೂರಿನಲ್ಲಿ ಲಾಗಾಯ್ತಿನಿಂದಲೂ ಗೆಲ್ಲುತ್ತಿದ್ದವರು ಕಾಂಗ್ರೆಸ್‌ನವರೇ. ಒಮ್ಮೆ ಮಾತ್ರ ಜನತಾದಳದ ಬಿ.ಅಪ್ಪಣ್ಣ ಹೆಗ್ಡೆ ಜಯಗಳಿಸಿದ್ದಾರೆ. ಆದರೆ ಈ

ಪುಟ 13ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ



**'ಗುಜರಾತ್ ಮಾದರಿ' ಪ್ರಸಕ್ತ ಚುನಾವಣೆಗಳಲ್ಲಿ ಬಿಜೆಪಿಯ ಒಂದು ಪ್ರಮುಖ ಮಂತ್ರ.. ಆ ಮಾದರಿಯ ಪ್ರತೀಕವಾದ ನರೇಂದ್ರ ಮೋದಿಯವರನ್ನು ಬಿಜೆಪಿಯವರು ರಾಜ್ಯದಲ್ಲೆಲ್ಲಾ ಪ್ರದರ್ಶಿಸುತ್ತಿದ್ದಾರೆ. ಅವರಂತೂ ಕರ್ನಾಟಕವನ್ನು ಗುಜರಾತ್ ಮಾಡುವ ತಾಕತ್ತಿದೆಯೇ ಎಂದು ಸವಾಲು ಹಾಕುತ್ತಿದ್ದಾರೆ. ಆದರೆ ಅದೇ ಗುಜರಾತಿನ ಅಧ್ಯಯನಕಾರರು, ಸಾಮಾಜಿಕ ಕಾರ್ಯಕರ್ತರು ಹೇಳುತ್ತಿರುವುದೇ ಬೇರೆ. ಕರ್ನಾಟಕವನ್ನು ಕರ್ನಾಟಕವಾಗಿಯೇ ಉಳಿಸಿಕೊಳ್ಳಿ ಎಂದು ಅವರು ಮನವಿ ಮಾಡುತ್ತಿದ್ದಾರೆ, ಗುಜರಾತ್ ಅಂತೂ ಮಾಡಬೇಡಿ ಎನ್ನುತ್ತಿದ್ದಾರೆ! ಯಾಕೆ?**

# 5 ಕೋಟಿ ಗುಜರಾತಿಗಳಿಗಾಗಿ ಅಲ್ಲ ಗುಜರಾತಿ ಕೋಟ್ಯಾಧಿಪತಿಗಳಿಗಾಗಿ?

## ಇದೇ ಮೋದಿ ಮಾದರಿ, ಕರ್ನಾಟಕಕ್ಕೆ ಬೇಡ ಎನ್ನುತ್ತಾರೆ ಗುಜರಾತಿ ಅಧ್ಯಯನಕಾರರು

ಕಳೆದ ಮೇ3ರಂದು ಬೆಂಗಳೂರಿನಲ್ಲಿ ಈ ಕುರಿತು ಒಂದು ವಿಚಾರಸಂಕಿರಣ ನಡೆಯಿತು. ಕೆಲವು ಮಾನವ ಹಕ್ಕು ಗುಂಪುಗಳು ದಿಲ್ಲಿಯ 'ಅನ್ಹದ್' ( 'ಸಾಮರಸ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ಕಾರ್ಯಶೀಲರಾಗಿ') ಜತೆಗೂಡಿ ಈ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದವು. ಗುಜರಾತಿನ ಸೂರತ್ ನಗರದಲ್ಲಿರುವ ಸಾಮಾಜಿಕ ಅಧ್ಯಯನ ಕೇಂದ್ರದ ಮಾಜಿ ನಿರ್ದೇಶಕರು ಮತ್ತು ರಾಜಕೀಯ ಶಾಸ್ತ್ರಜ್ಞ ಘನಶ್ಯಾಮದಾಸ್ ಶಹಾ ಮಂಡಿಸಿದ 'ಡಾರ್ವಿನ್‌ವಾದೀ ಅಭಿವೃದ್ಧಿ: ವಿನಾಶದತ್ತ ಒಂದು ಹಾದಿ' ಎಂಬ ಪ್ರಬಂಧದ ಅಂಕಿ-ಅಂಶಗಳು 'ಶ್ರೀಮಂತ' ಗುಜರಾತಿನ ಮಾನವ ಅಭಿವೃದ್ಧಿ ಸೂಚ್ಯಂಕಗಳು ಬಹಳ ಬಡವಾಗಿವೆ ಎಂಬುದನ್ನು ಬಿಂಬಿಸುತ್ತವೆ.

ಗುಜರಾತ್ ಬಹಳ ಬೇಗನೇ ಉದಾರೀಕರಣ ನೀತಿಯನ್ನು ಅಂಗೀಕರಿಸಿದ ಒಂದು ರಾಜ್ಯ. ಆದ್ದರಿಂದ ಆ ನೀತಿಯ ದುಷ್ಫಲಗಳೂ ಅಲ್ಲಿ ಬೇಗನೆ ಕಾಣಿಸಿಕೊಂಡಿವೆ. ಕೆಲವು ವಿಭಾಗಗಳ ಆದಾಯ ವಿಪರೀತ ಹೆಚ್ಚಿರುವುದು ನಿಜ. ಆದರೆ ಬಹುಪಾಲು ಜನರ ಆದಾಯ ಇಳಿದಿದೆ. ಗ್ರಾಮೀಣ ಶ್ರಮಿಕರ ತಲಾ ದಿನಗೂಲಿ ಕೇವಲ 35ರೂ. ಎನ್ನುತ್ತಾರೆ ಪ್ರೊ.ಶಹಾ. ದೇಶದಲ್ಲೇ ಅತಿ ಹೆಚ್ಚು ಸಂಖ್ಯೆಯಲ್ಲಿ ವಿಶೇಷ ಆರ್ಥಿಕ ವಲಯಗಳು ಇಲ್ಲಿ ತಲೆಯೆತ್ತುತ್ತಿವೆ. 'ಹೈರ್ ಅಂಡ್ ಫೈರ್' ನೀತಿ ಇಲ್ಲಿ ಧಾರಾಳವಾಗಿ ಜಾರಿಯಾಗುತ್ತಿದೆ, ಕಳೆದ ಹತ್ತು ವರ್ಷಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ಹತ್ತು ಪಟ್ಟು ಹೆಚ್ಚಿದೆ ಎನ್ನುತ್ತಾರೆ ಇವರು. ಲಿಂಗ ಅನುಪಾತ ಒಂದು ಸಮಾಜದ ಅಭಿವೃದ್ಧಿಯ ಒಂದು ಮುಖ್ಯ ಸೂಚ್ಯಂಕ. ಅದು ಗುಜರಾತಿನಲ್ಲಿ 884:1000 ಎಂಬುದು ನಿಜಕ್ಕೂ ಆಘಾತಕಾರಿ ಎನ್ನುತ್ತಾರೆ ಪ್ರೊ.ಶಹಾ.

ಇನ್ನೊಬ್ಬ ಅಧ್ಯಯನಕಾರರಾದ ರೂಕಿಯ ಜೌಹರ್ ಪ್ರಕಾರ ಪಶ್ಚಿಮ ಅಹಮದಬಾದಿನಲ್ಲಿ ಇದು ಇನ್ನೂ ಕಡಿಮೆ, 650:1000. ದಲಿತರ ಮೇಲೆ ದೌರ್ಜನ್ಯಗಳ ಪ್ರಮಾಣ ಹೆಚ್ಚಿದೆ, ಇನ್ನೊಂದೆಡೆ ರಾಜ್ಯದ ಪೋಲೀಸ್ ಪಡೆಯಲ್ಲಿ ಮುಸ್ಲಿಮರು, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳ ಸಂಖ್ಯೆ ಇಳಿಮುಖಗೊಳ್ಳುತ್ತಿದೆ ಎನ್ನುತ್ತಾರೆ ಇವರು.

ಪ್ರೊ. ಶಹಾ 1969ರಿಂದ ಗುಜರಾತಿನ ಕೋಮುಗಲಭೆಗಳ ಅಧ್ಯಯನ ನಡೆಸುತ್ತಿರುವವರು. ಈ ರಾಜ್ಯದಲ್ಲಿ ಸಮಾಜದ ಕೆಲವು ವಿಭಾಗಗಳನ್ನು ಅಭಿವೃದ್ದಿಯಿಂದ ದೂರವಿಡುವ ಪರಿಪಾಠ ಬಂದಿದ್ದು, ಗೋಧ್ರಾ ಘಟನೆಯ ನಂತರ ಅದು ತೀವ್ರಗೊಂಡಿದೆ, ಇದು ಈ ರಾಜ್ಯ ಅಂಗೀಕರಿಸಿದ ಆರ್ಥಿಕ ಮಾದರಿಯಲ್ಲೂ ಪ್ರತಿಬಿಂಬಿತವಾಗಿದೆ ಎಂದು ಅವರು ಹೇಳುತ್ತಾರೆ. ಅನ್ಹದ್ ನ ಅಧ್ಯಕ್ಷೆ ಶಬ್ನಂ ಹಾಶ್ಮಿಯವರು 2002 ರಿಂದ 2008ರ ನಡುವೆ ಮುಸ್ಲಿಮರ ವೃತ್ತಿಗಳಲ್ಲಿ ಆಗಿರುವ ಬದಲಾವಣೆಗಳನ್ನು ಗುರುತಿಸುತ್ತಾ, ಸ್ವಉದ್ಯೋಗಿಗಳ ಪ್ರಮಾಣ ಇಳಿಮುಖವಾಗಿದ್ದು ಮನೆಗೆಲಸ ಮತ್ತು ನಿಪುಣ ಇಲ್ಲದ ಕೆಲಸಗಳಲ್ಲಿ ತೊಡಗಿ ರುವವರ ಪ್ರಮಾಣ ಹೆಚ್ಚಿದೆ ಎನ್ನುತ್ತಾರೆ. ಇದು ಅಭಿವೃದ್ಧಿಯಂತೂ ಖಂಡಿತಾ ಅಲ್ಲ.

ಕರ್ನಾಟಕ, ತಮಿಳುನಾಡು, ಕೇರಳದಂತಹ ರಾಜ್ಯಗಳ ಇತಿಹಾಸದಲ್ಲಿ ಕಾಣುವ ಹಿಂದುಳಿದ ವರ್ಗಗಳ, ದಲಿತರ ಆಂದೋಲನಗಳು ಗುಜರಾತಿನ ಇತಿಹಾಸದಲ್ಲಿ ಕಾಣಸಿಗದು ಎನ್ನುವ ಪ್ರೊ. ಶಹಾ, ಕಾಂಗ್ರೆಸ್‌ನಂತಹ ಪಕ್ಷ ಕೂಡ ಇಲ್ಲಿ ಎಂದೂ ಜಾತ್ಯಾತೀತ ಪ್ರಶ್ನೆಗಳನ್ನು ಎತ್ತಿಕೊಂಡಿಲ್ಲ ಎಂದು ತಿಳಿಸಿದರು. ಇಂತಹ ರಾಜ್ಯದಲ್ಲಿ ತಲೆಯೆತ್ತಿದ ಈ 'ಮೋದಿ ಮಾದರಿ' ಕರ್ನಾಟಕಕ್ಕೆ ಮಾದರಿಯಾದೀತೇ?

ಅಹಮದಾಬಾದಿನಲ್ಲಿ ಅತ್ಯಂತ ಕೆಟ್ಟ ರೀತಿಯ ಪ್ರತ್ಯೇಕೀಕರಣವನ್ನು ಕಾಣುತ್ತಿರುವ ತನಗೆ ಬೆಂಗಳೂರಿನಂತಹ ನಗರದಲ್ಲಿನ ಸಾಂಸ್ಕೃತಿಕ ವೈವಿಧ್ಯತೆ ಮುದನೀಡಿದೆ ಎಂದು ಉದ್ಗರಿಸಿದ ಜಾಕಿಯ ಜೌಹರ್ ಈ ವೈವಿಧ್ಯತೆಯನ್ನು ಉಳಿಸಿಕೊಳ್ಳಿ ಎಂದು ಕರ್ನಾಟಕದ ಜನತೆಯನ್ನು ಆಗ್ರಹಿಸಿದರು.

ಗುಜರಾತಿನ ನಮ್ಮ ಗೆಳೆಯರು ಒದಗಿಸಿದ ಇನ್ನೂ ಕೆಲವು ಅಂಕಿ-ಅಂಶಗಳನ್ನು ನೋಡಿ:

- ಅಂಬಾನಿ ಮತ್ತು ಇತರ ನಾಲ್ಕು ಕೋಟ್ಯಾಧಿಪತಿಗಳಿಗೆ 45000 ಕೋಟಿ ರೂಪಾಯಿಗಳ ತೆರಿಗೆ ಪರಿಹಾರ ನೀಡಿರುವ ಮೋದಿ ಸರಕಾರ ಆ ಅಪಾರ ಕೊರತೆಯನ್ನು ತುಂಬಿಕೊಳ್ಳಲು ಏಶ್ಯನ್ ಬ್ಯಾಂಕ್ ಮತ್ತು ವಿಶ್ವ ಬ್ಯಾಂಕಿನಿಂದ 86000 ಕೋಟಿ ರೂಪಾಯಿಗಳ ಶರತ್ತು ಭರಿತ ಸಾಲಗಳನ್ನು ಮಾಡಿದೆ. ಮೋದಿ ಆಡಳಿತ 'ಐದು ಕೋಟಿ ಗುಜರಾತಿಗಳಿಗಾಗಿ ಅಲ್ಲ, ಐದು ಗುಜರಾತೀ ಕೋಟ್ಯಾಧಿಪತಿಗಳಿಗಾಗಿ' ಎಂಬುದೀಗ ಅಲ್ಲಿ ಮನೆಮಾತು!
- ಕಳೆದ ಏಳು ವರ್ಷಗಳಲ್ಲಿ ವಿದ್ಯುತ್ ದರಗಳನ್ನು ಏರಿಸಿಕೊಂಡು ಬರಲಾಗಿದೆ, ಗುಜರಾತ್ ವಿದ್ಯುತ್ ಮಂಡಳಿ ಉತ್ಪಾದಿಸುವ ವಿದ್ಯುತ್ ಪ್ರಮಾಣ 70ಶೇ.ದಿಂದ 40ಶೇ.ಕ್ಕೆ ಇಳಿದಿದೆ.
- 1,07,000 ಸಣ್ಣ ಉದ್ದಿಮೆ ಘಟಕಗಳು ಮುಚ್ಚಿವೆ, 12 ಲಕ್ಷ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಅಲ್ಲೀಗ ಕಾಂಟ್ರ್ಯಾಕ್ಟುದಾರರದ್ದೇ ಕಾರುಬಾರು! 78 ಜವಳಿ ಗಿರಣಿಗಳು ಮುಚ್ಚಿವೆ. ಉದ್ಯೋಗವಿಲ್ಲದ ಈ ಜವಳಿ ಕಾರ್ಮಿಕರಿಗೆ ಬಿಪಿಎಲ್ ಕಾರ್ಡುಗಳೂ ಇಲ್ಲ. ಕೋಮು ಹತ್ಯಾಕಾಂಡದಲ್ಲಿ ನಿರಾಶ್ರಿತರಾದ ಒಂದು ಲಕ್ಷಕ್ಕಿಂತಲೂ ಹೆಚ್ಚು ಅಲ್ಪಸಂಖ್ಯಾತರಿಗೂ ಬಿಪಿಎಲ್ ಕಾರ್ಡುಗಳಿಲ್ಲ.
- ಭೂಹೀನರ ಸಂಖ್ಯೆ ಕಳೆದ ಹತ್ತೇ ವರ್ಷಗಳಲ್ಲಿ 31ಲಕ್ಷದಿಂದ 51ಲಕ್ಷಕ್ಕೆ ಏರಿದೆ. ಹೊಸ ಅರಣ್ಯ ಕಾಯಿದೆ ಜಾರಿಗೆ ಬಂದ ಮೊದಲ ದಿನವೇ ಮೋದಿ ಸರಕಾರ ಸಬರ್ಕಾಂತಾ ಅರಣ್ಯದ ಮೂಲನಿವಾಸಿ ಆದಿವಾಸಿಗಳನ್ನು ರಕ್ಷಿಸುವ ಬದಲು, ಅವರು ಅತಿಕ್ರಮಣಕಾರರು ಎಂದು ಹೊರದಬ್ಬಿತು, ಮೂವರು ಆದಿವಾಸಿಗಳನ್ನು ಗೋಳೀಬಾರಿ ನಲ್ಲಿ ಸಾಯಿಸಲಾಯಿತು.
- ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ತ್ವರಿತವಾಗಿ ಖಾಸಗೀಕರಿಸಲಾಯಿತು, ಅವೀಗ ಪ್ರಮುಖ ವ್ಯಾಪಾರಗಳು, ಸೇವೆಗಳಲ್ಲ. ಕೆಡಿಲ್ಲ, ಎಸ್ಸಾರ್ ನಂತಹ ಕಂಪನಿಗಳು ಆಸ್ಪತ್ರೆಗಳನ್ನು ವಹಿಸಿಕೊಂಡಿವೆ. ಪಟಾಣ್ ಎಂಬಲ್ಲಿ ಬಿಜೆಪಿ ಶಿಕ್ಷಣ ಮಂತ್ರಿ ಆನಂದೀಬೇನ್ ನಡೆಸುತ್ತಿರುವ ಕಾಲೇಜಿನಲ್ಲಿ ಹುಡುಗಿಯರ ಮೇಲೆ ಅಧ್ಯಾಪಕರಿಂದ ಲೈಂಗಿಕ ಹಲ್ಲೆಗಳ ಹಗರಣ ಬಯಲಾಗಿದ್ದು ಸಾರ್ವಜನಿಕರ ಆಕ್ರೋಶದಿಂದಾಗಿ ಕಾಲೇಜನ್ನು ಮುಚ್ಚಲಾಗಿದೆ.

2007ರ ಚುನಾವಣೆಗಳಲ್ಲಿ 2002ರ ಗುಜರಾತ್ ಹತ್ಯಾಕಾಂಡದ ಕಳಂಕದಿಂದ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸಲು ಮೋದಿಯವರು ಅಭಿವೃದ್ಧಿಯ ಪ್ರಶ್ನೆಯನ್ನು ಪ್ರಚಾರ ಮಾಡಲಾರಂಭಿಸಿದರು. ಆದರೆ ಅದರಿಂದ ಪ್ರಯೋಜನವಾಗದು ಎಂದು ಕಂಡಾಗ ಮತ್ತೆ ಜನಗಳನ್ನು ವಿಭಜಿಸುವ ವೋಟ್ ಬ್ಯಾಂಕ್ ರಾಜಕೀಯದ, ಬಿಜೆಪಿಯ 'ಬಚ್ಚಿಟ್ಟ ಅಜೆಂಡಾ' ದ ಮೊರೆ ಹೊಕ್ಕರು. ಅಲ್ಲಿಯೇ ಸಲ್ಲದ ಗುಜರಾತಿನ ಅಭಿವೃದ್ಧಿಯ ಪ್ರಶ್ನೆ ಇಲ್ಲಿ ಸಲ್ಲುತ್ತದೆಯೇ? ಹೀಗಿರುವಾಗ ಕರ್ನಾಟಕವನ್ನು ಗುಜರಾತ್ ಮಾಡುವ ತಾಕತ್ತಿದೆಯೇ ಎನ್ನುವ ಮೋದಿ ಸವಾಲು ಕಾಂಗ್ರೆಸಿಗರಿಗೋ ಅಥವಾ ಬಚ್ಚಿಟ್ಟ ಅಜೆಂಡಾವನ್ನು ಕರ್ನಾಟಕದಲ್ಲಿ ಜಾರಿ ಮಾಡುವ ತಾಕತ್ತಿದೆಯೇ ಎಂದು ಇಲ್ಲಿನ ತಮ್ಮವರನ್ನೇ ಅವರು ಕೇಳುತ್ತಿದ್ದಾರೆಯೇ? ○

# ಬುಷ್ ಉವಾಚ : 'ನಮ್ಮ ಸಮೃದ್ಧಿಗೆ ನೀವು ಉಪವಾಸ ಮಾಡಿ'!

ಅಮೆರಿಕಾದ ಅಧ್ಯಕ್ಷ ಜಾರ್ಜ್ ಬುಶ್ ಈಗಿನ ಜಾಗತಿಕ ಅಹಾರ ಬಿಕ್ಕಟ್ಟಿಗೆ ಭಾರತ ಮತ್ತು ಚೀನಾದಲ್ಲಿ ಆಹಾರ ಬಳಕೆ 'ಹೆಚ್ಚಾಗಿರುವುದು' ಕಾರಣ ಎಂದು ದೂರುವ ಪ್ರಯತ್ನ ಮಾಡಿದ್ದಾರೆ. ಯುರೋಪಿಯನ್ ಒಕ್ಕೂಟವೂ ಅದೇ ರಾಗ ಹಾಡಿದೆ. ಇದು ಕೇವಲ ವಿವೇಕಹೀನ ಒದರಾಟ ಎಂದು ಸುಮ್ಮನಾಗುವಂತಿಲ್ಲ. ಇದಕ್ಕೆ ಮೊದಲು ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಕೊಂಡೊಲೀನಾ ರೈಸ್ ಭಾರತ ಮತ್ತು ಚೀನಾದ ಆಹಾರ ಬಳಕೆ ಉತ್ತಮಗೊಂಡಿರುವುದು ಈ ಬಿಕ್ಕಟ್ಟಿಗೆ ಪ್ರಮುಖ ಕಾರಣ ಎಂದು ಆರಂಭ ಮಾಡಿದ್ದರು. ವಾಸ್ತವವಾಗಿ ಇವೆಲ್ಲ ಪ್ರಸಕ್ತ ಜಾಗತಿಕ ಆಹಾರ ಬಿಕ್ಕಟ್ಟಿನ ನಿಜವಾದ ಕಾರಣಗಳನ್ನು ಮರೆಮಾಚುವ ಪ್ರಯತ್ನಗಳು. ಏಕೆಂದರೆ ಈ ಬಿಕ್ಕಟ್ಟಿಗೆ ಪ್ರಧಾನ ಕಾರಣಗಳು ಎರಡು: ಒಂದು, ಪಾಶ್ಚಿಮಾತ್ಯ ದೇಶಗಳಲ್ಲಿ ಜೈವಿಕ ಇಂಧನದತ್ತ ದೊಡ್ಡ ಪ್ರಮಾಣದಲ್ಲಿ ಆಹಾರ ಬೆಳೆಗಳನ್ನು ತಿರುಗಿಸಿರುವುದು ಹಾಗೂ ಎರಡು, ಆಹಾರಧಾನ್ಯಗಳ ವ್ಯಾಪಾರದಲ್ಲಿ ಸಟ್ಟಾಕೋರತನ. ಇದಂತೂ ಸಾಮ್ರಾಜ್ಯಶಾಹೀ ಜಾಗತೀಕರಣದ ಜೀವಾಳ.

**ಇದೊಂದು ಕೇವಲ ವಿವೇಕಹೀನ ಒದರಾಟವಲ್ಲ, ಸಾಮ್ರಾಜ್ಯಶಾಹೀ ಜಾಗತೀಕರಣದ ಹೊಲಸು ಮುಖವನ್ನು ಮುಚ್ಚಲು ಅದಕ್ಕೊಂದು ಮುಖವಾಡ ತೊಡಿಸುವ ಪ್ರಯತ್ನ ಇದು.**

ಈ ಟಿಪ್ಪಣಿಗಳು ಹಾಸ್ಯಾಸ್ಪದ ಮಾತ್ರವೇ ಅಲ್ಲ, ಕೈಗಾರಿಕೀಕೃತ ಪಾಶ್ಚಿಮಾತ್ಯರ ಸಮೃದ್ಧಿಯ ಮಟ್ಟಗಳು ಅಭಿವೃದ್ಧಿಶೀಲ ಜಗತ್ತಿನ ಬಡತನ ಮತ್ತು ಅಪೌಷ್ಟಿಕತೆಯ ಮೇಲೆ ನಿಂತಿವೆ ಎಂದು ಈ ಮೂಲಕ ಅವರು ಯಾವ ನಾಚಿಕೆಯೂ ಇಲ್ಲದೆ ಒಪ್ಪಿಕೊಂಡಂತಾಗಿದೆ. ಶತಮಾನಗಳ ಕಾಲ ವಸಾಹತುಶಾಹಿಯ ಮೂಲಕ ಕೊಳ್ಳೆ ಹೊಡೆದ ಮೇಲೆ, ಈಗ ಪ್ರಸಕ್ತ ಸಾಮ್ರಾಜ್ಯಶಾಹೀ ಜಾಗತೀಕರಣದ ಘಟ್ಟದಲ್ಲಿ ಅಂತಹುದೇ ಕೊಳ್ಳೆಯ ಮೂಲಕ ಇನ್ನು ಮುಂದೆಯೂ ತಮ್ಮ ಕೊಬ್ಬು ಬೆಳೆಸಿಕೊಳ್ಳುವ ಹುನ್ನಾರ ಅವರದ್ದು. ಅಸಮಾನತೆಗಳನ್ನು ತೀವ್ರವಾಗಿ ಹೆಚ್ಚಿಸುವುದು ಈ ಜಾಗತೀಕರಣದ ಜೀವಾಳ ತಾನೇ?

"ನಾನು ಹೇಳ್ತಿದ್ದೇನೆ ನೀವು ಮತ್ತು ಚೀನಾದವರು ಸ್ವಲ್ಪ ಕಡಿಮೆ ತಿನ್ನಿ. ಇಲ್ಲಿ ನಮಗೆ ಆಹಾರದ ಬೆಲೆಗಳೆಲ್ಲಾ ಏರುತ್ತಿವೆ"




ಕೃಪೆ: ದಿ ಹಿಂದೂ

### ಐದು ಪಟ್ಟು ತಿನ್ನುವವರು ಯಾರು?

ಇರಲಿ, ಮೊದಲು ಕೆಲವು ಸಂಗತಿಗಳನ್ನು ಗಮನಿಸೋಣ. ಅಮೆರಿಕನ್ ಕೃಷಿ ಇಲಾಖೆಯ ಪ್ರಕಾರ ಅಮೆರಿಕನ್ನರು ತಲಾ 1046ಕೆಜಿ ಧಾನ್ಯಗಳನ್ನು ತಿನ್ನುತ್ತಾರೆ. ಭಾರತೀಯರು ತಲಾ 178ಕೆಜಿ. ಅಂದರೆ ಅಮೆರಿಕನ್ನರು ಐದು ಪಟ್ಟು ಹೆಚ್ಚು ತಿನ್ನುತ್ತಾರೆ. ಅಲ್ಲಿ ತಲಾ 45.4ಕೆಜಿ ಕೇವಲ ಕೋಳಿ ಮಾಂಸದಂತಹ ಮಾಂಸಾಹಾರ ತಿಂದರೆ ಭಾರತದಲ್ಲಿ ಇದು ಕೇವಲ 1.9ಕೆಜಿ. ಹೀಗಿರುವಾಗ ಹೆಚ್ಚು ತಿನ್ನುತ್ತಿರುವವರು ನಿಜವಾಗಿ ಯಾರು?

ಆಹಾರ ಬೆಲೆಯುಬ್ಬರದ ಒಂದು ಅಲೆ ಇಡೀ ಜಗತ್ತನ್ನು ವ್ಯಾಪಿಸಿದೆ. ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮ(ಡಬ್ಲ್ಯುಎಫ್‌ಪಿ) ಜಗತ್ತಿನ ಅತಿ ದೊಡ್ಡ ಆಹಾರ ನೆರವು ಹಂಚುವ ವ್ಯವಸ್ಥೆ. ಅದು ಈಗಿನ ಪರಿಸ್ಥಿತಿಯನ್ನು 'ನಿಶ್ಶಬ್ದ ಸುನಾಮಿ' ಎಂದು ವರ್ಣಿಸುತ್ತದೆ. ದಿ ಇಕನಮಿಸ್ಟ್ ಪತ್ರಿಕೆಯ ಪ್ರಕಾರ ವಿಶ್ವಾದ್ಯಂತ ಹಲವೆಡೆ ಆಹಾರ ದಂಗೆಗಳು ಭುಗಿಲೇಳುತ್ತಿವೆ. ಹಣದುಬ್ಬರ ಕೋಟಿ-ಕೋಟಿ

ಪುಟ 11 ಕ್ಕೆ

# ನೈತಿಕತೆ ಇಟ್ಟ ಮೊಟ್ಟೆಗಳು ಇವರು

ಆರ್.ರಾಮಕೃಷ್ಣ

ಲೇಹಾ! ಬಾಯಿ ಬಿಟ್ಟರೆ ಸಾಕು, ನೈತಿಕತೆ, ಪ್ರಾಮಾಣಿಕತೆ, ಸತ್ಯ, ನ್ಯಾಯ ಅಂತಲೇ ಉಲಿಯುವ ಭಾರತೀಯ ಜನತಾ ಪಕ್ಷದ ಸತ್ಯ ನ್ಯಾಯ, ನೈತಿಕತೆಯ ನಿಜವಾದ ಮುಖಗಳನ್ನು ಬಯಲಿಗೆಳೆಯುವ ಹಲವು ಘಟನಾವಳಿಗಳು ಅನಾವರಣಗೊಳ್ಳುತ್ತಲೇ ಇವೆ.

ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆಯಾದ ಮತದಾರರು, ಮುಂತಾದವರು ಗಂಟೆ ಗಟ್ಟಲೆ ಬಿಸಿಲು ಮಳೆಯಲ್ಲಿ ಫೋಟೋ ಇರುವ ಗುರುತು ಪತ್ರವನ್ನು ಪಡೆದುಕೊಳ್ಳಲು ಸಾಲಿನಲ್ಲಿ ಕಾದು ನಿಂತಿದ್ದಾರೆ. ಅಲ್ಲಿ ಅಧಿಕೃತ ಕೌಂಟರ್‌ನಲ್ಲಿ ಏನೇನೋ ಸಮಸ್ಯೆಗಳು, ವಿಳಂಬ ಪಾಪ ಅವರಿಗೆ ಗೊತ್ತೇ ಇಲ್ಲ-ಬೆಂಗಳೂರಿನ ಮೈಕೋ ಬಡಾವಣೆಯ ನಮ್ಮ ಬಿಜೆಪಿಯ ಕಾರ್ಯಕರ್ತರನ್ನು ಭೇಟಿಯಾದರೆ ಚುನಾವಣಾ ಆಯೋಗದವರು ಕೊಡುವುದೇನು, ಅದರ ತಲೆಯ ಮೇಲೆ ಹೊಡೆಯವಂತಹ ಗುರುತಿನ ಚೀಟಿಯನ್ನು ಅವರೇ ತಯಾರಿಸಿ ಕೊಡುತ್ತಾರೆ. ನಿಮ್ಮದೇನು ಈಗಾಗಲೇ ಸತ್ತು ಸುಣ್ಣವಾಗಿರುವ ನಿಮ್ಮ ಬಂಧುಗಳ ಹೆಸರಿಗಾದರೂ ಸರಿಯೇ ಗುರುತಿನ ಚೀಟಿ ಕೊಟ್ಟೇ ಬಿಡುತ್ತಾರೆ. ಒಂದೇ ಷರತ್ತು.


ಸಿಕ್ಕಿಬಿದ್ದ ಬಿಜೆಪಿಯ ಅಕ್ರಮ ಅಕ್ಕಿ ಸಂಗ್ರಹ

ಏನಪ್ಪಾ ಅಂದರೆ ನೀವು ಅರಳಿರುವ ಕಮಲಕ್ಕೆ ಓಟು ಹಾಕುತ್ತೀರಿ ಅನ್ನೋದು ಖಾತ್ರಿ ಆಗಬೇಕು. ಇವರೇನು ಸಾಮಾನ್ಯ ಅನ್ನೋಬೇಡಿ ಅಧಿಕೃತವಾಗಿ ಗುರುತಿನ ಪತ್ರ ಕೊಡ್ತಾರಲ್ಲ. ಏಜೆನ್ಸಿಯವರು. ಅವರ ಬಳಿ ಕೆಲಸ ಮಾಡೋ ನೌಕರರನ್ನು ಜೊತೆಗೆ ಕರ್ಕೊಂಡಿದ್ದಾರೆ. ಪಕ್ಕಾ ಕಸುಬದಾರರೇ. ವಿಳಾಸಬೇಕಾ ಅದೇ ಶ್ರೀನಿವಾಸ ಚಿತ್ರಮಂದಿರ ಪಕ್ಕ, ರಾಘವೇಂದ್ರ, ದಿನೇಶ್, ಶಿವಕುಮಾರ, ಅ.ಸುರೇಶ ಅಂತ. ಓ ಸ್ಸಾರಿ ಈಗ ಹುಡುಕ್ಕೊಂಡು ಹೋಗ್ಬೇಡಿ. ಅವರನ್ನು ನಮ್ಮ ಪೋಲೀಸು ಮಾವಂದಿರು ಕರಕೊಂಡು ಹೋಗಿದ್ದಾರೆ. ರಾಘವೇಂದ್ರರ ಥರಾ ಮತ್ಯಾರಾದ್ರೂ ಸಿಕ್ಕರೆ ಖಂಡಿತಾ ತಿಳಿಸ್ತೇವೆ. ಉಪಯೋಗ ಪಡಕೊಳೋರಂತೆ.

ಬಾಬರಿ ಮಸೀದಿ ಕೆಳಗೆ ಇದೇ ಅನ್ನೋ ರಾಮಮಂದಿರದ ಸಾಕ್ಷ್ಯ ತೋರಿಸೋದಕ್ಕೆ ದೇವಾಲಯದ ನಕಲಿ ಸ್ಥಂಭ, ನಕಲಿ ಚಾರಿತ್ರಿಕ ದಾಖಲೆ ಸೃಷ್ಟಿಸಿದವರಿಗೆ ಇದ್ಯಾವ ಲೆಕ್ಕ ಅಲ್ಲವೇ?

**'ಲಾಡು' ಮತ್ತು ಸಂಪ್ರದಾಯ**

ಹಾಗೇ ನೀವು ಸ್ವಲ್ಪ ಈ ಕಡೆ ತಿರುಗಿ ನೋಡಿದರೆ ರಾಜಾಜಿನಗರ ಕ್ಷೇತ್ರದಲ್ಲಿ ಸುಮಾರು 41 ಸಾವಿರ ರೂಪಾಯಿಗಳನ್ನು ಪೋಲಿಸು ಮಾವಂದಿರು ವಶಕ್ಕೆ ತಗೊಂಡಿದ್ದಾರೆ. ಯಾಕೆ ಅಂತೀರಾ ಮತದಾರ ಬಂಧುಗಳಿಗೆ ಮತ ಹಾಕೋದಕ್ಕೆ ಪ್ರತಿಫಲವಾಗಿ ಉಡುಗೊರೆ ಕೋಡೊದಕ್ಕೆ 500 ರೂ.ಗಳ ನೋಟನ್ನು ವಿತರಣೆ ಮಾಡ್ತಾ ಇದ್ದರಂತೆ. ಈ ಹಣದ ಜೊತೆ ಬಿಜೆಪಿಯ ಕರಪತ್ರ ಬಾವುಟ ಎಲ್ಲಾ ಸಿಕ್ಕಿದೆ. ಸ್ವಲ್ಪ ತಡವಾಗಿ ಪೋಲೀಸರು ಬಿಜೆಪಿ ಸ್ಥಳೀಯ ಮುಖಂಡರನ್ನೂ


ನಕಲಿ ಪಾಸ್ ಸೃಷ್ಟಿಕರ್ತ ಬಿಜೆಪಿ ಕಾರ್ಯಕರ್ತ

ಬಂಧಿಸಿದ್ದಾರೆ. ಈ ರೀತಿ ದುಡ್ಡು ಚೆಲ್ಲೋದು ಒಂದು ಪದ್ಧತಿ, ಸಂಪ್ರದಾಯವೇ ಆಗಿ ಬಿಟ್ಟಿದೆ. ಅದರಲ್ಲೂ ಬಳ್ಳಾರಿ, ಆಂಧ್ರದಂತಹ ಕಡೆ ಅದು ವ್ಯಾಪಕವಾಗಿಬಿಟ್ಟಿದೆ. ಅದನ್ನು ಹೇಗೆ ಬಿಡೋಕಾಗುತ್ತೆ ಅಂತ ಕೇಳ್ತಾರಂತೆ ನಮ್ಮ ಬಳ್ಳಾರಿಯ ಕಾಂಗ್ರೆಸ್ ಅಭ್ಯರ್ಥಿ ಅನಿಲ್ 'ಲಾಡು' ಅವರು. ಅವರು ಈಗ ಕಾಂಗ್ರೆಸ್ ಅಷ್ಟೇ. ಇಷ್ಟು ದಿನ ಅವರು ಬಿಜೆಪಿಯಲ್ಲಿ ಇದ್ರು ಅನ್ನೋದನ್ನ ಯಾರಾದ್ರೂ ಸುರೇಶ್ ಕುಮಾರ್‌ರಿಗೆ ನೆನಪಿ ಮಾಡಿಕೊಟ್ಟರೆ ಸ್ವಲ್ಪ ಒಳ್ಳೆಯದೇನೋಪ್ಪ.

ಯಾಕಂದ್ರೆ ಅವರು ಬಿಜೆಪಿಯೋರು ಹಣ ಹಂಚಿಲ್ಲ ಅಂತಾರಂತೆ.

ಬೆಂಗಳೂರಿನ ಬಿಟಿಎಂ ಬಡಾವಣೆ ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ 'ಪ್ರಸಾದ' ರೆಡ್ಡಿಯವರಿಗೆ ಸೇರಿದ ಒಂದು ಲಾರಿ ಸೀರೆಯನ್ನು ವಶಪಡಿಸಿಕೊಳ್ಳಲಾಗಿದೆ. ಸೀರೆ ಅಂದರೆ ಅದು ಅಂತಿಂಥಾ ಸೀರೆ ಅಲ್ಲ. ಎಲ್ಲಾ ಜರತಾರಿ ರೇಷ್ಮೆಯ ಸೀರೆಗಳೇ! ಎಷ್ಟಾದರೂ ಬಿಜೆಪಿ ಪಕ್ಷದವರಲ್ಲವೇ?

ಚುನಾವಣೆಯ ದಿನ ಬೆಂಗಳೂರಿನ ಹೆಬ್ಬಾಳ ಕ್ಷೇತ್ರದಲ್ಲಿ ಬಿಜೆಪಿ ಪರವಾಗಿ ಮತ ಚಲಾಯಿಸಲೆಂದು ಆಂಧ್ರ ಪ್ರದೇಶದಿಂದ ಕರೆ ತಂದಿದ್ದ ನಕಲಿ ಮತದಾರರನ್ನು ಪೊಲೀಸರು ಬಂಧಿಸಿದ್ದಾರೆ. ರಾಯಚೂರು ಜಿಲ್ಲೆಯ ಬಾವಿದೊಡ್ಡಿ ಗ್ರಾಮದಲ್ಲಿ ಅಲ್ಲಿನ ಬಿಜೆಪಿ ಅಭ್ಯರ್ಥಿಯ ಪರವಾಗಿ ಊಟ ತಿಂಡಿ ವ್ಯವಸ್ಥೆ ಮಾಡಿದ್ದು ಸಾಲದು ಅಂತ 'ತೀರ್ಥ'ಕ್ಕಾಗಿ ವ್ಯವಸ್ಥೆ ಮಾಡಿದ್ದನ್ನು ಪೊಲೀಸರು ಹಿಡಿದಿದ್ದಾರೆ. ಸದ್ಯ ಅದು ರಾಮರಸ ಅಂತ ಯಾರೂ ವಾದ ಮಾಡಿಲ್ಲ. ಇಂಥದ್ದೆಲ್ಲಾ ಬೇರೆ ಪಕ್ಷದಲ್ಲಿ ಇಲ್ವಾ ಅಂತ ಯಾರ್‍ಯಾದ್ರೂ ಕೇಳಬಹುದು. ಇದೆ ಆದ್ರೆ ಇಷ್ಟಿಲ್ಲಾ. ಮತ್ತು ನೈತಿಕತೆ ಬಗ್ಗೆ ಬೇರೆ ಯಾರು ಭಾಷಣ ಮಾಡಲ್ವಲ್ಲ!!

# ಪುಲಿಕೇಶಿ ನಗರದ ವೀರಾಗ್ರಣಿ

ಬೆಂಗಳೂರು ನಗರದಲ್ಲಿ ಒಂದು ಹೊಸ ಕ್ಷೇತ್ರ-ಪುಲಿಕೇಶಿನಗರ ಅಂತ. ಪುಲಿಕೇಶಿ ಅಂದರೆ ನಿಮಗೆ ಏನು ನೆನಪಾಗುತ್ತೆ? ಇಮ್ಮಡಿ ಪುಲಿಕೇಶಿ ತಾನೆ. ಅದೇ ಹರ್ಷನನ್ನು ಸೋಲಿಸಿದ ವೀರಾಗ್ರಣಿ. ಇರಲಿ ಈ ಕ್ಷೇತ್ರದಲ್ಲೂ ಒಬ್ಬ ವೀರ ಇದ್ದಾನೆ. ಈ ವೀರನ ಹೆಸರು ಮೈಲಾರಪ್ಪ ಅಂತ. ಈ ಮೈಲಾರಪ್ಪನ ಮಹಿಮೆ ಅಂತಿಂಥದ್ದಲ್ಲ. ಭಾರೀ ಮಹಿಮೆ ಇರೋ ಮನುಷ್ಯ ಈತ. ಸುಮ್ನೆ ಅಲ್ಲ. ಈ ಮೈಲಾರಿ ಮಹಾತ್ಮೆ ಕೇಳಿದವರ ಕೇಳಿಸಿದವರ ಅಕೌಂಟಿಗೆ ಬಾರಿ ಪುಣ್ಯ ಜಮಾ ಆಗುತ್ತೆ. ನಮ್ಮ ಬೆಂಗಳೂರು ಮತ್ತು ಅಕ್ಕಪಕ್ಕ ಜಿಲ್ಲೆಗಳಲ್ಲೆಲ್ಲಾ ಬಾರಿ ಸುದ್ದಿ ಐತೆ. ಈ ಮೈಲಾರಿ ಮಹಾತ್ಮೆ ಕೇಳದವರು ನಿಜಕ್ಕೂ ಪಾಪಿಗಳು!

**ಮೈಲಾರಿ ಮಹಾತ್ಮೆ:** ಈ ಮನುಷ್ಯನ ಪೂರ್ಣ ಹೆಸರು ಪ್ರೊ: ಮೈಲಾರಪ್ಪ ಅಂತ. ಬಹುಶಃ ಮತ ಪತ್ರದಲ್ಲೂ ಹಾಗೇನೇ ಪ್ರಿಂಟಾಗಿ ಬರಬಹುದು. ಆದರೆ ಈಗ ಅವರನ್ನು ಪ್ರೊಫೆಸರ್ ಅನ್ನಬೇಕಾ ಬೇಡವಾ ಅನ್ನೋದು ಒಂದು ವಿವಾದವೇ. ಎಷ್ಟೋ ಜನ ಐಪಿಎಸ್‌ಗಳು, ಐಎಎಸ್‌ಗಳು ನಿವೃತ್ತಿ ಆದ ಮೇಲೆ ಅಥವಾ ನಿವೃತ್ತಿ ತಗೊಂಡು ರಾಜಕೀಯ ಸೇರಿದ್ದನ್ನು ನೋಡಿದ್ದೇವೆ. ಇವರದ್ದು ಇನ್ನೂ ಡಿಫರೆಂಟು. ಬೆಂಗಳೂರು ವಿಶ್ವ ವಿದ್ಯಾಲಯಯ ಇತ್ತೀಚಿಗೆ ಇವರನ್ನು ವಜಾ ಮಾಡೇ ಬಿಟ್ಟಿತು. ಏನು ಕಾರಣ? ಪ್ರೊಫೆಸರ್ ಇರಲಿ, ವಿಶ್ವ ವಿದ್ಯಾಲಯದಲ್ಲಿ ಪಾಠ ಮಾಡೋದಕ್ಕೆ ಬೇಕಾದ ಕನಿಷ್ಠ ಅರ್ಹತೇನೂ ಇಲ್ಲ ಇವರಿಗೆ ಅನ್ನೋದು ಕಾರಣ. ಮತ್ತೆ ಕನಿಷ್ಠ ಅರ್ಹತೆ ಇಲ್ಲದೆ ಯೂನಿವರ್ಸಿಟಿಗೆ ಸೇರ್ಕೊಂಡಿದ್ದಾದರೂ ಹೇಗೆ? ಅದನ್ನೇ ನಾವು ಮೈಲಾರಿ ಮಹಾತ್ಮೆ ಮೈಲಾರಿ ಮಹಿಮೆ ಅನ್ನೋದು.



ಒಂದು ಸಾರಿ ಏನಾಗ್ಹೋಯ್ತು ನೋಡಿ ನಮ್ಮ ಟಿ.ವಿ.9ನವರಿಗೆ ಹೇಗೆ ವಾಸನೆ ಬಡೀತೋ ಏನೋ, ಅವರು ಸೀದಾ ಬೆಂಗಳೂರು ವಿ.ವಿ. ಕ್ಯಾಂಪಸ್‌ಗೆ ಬಂದು ಮೈಲಾರಪ್ಪನವರ ಶಿಷ್ಯರೊಬ್ಬರಿಗೆ ಅಟಕಾಯಿಸಿಕೊಂಡು ಬಿಟ್ಟರು.

ಆ ಶಿಷ್ಯರೋ ಸಮಾಜಶಾಸ್ತ್ರದ ವಿಷಯದಲ್ಲಿ ಸಂಶೋಧನೆಯನ್ನೇ ಮಾಡಿ ಪ್ರಬಂಧ ಮಂಡಿಸಿ ಪಿಹೆಚ್‌ಡಿ ಪದವಿ ಪಡಕೊಂಡವರು. ಟಿವಿ9 ನವರು ಕೇಳಿದ್ದಿಷ್ಟೆ -ನೀವು ಸಲ್ಲಿಸಿರೋ ಸಂಶೋಧನಾ ಪ್ರಬಂಧದಲ್ಲಿನ 'ಯಾವುದಾದರೂ' ವಿಷಯದ ಬಗೆಗೆ ಒಂದೆರಡು ನಿಮಿಷ 'ಏನಾದರೂ' ಹೇಳಿ, ಮಾತಾಡಿ. ಉಹುಂ ಹೇಳೋದಕ್ಕೆ ಅಗ್ತಾ ಇಲ್ಲ ಅವರಿಗೆ ಪಾಪ. ತಾನೇ ಮಂಡಿಸಿರೋ ಸಂಶೋಧನಾ ಪ್ರಬಂಧದ ಬಗೆಗೆ ಒಂದು ವಾಕ್ಯ ಕೂಡ ಮಾತನಾಡಲಾರದ ಮನುಷ್ಯನಿಗೆ ಪಿ.ಹೆಚ್.ಡಿ. ಪದವಿ ಸಿಕ್ಕಿದ್ದಾದರೂ ಹೇಗೆ? ಅದೇ ನೋಡಿ ಮೈಲಾರಿ ಮಹಾತ್ಮೆ.

ಆ ಮೇಲೆ ಆ ಮೈಲಾರಿ ಶಿಷ್ಯ ಬಂದು ಸೀದಾ ತಮ್ಮ ಗುರುಗಳ ಪಾದಕ್ಕೆ ಬಿದ್ದು ಕಾಪಾಡಿ ಅಂದ. ಗುರುಗಳೂ ಅಷ್ಟೇ- ಟಿವಿಯವರಿಗೆ 'ಬೇರೆ ಬೇರೆ ಕಡೆ ಏನೇನೋ ಅನ್ಯಾಯ ಅಕ್ರಮ ನಡೀತಾ ಇದೆ, ಅದನ್ನೆಲ್ಲಾ ಬಿಟ್ಟು ಹಳ್ಳಿ ಹುಡುಗನ ಹಿಂದೆ ಬಿದ್ದಿದ್ದೀರಿ' ಅಂದ್ರೆ ಹೊರತು, ತಮ್ಮ ಶಿಷ್ಯನಿಗೆ ತನ್ನ ಅಮೋಘ ಸಂಶೋಧನೆಯ ಬಗೆಗೆ ಒಂದು ಅಕ್ಷರನಾದ್ರೂ 'ಬಾಯಿ ಬಿಡೋ ಶಿಷ್ಯ' ಅನ್ನಲಿಲ್ಲ. ಈ ಯಪ್ಪಾ ವಿ.ವಿ.ಯಲ್ಲಿದ್ದಾಗ "ನಾನೇ ರೀ ಅವರನ್ನ ವಿ.ಸಿ. ಮಾಡಿದ್ದು..." ಅಂತ "ನಾನೇ ರೀ ವಿ.ಸಿ. ಅವ್ರು ಸುಮ್ನೆ ಅಲ್ಲಿ ಕೂತಿರೋದು. ಅದೇನ್ ವಿಷ್ಯ ನನ್ ಹತ್ರಾನೆ ಹೇಳ್ರಿ" ಅಂತ ಕೆಲವು ಸಾರಿ ಮಾತಾಡ್ತಾ ಇದ್ದದ್ದನ್ನ ಕೇಳಿ ಹಲವಾರು ಕಿವಿಗಳು ಪಾವನ ಆಗ್ತಿದಾವೆ.

"ಅವರನ್ನ ವಿ.ಸಿ. ಮಾಡೋದಕ್ಕೆ... ಲಕ್ಷ ಖರ್ಚು ಮಾಡಿದ್ದೀನ್ರಿ...." ಅಂತ ಈ ಮನುಷ್ಯ ಹೇಳ್ಕೊಂಡ್ತಾ ತಿರುಗುತ್ತಿದ್ದದನ್ನು ಕೇಳಿ, ನೋಡಿದವರು ಇದಾರೆ ಅಂದ್ರೆ ಯೋಚ್ನೆ ಮಾಡಿ.

ಈ ಯಪ್ಪನ ಹಿಂದೆ ಯೂನಿವರ್ಸಿಟಿಲೀ ಯಾರ್‍ಯಾರೋ ಹುಡುಗ್ರು ಸುತ್ತಾಡ್ತಾ ಇದ್ರು. ಏನೇನೋ ಕೆಲಸಗಳಿಗೆ. 'ಮರ್ಯಾದಸ್ಥರು, ಸಂಭಾವಿತರು "ಅಯ್ಯೋ ನಮಗ್ಯಾಕಪ್ಪಾ ಇದರ ಸಮಾಚಾರ" ಅಂತ ಸುಮ್ನೆ ಇರ್ತಾ ಇದ್ರು- ಇನ್ನು ಕೆಲವರಿಗೆ ಹಾಗೆ ಸುಮ್ನೆ ಇರೋದಕ್ಕೆ ಆಗ್ತಾ ಇರಲಿಲ್ಲ. ಚಡಪಡಿಸ್ತಾ ಇದ್ರು. ಅವರ ಆತಂಕ ಏನಪ್ಪಾ ಅಂದ್ರೆ, ಈ ಯಪ್ಪಾ ಏನಾದ್ರೂ ಯಾರಾದ್ರೂ ಹೊರ ರಾಜ್ಯದವರನ್ನೋ, ಹೊರ ದೇಶದವರನ್ನೇ ಕರ್ಕೊಂಡು ಬಂದು ಈ ಯೂನಿವರ್ಸಿಟಿನೂ ನಂದೇ ಖಾಸಗಿ ಆಸ್ತಿ ಅಂತ ಹೇಳ್ಬಿಟ್ಟು ಯಾರಿಗಾದ್ರೂ ಮಾರಿ ಬಿಟ್ಟರೆ ಏನು ಮಾಡೋದು ಅಂತ.

ಇರಲಿ ಸದ್ಯ ಹಾಗೇನೂ ಆಗಲಿಲ್ಲ. ಕೆಲವು 'ಹಳ್ಳಿಮುಗ್ಧ'ರಿಗೆ ಪಿಹೆಚ್‌ಡಿ ಕೊಡಿಸಿರುವುದು... ಇಂತಹ ಇನ್ನೂ ಕೆಲವು ಸಮಾಜ ಸೇವೆ, ದೇಶ ಸೇವೆಯನ್ನು ಮಾತ್ರ ಮಾಡೋದಕ್ಕೆ ಸಾಧ್ಯ ಆಯ್ತು.

ಆಮೇಲೆ ಅವರನ್ನು ಯೂನಿವರ್ಸಿಟಿಯಿಂದ ವಜಾ ಅಂತ ಯಾವಾಗ ಮಾಡಿದರೋ ಆದೂ ಒಂಥರಾ ಒಳ್ಳೇದೆ ಆಯ್ತು ನೋಡಿ. ತಮ್ಮ ಸಮಾಜಸೇವೆ ದೇಶ ಸೇವೆ ಮುಂದುವರಿ ಸೋದಕ್ಕೆ ಒಂದು ಅಮೋಘ ಅವಕಾಶ ಸಿಕ್ತು ರಾಜಕೀಯದಲ್ಲಿ. ಭಾರತೀಯ ಜನತಾ ಪಕ್ಷ - ಬಿಜೆಪಿಯವರಾದರೋ ಇವರಿಗೆ ಟಿಕೆಟ್ ಕೊಟ್ಟು ತಮ್ಮ 'ದೇಶ-ಪ್ರೇಮ' ವನ್ನು ಸಮಾಜದ ಮುಂದೆ ಸಾಬೀತು ಮಾಡಿದ್ದಾರೆ.

ಈ ಪ್ರೊಫೆಸರು ಯೂನಿವರ್ಸಿಟಿ ಲಿದ್ದಾಗ, ಭ್ರಷ್ಟ-ಗಿಷ್ಟ ಅಂತ ಕಿರುಚಾಡ್ತಾ ಇದ್ದಾ ಎಬಿವಿಪಿಗಳು ಕೂಡ ಈಗ ಬಾಯ್ಮುಚ್ಕೊಂಡು ಕ್ಷೇತ್ರದಲ್ಲಿ ಪ್ರಚಾರ ಮಾಡ್ತಾ ಇರಬಹುದು. ಪಾಪ ಈ ಪುಣ್ಯಾತ್ಮ ಬಿಜೆಪಿಗೆ ಬಂದು ಬಿಡ್ತಾರೆ ಎಂದು ಮೊದಲೇ ಗೊತ್ತಾಗಿದ್ರೆ ಅವರು ಪ್ರತಿಭಟನೆಯನ್ನೇ ಮಾಡ್ತಾ ಇರಲಿಲ್ಲ ಏನ್ಮಾಡೋಕೆ ಆಗುತ್ತೆ -ಒಂದೊಂದು ಸಾರಿ ಹೀಗೆಲ್ಲಾ ಆಗುತ್ತೆ ಅಲ್ವಾ?


ಜನಶಕ್ತಿ ಕನ್ನಡ ವಾರಪತ್ರಿಕೆ



# ರೈತರ ಸಂಕಟಗಳಿಗೆ ಯಾರು ಹೊಣೆ ?

## ನೀತಿಗಳು

- ಬಿಜೆಪಿ-ಕಾಂಗ್ರೆಸ್ ನೇತೃತ್ವದ ಕೇಂದ್ರ - ರಾಜ್ಯ ಸರ್ಕಾರಗಳಿಂದ ಉದಾರೀಕರಣ ನೀತಿಗಳ ಅಪ್ಪುಗೆ
- ಕೃಷಿಯಲ್ಲಿ ಮುಂಗಡ ವ್ಯಾಪಾರಕ್ಕೆ ಅವಕಾಶ
- ಕೃಷಿ ರಂಗಕ್ಕೆ ಸಾರ್ವಜನಿಕ ಹೂಡಿಕೆಯಲ್ಲಿ ತೀವ್ರ ಕಡಿತ
- ಎಪಿಎಂಸಿ - ಕಾಯ್ದೆ ತಿದ್ದುಪಡಿ
- ಕೃಷಿ ಸಹಾಯಧನ ಕಡಿತ - ಕೃಷಿ ವೆಚ್ಚ ದುಬಾರಿ
- ಬೆಳೆದ ಬೆಳೆಗೆ ಸೂಕ್ತ ಬೆಲೆ ಇಲ್ಲ
- ಪಡಿತರ ವ್ಯವಸ್ಥೆಗೆ ಪೆಟ್ಟು



## ಪರಿಣಾಮ



- ರಾಜ್ಯದಲ್ಲಿ 5 ವರ್ಷಗಳಲ್ಲಿ 1168 ರೈತರ ಆತ್ಮಹತ್ಯೆ
- ರಾಜ್ಯ ಜೆಡಿ(ಎಸ್) - ಬಿಜೆಪಿ ಸರ್ಕಾರದ 16 ತಿಂಗಳ ಅವಧಿಯಲ್ಲಿ 300 ರೈತರ ಆತ್ಮಹತ್ಯೆ
- ಆತ್ಮಹತ್ಯೆಗಳ ವಿಷಯದಲ್ಲಿ ರಾಜ್ಯಕ್ಕೆ 3ನೇ ರ್ಯಾಂಕ್

## ಇವರೆಲ್ಲಾ ಅಪರಾಧಿಗಳೇ!










## ಉದಾರೀಕರಣ ಪ್ರೇರಿತ ರೈತ ವಿರೋಧಿ ಕೃಷಿ ನೀತಿ ಹಿಮ್ಮೆಟ್ಟಿಸಿ



ಕೆ. ನೀಲಾ

ಎದುರು ಗುಡಿಸಿಲಿನ ಹೆಂಗಸು ನಾಷ್ಟಾಕ್ಕೆ ಕರೆದಳು. ಯಾಕೆಂದು ಕೇಳಿದೆ. 'ದಲಿತರ ಮದುವಿ. ಅಲ್ಲಿ ಉಣ್ಣಲಿಕ್ಕಿಲ್ಲ. ನಮ್ಮನಿಗಿ ಬರ್ರಿ' ಅಂದಳು. ಕಪಾಳಕ್ಕೊಂದು ಛಟೀರೆಂದು ಬಾರಿಸಿದಂತೆ?.ಹೊಟ್ಟೆಯಲ್ಲಿ ತಳಮಳ. ಹೇಗೆ ಬಿಚ್ಚಿಡಲಿ ಮನದ ಮಾತು

# ಕಾಯಕ ಕಳವಳಕ್ಕಂಜಿ ಕಾಯಯ್ಯ ಎನ್ನೆನು

43 ಡಿಗ್ರಿಯ ಬಿಸಿಲು ಮುರಿಯುತ ನಮ್ಮ ಪುಟ್ಟ ಕಾರು ಮುನ್ನುಗ್ಗುತಿತ್ತು. ಬರು ಬರುತ ಈ ನೆಲವು ಕಾದು ಕೆಂಡವಾಗುತ್ತಿದೆ. ಇದಕ್ಕೆ ಪ್ರಕೃತಿಯೊಳಗಿನ ಸಹಜ ನೈಸರ್ಗಿಕ ಬದಲಾವಣೆ ಮಾತ್ರವೇ ಕಾರಣವಲ್ಲ. ಅಮೆರಿಕನ್ ಸಾಮ್ರಾಜ್ಯಶಾಹಿಯ ಯುದ್ಧಕೋರ ನೀತಿಯೂ ಕಾರಣವಾಗಿದೆ. ಬಹುರಾಷ್ಟ್ರೀಯ ಕಂಪನಿಗಳೂ ಕಾರಣವಾಗಿವೆ? ಆಳುವ ಸರ್ಕಾರಕ್ಕೆ ಇಚ್ಛೆ ಇದ್ದರೆ ಈ ಬಿಸಿ ತಣಿಸುವ ಕಾರ್ಯಕ್ರಮ ರೂಪಿಸಿ, ಸಾಮಾನ್ಯ ಜನತೆಯ ರಕ್ಷಣೆಗೆ ನಿಲ್ಲಬಹುದು. ಆದರೆ ಆಳುವ ವರ್ಗ ಯಾವುದೇ ಇಂತಹ ಜನಪರ ಕಾರ್ಯಕ್ಕೆ ಮುಂದಾಗಿದ್ದಿದೆಯೇ?.? ನಮ್ಮ ಚರ್ಚೆ ಸಾಗುತ್ತಲೇ ಇತ್ತು. ಸೂರ್ಯನ ಮುಖದಿಂದ ತೂರಿ ಬರುವ ಕತ್ತಿ ಅಲುಗಿನಂತಹ ಕಿರಣಗಳು ಅಗಾಧ ಶೆಕೆಯ ರಾಶಿ ಚೆಲ್ಲುತಿದ್ದವು.

'ಉಳ್ಳವರು ತಣ್ಣನೆಯ ಕೋಣೆ'ಯಲ್ಲಿರುವರು, ನಾನೇನು ಮಾಡಲಿ ಬಡವಳಯ್ಯ. ಸುರಿವ ಬೆವರೇ ತಂಪು ನೀರಂತೆ, ಹೊದ್ದ ಸೆರಗೇ ಬೀಸಣಿಕೆಯಂತೆ, ಸುಳಿವ ಎಳೆಗಾಳಿಯೇ ತಂಗಾಳಿಯಂತೆ '.? ಮನದಲ್ಲಿಯೇ ವಚನಿಸುತ್ತಿದ್ದೆ.

ಭೀಷ್ಮಪಿತಾಮಹನಂತಹ ರಾಹು ಮಾಸ್ತರರು ಅತಿಸಾಹಸಕ್ಕೆ ಹೆಸರಾದವರು. ಕೆಂಪು ಧರಿನಾಡು ಬೀದರ ಜಿಲ್ಲೆಯಲ್ಲಿ ನಮ್ಮ ಪ್ರವಾಸ ಸಾಗಿತ್ತು. ಹುಣಚಗೇರಾ, ಕನಕಟ್ಟಾ ದಾಟಿ ಘಾಟ್‌ಬೋರಾಳಗೂ ಮುನ್ನವೇ ಬಲಗಡೆಯ ಕಾಲು ದಾರಿಗೆ ಸರಕ್ಕೆಂದು ಕಾರು ಹೊರಳಿಸಿ 'ಬಂತು ಜಾಮನಗರ್' ಅಂದರು. ಆದರೆ ಅದು ಬಟಾಬಯಲೇ ಆಗಿತ್ತು. ಯಾವುದೇ ಹಳ್ಳಿ ಸನಿಹದಲ್ಲಿ ಗೋಚರಿಸುತ್ತಿರಲಿಲ್ಲ. ಗರಕ್ಕೆನಂದು ಕಾರು ತಿರುಗಿಸಿದ್ದಕ್ಕೆ ಅಡಿಯ ಚೇಂಬರ್ ಒಡೆದು ಕಾರಿನ ಜೀವಾಳವಾದ ಎಣ್ಣೆಯು ತೊಟ್ಟಿಕ್ಕತೊಡಗಿತು. ಛಕ್ಕಂತ ಕಾರು ನಿಲ್ಲಿಸಿ ಕಾರಡಿಗೆ ಇಣುಕಿದರೆ ಕಂಡದ್ದೇನು? ಎಲ್ಲವೂ ಬಬ್ಬಾದ್! ನೀರಿನ ಬಾಟಲಿ ಕೊಯ್ದು ಹನಿವ ಎಣ್ಣೆ ಹಿಡಿದಿಟ್ಟುಕೊಂಡೆವು. ರಿಪೇರಿಗೆಂದು ಕಾರು ಮತ್ತು ಮಾಸ್ತರರು ಘಾಟ್‌ಬೋರಾಳ ಕಡೆಗೆ, ನಾವು ಜಾಮನಗರಕ್ಕೆ ಹೊರಟೆವು.

**ಕಣ್ಣಂಚಲ್ಲಿ ನೀರಹನಿ**

ನಮ್ಮ ಸಂಗಾತಿಯೊಬ್ಬರ ತಂಗಿಯ ಮದುವೆ. ಕಿತ್ತು ತಿನ್ನುವ ಬಡತನ. ಯಾಕೋ ಕಣ್ಣಂಚಲ್ಲಿ ನೀರ ಹನಿಯೊಂದು ಹರಿದಾಡಿತು. ನವದಂಪತಿಗಳಿಗೆ ಹಾರೈಸಿ ದೂರದ ಮರದಡಿಗೆ ನೆರಳರಸಿ ಹೊರಟೆವು. ಉದ್ಯೋಗ ಖಾತ್ರಿಯ ಕೆಲಸ ಮಾತ್ರವೇ ಆ ಹಳ್ಳಿಗರ ಜೀವನಕ್ಕಾಶ್ರಯ. ಒಕ್ಕಲುತನವೆಂಬುದು ಏನಾಯ್ತು ನೋಡಿ. ಎದುರು ಗುಡಿಸಿಲಿನ ಹೆಂಗಸು ನಾಷ್ಟಾಕ್ಕೆ ಕರೆದಳು. ಯಾಕೆಂದು ಕೇಳಿದೆ. 'ದಲಿತರ ಮದುವಿ. ಅಲ್ಲಿ ಉಣ್ಣಲಿಕ್ಕಿಲ್ಲ. ನಮ್ಮನಿಗಿ ಬರ್ರಿ' ಅಂದಳು ಕಪಾಳಕ್ಕೊಂದು ಛಟೀರೆಂದು ಬಾರಿಸಿದಂತೆ! ಹೊಟ್ಟೆಯಲ್ಲಿ ತಳಮಳ. ಹೇಗೆ ಬಿಚ್ಚಿಡಲಿ ಮನದ ಮಾತು "ತಾಯೀ, ನೆರಳಿನ ಸಲ್ವಾಕ ಇಲ್ಲಿ ಬಂದೀವಿ. ಅನ್ನ ಎಲ್ಲಿರ್ತದ ಅಲ್ಲಿ ಉಣ್ಣತೀವಿ ಕುಲವೊಂದೇ ತನ್ನ ತಾನರಿದವಂಗೆ?ಅಂತ ಶರಣರು ಹೇಳ್ಯಾರಿಲ್ಲ"? ಮದುವೆ ಅಂಗಳದ ಊಟದ ಪಂಕ್ತಿಯಲ್ಲಿ ಕುಳಿತೆವು. ಅಕ್ಷರಶಃ ನೀರಿಗೆ ಬೆರೆಸಿದ ಕಾರ ಉಪ್ಪು ಎಣ್ಣೆ. ನೋವಿನ ಎಳೆಯೊಂದು ಬಲೆ ಹೆಣೆಯುತ್ತಿತ್ತು. 'ತಂಗೀ, ಮನಿ ಮಂದಿಗೆಲ್ಲ ಗೌರವ ಮತ್ತ ಪ್ರೀತಿಲಿಂದ ನೋಡು. ಹಿಮ್ಮತ್ತಿನಿಂದ ಸಂಸಾರ ಮಾಡು' ಅಂತ ಹೇಳಿ ಮದುಮಗಳ ಮುಂಗುರುಳು ನೇವರಿಸಿದೆವು.

ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ತೀವ್ರವಾಗಿ ಹೆಚ್ಚುತ್ತಿದೆ. ಕೋಟ್ಯಾಧೀಶರ ವೈಭವದ ದಿಬ್ಬಣ ನೆನೆದು ಮನಸು ಹೇಸಿತು. ಹಸಿರು ಬಳೆಗಳ ಗಲಗಲ ಶಬ್ದ ಕೇಳಿಸುತ್ತಲೇ ಇತ್ತು. ಅಲ್ಲಿ ನೆರೆದವರ ಕಣ್ಣೊಳಗಿನ ಆನಂದದ ಅಭಿಮಾನದ ಬೆಳಕೊಂದು ಎದೆಯೊಳಗೆ ಕಾಪಿಟ್ಟುಕೊಂಡು ಕೈ ಬೀಸಿ ಘಾಟಬೋರಾಳೆಂಬ ಗ್ರಾಮದತ್ತ ಹೊರಟೆವು.

ಖಡಿ ಬಿಸಿಲಲ್ಲಿ ಸೋರುವ ಚೇಂಬರಿನ ತೂತು ಅದು ಹೇಗೋ ಮುಚ್ಚಿ ಹಾಕಿದ್ದರು. ತುತ್ತು ಅನ್ನವಿಲ್ಲದ್ದಕ್ಕಾಗಿ ಮಾಸ್ತರು ನಿಗಿನಿಗಿ ಅನ್ನುತ್ತಿದ್ದರು. ಹುಡುಕಾಡಿ ತಂದ ತಣ್ಣನೆಯ ರಸ ಕುಡಿದು ಪುಟ್ಟ ನಗೆ ಚೆಲ್ಲಿದ ಮೇಲೇ ನಾವು ನಿಟ್ಟುಸಿರು ಬಿಟ್ಟೆವು. 'ನಿಮ್ ಸಾವಾಸ ಸಾಕು. ಇನ್‌ಮ್ಯಾಲ ನಂಗ ಎಲ್ಲಿನೂ ಕರಿಬ್ಯಾಡ್ರಿ' ಅಂತ ಮಾಸ್ತರು ಕೈ ತಿರುವಿದರು 'ಬಿಡ್ರಿ ಸರ್, ನೀವಿಲ್ಲಾಂದ್ರೂ ಹೆಣ್‌ಮಕ್ಕಳು ಸಂಸಾರದ ಬಂಡಿ ನಡಸ್ಯಾರ ಜೀವನದ ತುಂಬಾ. ಒಂದೀಟು ಕಾರ್ ಕೆಟ್ಟಿದ್ದಕ್ಕ ಏಟ್ ಮಾಡ್ತಿರೆಲ್ಲಾ?.ಜರಾ ಹಿಮ್ಮತ್ತಿನಿಂದ ಮುನ್ನುಗ್ಗಬೇಕು?' ನಾವೂ ಚಡಾವಡಿ ಧಾಟಿಯಲ್ಲಿ ಮಾತಿನ ದಾಳ ಉರುಳಿಸಿದೆವು. "ಸುಮ್ನ ಮಾತ್ಯಾಕ, ಖರೆ ಹಿಮ್ಮತ್ತಿನ ಹೆಣಮಗಳಿಗಿ ತೋರಿಸ್ತಿನಿ ಬರ್ರಿ" ಅಂತ ನಮ್ಮನ್ನು ಕರೆದೊಯ್ದರು. ಖರೆನೇ ಎಪ್ಪತ್ತಕ್ಕೂ ಹೆಚ್ಚು ವಯಸ್ಸಿನ ಚೆಂದಾನ ಚಲುವಿ ಅಜ್ಜಿಯೊಬ್ಬಳು ಪುಟ್ಟ ಪಾನ್ ಅಂಗಡಿಯಲ್ಲಿ ಕುಳಿತು ವ್ಯಾಪಾರ ಮಾಡುತ್ತಿದ್ದಳು. ಮಾರು ಹೋಗಲು ನಮಗಿನ್ನೇನು ಬೇಕು" 'ಯವ್ವ ಎಷ್ಟು ವರ್ಷಲಿಂದ ಈ ವ್ಯಾಪಾರ ಸುರು ಮಾಡಿದಿ? ಹೆಸರೇನು? ಮಕ್ಕಳೆಷ್ಟು? ಗಂಡ ಎಲ್ಲಿ? ಏನ್ ಮಾಡ್ತಾನಾ?.....?'

**ಆ ಖರೆ ಹಿಮ್ಮತ್ತಿನ ಹೆಣ ಮಗಳು:** ಇಳಕಲ್ ಸೀರೆಯ ಸೆರಗು ಬಿಗಿಗೊಳಿಸಿ, ತುಂಬು ಬಳೆಗಳ ಕೈಯಿಂದ ಬಂದ ಗಿರಾಕಿಗಳಿಗೆ ಎಲೆ ಕಟ್ಟಿ ಕೊಡುತ ಪಟಪಟನೇ ಮಾತಾಡತೊಡಗಿದಳು ಸೀತಮ್ಮ. ನಾವು ಬೆರಗಿನಿಂದ ಕಣ್ಣರಳಸಿ, ಕಿವಿಯಗಲಿಸಿ ಕೇಳತೊಡಗಿದೆವು.

ಗುಲಬರ್ಗಾದ ಕಮಲಾಪುರ ಸೀತಮ್ಮಳ ತವರೂರು. ಎಳೆ ವಯಸಲ್ಲೇ ಹುಮನಾಬಾದಿನ ಈ ಘಾಟಬೋರಾಳದ ಯುವಕನೊಂದಿಗೆ ಮದುವೆ. 25ರ ಹರೆಯ ತುಂಬುವುದರೊಳಗೆ ಐದು ಮಕ್ಕಳ ತಾಯಿ ಸೀತಮ್ಮ. ಗಂಡ ಕುಡಿದು ಕುಡಿದು ಸತ್ತೇ ಹೋದಾಗ ಅಪ್ರತಿಮ ಸುಂದರಿ ಸೀತಮ್ಮ ಭರ್ತಿ ಹರೆಯದ ಹಾದಿಯಲ್ಲಿದ್ದಳು. ಅಳುವ ಐದೂ ಮಕ್ಕಳ ತಲೆ ಸವರಿ, ಸೊಂಟಕ್ಕೆ ಸೆರಗು ಬಿಗಿದು ಬದುಕ ಬಂಡಿಗೆ ಹೆಗಲು ಕೊಟ್ಟು ಇಂದಿಗೆ ನಲವತ್ತು ವರ್ಷಗಳೇ ಸಂದಿವೆ. "ಕಟ್ಟಿಕೊಂಡಾಂವ ಕಡಿಗಿ ಹಚ್ಚಲಿಲ್ಲ. ಹೊಟ್ಟೆ ಬಿಚ್ಚಿ ಮಕ್ಕಳಿಗಿ ನಾ ಹೆತ್ತೀನಿ. ಮಕ್ಕಳ ಸಲ್ವಾಕ ಮನಸ್ಸು ಗಟ್ಟಿ ಮಾಡ್ಕೊಂಡೆ. ಈ ವ್ಯಾಪಾರ ಚಾಲು ಮಾಡ್ದೆ. ಹಂಗೆ ಟಿಕಿಟಿಕಿ ಸಂಸಾರ ನಡಿತಿತ್ತು. ತವರಿನವರಿಗರೇ ಯಾಕ ಒಜ್ಜೆ ಆಗಬೇಕು? ಒಬ್ಬ[...] ಮಗ ಹತ್ತನೇ ತನಕ ಓದ್ಯಾನ. ಕೆಲಸ ಮಾಡ್ತಾನ[...] ನಾಲ್ಕೂ ಹೆಣ್ಮಕ್ಕಳಿಗಿ ಊರಾಗ ಇದ್ದಟು ಓಧ್ಹಿ ಮದ[...] ಮಾಡಿ ಕೊಟ್ಟೆನಿ. ಅವ್ರ ಮನ್ಯಾಗ ಅವರು ಚಲೋ[...] ಹರಾ. ಐದ ಸಾವಿರ ರೂಪಾಯಿಗಿ ಆರ್ ವರ್ಷದ[...] ಹಿಂದ ಈ ಡಬ್ಬಿ ಸ್ವಂತ ಖರಿದಿ ಮಾಡಿನಿ. ಐದ[...] ಎಕ್ರೆ ಹೊಲಾ ತಗೊಂಡಿನಿ. ಮೂರು ಖೊಲ್ಲಿ ಮನ[...] ಕಟ್ಟಿಸಿನಿ".- ಗಿರಾಕಿಗಳಿಗೆ ಬಿಸ್ಕಿಟ್ಟು, ಗುಟ್ಕಾ, ಎಲ[...] ಅಂತೆಲ್ಲ ಚಕ ಚಕನೇ ಕೊಡುತ್ತಲೇ ಬದುಕ ಗಾಥ[...] ಬಿಚ್ಚಿಡುತ್ತಿದ್ದಳು. ಜಳ ಜಳ ಹರಿವ ನೀರಂತೆ.

"ಯವ್ವ ಈ ವಯಸ್ಸಿಗೇ ಈಟ್ ಲಕ ಲಕ[...] ಹೊಳಿತಿ. ನಮ್ಮ ಊರುಗೋಳರೇ ಪಕ[...] ಪಾಳೇಗಾರರ ಬೀಡು. ಸಣ್ಣ ವಯಸ್ನಾಗ ಗಂಡಗ[...] ಕಳ್ಕೊಂಡು ಇಂಥ ಕಗ್ಗ ಹಳ್ಯಾಗ ಹ್ಯಾಂಗ ಈಜ[...] ಜೈಸ್ದಿ? ಏನ್ ಅಡ್ಡಿ ಆತಂಕ ಬಂದಿಲ್ಲೇನು" ನಾನು[...] ಅವಳ ಕುತ್ತಿಗೆಯ ಬೋರಮಾಳ ಸರದ[...] ಗುಂಡೆಣಿಸುತ ಕೇಳಿದೆ. ನನ್ನ ಮಾತಿನ ಮ[...] ಅರಿತು ಅಜ್ಜಿ ಅರ್ಥಗರ್ಭಿತವಾಗಿ ನಕ್ಕು[...] 'ಸಂಕಟಗೋಳು ಹೊರಗಿಂದನೂ ಒಳಗಿಂದನೂ[...] ಬರ್ತಾವ. ಜಿಂದಗಾಣಿ ಖಬರಿಲ್ದೆ ಗಂಡ ನಡು[...] ಮದ್ಯಾಣದಾಗೇ ಕತ್ತಲ ತಂದಿಟ್ಟು ತಾ ಹ್ವಾದ[...] ನಾವ್ ಎಲ್ಲಿಗಿ ಹೋಗಬೇಕಿತ್ತು? ಹೊರಗಿನ ಕಷ್ಟ[...] ಎದರಸ್ಲಾಕ ಎದಿ ಗಟ್ಟಿ ಮಾಡಕೊಂಡ[...] ನಿಂದರಬೇಕಾಗ್ತದ. ಕೈ ಬಾಯಿ ಕಚ್ಚಿ ಬಿಗುವು ಇದ್ರ[...] ಯಾರೇನು ಮಾಡಂಗಿಲ್ಲ. ನಮ್ಮೂರಾನ ಮಂದಿ[...] ಭಾಳ ಒಳ್ಳೆಯವ್ರು. ನಲವತ್ತ ವರ್ಷಲಿಂದ ಇದೇ[...] ರೋಡ್ ಮ್ಯಾಲ ವ್ಯಾಪಾರ ಮಾಡ್ತಿನಿ. ಬೇಕಾದ[...] ಸಾಮಾನು ಕಲ್ಯಾಣಕ್ಕ ಇಲ್ಲಾಂದ್ರ ಹುಮನಾಬಾದಿಗ[...] ನಾನೇ ಖುದ್ದು ಹೋಗಿ ತರ್ತಿನಿ. ಯಾರಿಗ್ಯಾಕ[...] ಅಂಜಬೇಕು? ದುಡದು ಉಂಡ್ರ ಕೈಲಾಸ"?

ಮಾಸ್ತರರ ಮೊಬೈಲಿನ ಕ್ಯಾಮೆರಾ ಸೀತಮ್ಮಳನ್ನು ಸೆರೆ ಹಿಡಿಯಿತು. "ಯವ್ವ ನಾವ್ ಬರ್ತಿವಿ. ಮತ್ತ ನಿನ್ ಬಗ್ಗೆ ಬರಿತೀವಿ" ಅಂದಾಗ ಸೀತಮ್ಮ[...] ಕೊಂಚವೇ ನಕ್ಕು ನಾಚಿ, "ನಂದ್ಯಾಕ ಬರಿತೀರ[...] ಬಿಡ್ರಿ" ಅಂದು ಮತ್ತೆ ವ್ಯಾಪಾರದಲ್ಲಿ ಮಗ್ನಳಾದಳು.

ಕಾಯಕದ ಮಹಿಮೆಯನ್ನು ಕಟ್ಟಿಕೊಟ್ಟ ಶರಣರ[...] ನಾಡಿದು. ಸೀತಮ್ಮ ನಿಜವಾದ ಜೀವನಧೀರೆ. ಕಾಯಕಜೀವಿ. ಶರಣೆ. ಬಸವಣ್ಣನ ವಚನವೊಂದು ಉರಿಬಿಸಿಲ ನಡುವೆಯೂ ತಂಪು ಚೆಲ್ಲಾಡುತ[...] ನೆನಪಿನಂಗಳಕೆ ಬಂತು.

ಕಾಯದ ಕಳವಳಕ್ಕಂಜಿ ಕಾಯಯ್ಯ ಎನ್ನೆನು<br>
ಜೀವನೋಪಾಯಕ್ಕೆ ಈಯಯ್ಯ ಎನ್ನೆನು<br>
ಆ ನಿಮ್ಮ ಹಾರೆನು ಮಾನವರ ಬೇಡೆನು<br>
ಆಣೆ ನಿಮ್ಮಾಣೆ...

# ಸಾಮರಸ್ಯದ ಕರ್ನಾಟಕವನ್ನು ಉಳಿಸಿಕೊಳ್ಳಬೇಕು

ಪುಟ 5 ರಿಂದ

ಪ್ರವೇಶಿಸದಂತೆ ಅದರ ಕೈಕಟ್ಟಿ ಹಾಕಿರುವ 'ಹಣಕಾಸು ಹೊಣೆಗಾರಿಕೆ ಮಸೂದೆ' (Financial Accountability Bill) ತಂದಿರುವ ಪಕ್ಷ ಇದು.

ಸಾಮ್ರಾಜ್ಯಶಾಹಿಗಳು ಶಿಕ್ಷಣವನ್ನು ಖಾಸಗೀಕರಿಸಬೇಕು ಎಂದು ನೀಡಿದ ಆದೇಶವನ್ನು ಪರಿಪಾಲಿಸುವಲ್ಲಿ ಆಳುವ ವರ್ಗಗಳ ಈ ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳೇನೂ ಇಲ್ಲ. ಇದರಿಂದ ಜನಗಳು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಖರ್ಚು ಮಾಡಬೇಕಾಗಿ ಬಂದಿದೆ, ಬಡ ಮತ್ತು ಮಧ್ಯಮ ವರ್ಗಗಳ ಜನಗಳಿಗೆ ಉನ್ನತ ಶಿಕ್ಷಣದ ಪ್ರಯೋಜನಗಳನ್ನು ನಿರಾಕರಿಸಲಾಗಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉನ್ನತ ಶಿಕ್ಷಣವಿಲ್ಲದೆ ಗೌರವಸ್ಥ ಉದ್ಯೋಗ ಸಿಗಲಾರದಂತಹ ಪರಿಸ್ಥಿತಿಯನ್ನು ಅವರು ಎದುರಿಸಬೇಕಾಗಿದೆ.

ಆರೋಗ್ಯ ಸೇವೆಗಳ ಬಗ್ಗೆಯೂ ಅವರದ್ದು ಅದೇ ಧೋರಣೆ. ಖಾಸಗೀಕರಣ ಮತ್ತು ಪೇಟೆಂಟ್ ನೀತಿಗಳಿಂದಾಗಿ ಔಷಧಿಗಳ ಬೆಲೆಗಳು, ಇತರ ಆರೋಗ್ಯ ಖರ್ಚುಗಳು ಏರಿವೆ.

ನೀರು, ವಿದ್ಯುತ್, ನೈರ್ಮಲ್ಯ, ನಾಗರಿಕ ಸೌಲಭ್ಯಗಳು ಇತ್ಯಾದಿ ಎಲ್ಲ ಅಗತ್ಯ ಸೇವೆಗಳ ಮತ್ತು ಆಸ್ತಿ ತೆರಿಗೆ ಇತ್ಯಾದಿ ಖರ್ಚುಗಳೆಲ್ಲಾ ಖಾಸಗೀಕರಣದ ಪ್ರಕ್ರಿಯೆಯಲ್ಲಿ ತೀವ್ರವಾಗಿ ಏರಿವೆ. ವಿಪರೀತ ಆಸ್ತಿ ತೆರಿಗೆಗಳನ್ನು ಹೇರಿದರೂ ಮೂಲ ರಚನೆಗಳಲ್ಲಿ ತೊಡಗಿಸಲು, ಜನಗಳಿಗೆ ಸಿಗಬೇಕಾದ ಸೌಲಭ್ಯಗಳನ್ನು ಉತ್ತಮಗೊಳಿಸಲು ನಗರಾಡಳಿತ ಸಂಸ್ಥೆಗಳ ಬಳಿ ಸಾಕಷ್ಟು ಹಣ ಇಲ್ಲ ಎನ್ನಲಾಗುತ್ತಿದೆ. ರಿಯಲ್ ಎಸ್ಟೇಟ್ ದೊರೆಗಳಿಗೆ ಸಿಗುತ್ತಿರುವ ರಾಜಕೀಯ ಪೋಷಣೆಯಿಂದಾಗಿ ಜನ ನರಳುವಂತಾಗಿದೆ. ಈ ದೊರೆಗಳು ನಿವೇಶನ/ಕಟ್ಟಡ ಇತ್ಯಾದಿ ಜನಗಳು ತೊಡಗಿಸುವ ಹಣವನ್ನು ಹೀರಿಕೊಳ್ಳುತ್ತಿದ್ದಾರೆ. ರಿಯಲ್ ಎಸ್ಟೇಟ್ ದೊರೆಗಳು/ಮಾಫಿಯಾಗಳು ಲೂಟಿ ಹೊಡೆದಿರುವ ಭಾರೀ ಸಂಪತ್ತು ನಗರಾಡಳಿತ ಸಂಸ್ಥೆಗಳ ಶಕ್ತಿಯನ್ನು ಕ್ಷೀಣಗೊಳಿಸಿದೆ. ಅಸಹ್ಯ ಶ್ರೀಮಂತಿಕೆಯಲ್ಲಿ ಓಲಾಡುತ್ತಿರುವ ಈ ಜನಗಳ ಕಾನೂನುಬಾಹಿರ ಚಟುವಟಿಕೆಗಳಿಗೆ ಈ ಪಕ್ಷಗಳು ಉತ್ತೇಜನೆ ನೀಡುತ್ತಿವೆ, ಮೂಲತಃ ತಾವು ಭ್ರಷ್ಟಾಚಾರ-ವಿರೋಧಿಗಳು ಎನ್ನುತ್ತಿದ್ದ ಬಿಜೆಪಿ ಇಂತಹ ವ್ಯಕ್ತಿಗಳನ್ನು ಸೇರಿಸಿಕೊಂಡು, ಉಳಿಸಿಕೊಂಡು, ಅವರು ಬೇರೆ ಪಕ್ಷಗಳತ್ತ ಹೋದರೆ ಹಲ್ಲೆಗಳನ್ನೂ ನಡೆಸಿ ಜನಗಳ[...] ಸಂಕಟಗಳನ್ನು ಶಾಶ್ವತಗೊಳಿಸುತ್ತಿದೆ.

ಆದ್ದರಿಂದ ಕರ್ನಾಟಕದ ಮತದಾರರು ತಮ್ಮ ಮತವನ್ನು ಶ್ರದ್ಧೆಯಿಂದ ಬಳಸಿ ಕರ್ನಾಟಕವನ್ನು ಕೋಮುವಾದಿ ಆಧಾರದಲ್ಲಿ ವಿಭಜಿಸುವುದನ್ನು ತಡೆಯಬೇಕು. ಏಕೆಂದರೆ ಜನಗಳು ಎದುರಿಸುತ್ತಿರುವ ಸಮಸ್ಯೆಗಳು, ಅವರ ಬದುಕನ್ನು ಹಸನುಗೊಳಿಸುವ ಬಗೆ, ಸರ್ಕಾರ ಮತ್ತು ಇತರ ಸಂಸ್ಥೆಗಳಿಂದ ಸೌಲಭ್ಯಗಳನ್ನು ಪಡೆಯುವ ಬಗೆ, ಗಂಭೀರ ಕೃಷಿ ಬಿಕ್ಕಟ್ಟು, ಇತ್ಯಾದಿಗಳಿಗೆ ಪರಿಹಾರ ಜನಗಳನ್ನು ಕೋಮುವಾದಿ ಆಧಾರದಲ್ಲಿ ವಿಭಜಿಸುವುದರಿಂದ ಸಿಗುವುದಿಲ್ಲ. ಬದಲಿಗೆ, ಜನಗಳ ಸಮಸ್ಯೆಗಳನ್ನು ಎತ್ತಿಕೊಳ್ಳಲು, ಅದನ್ನು ಸರ್ಕಾರದ ಮುಂದಿಡಲು ಮತ್ತು ಸರ್ಕಾರ ಜನಪರ ನೀತಿಗಳನ್ನು ಅನುಸರಿಸುವಂತೆ ಒತ್ತಡ ತರಬೇಕಾದರೆ ಜನಗಳ ಐಕ್ಯತೆ ಅತಿ ಅಗತ್ಯ.


# ಚಿಂತನೆ ಬೆಳೆಸುವ 'ಚಿಂತನ' ಮಕ್ಕಳ ಬೇಸಿಗೆ ಶಿಬಿರ

ಮಕ್ಕಳು ಕೇವಲ ಶಾಲೆಯಲ್ಲಲ್ಲದೆ ಹೊರಗಿನ ಮುಕ್ತ ಪ್ರಪಂಚದಲ್ಲೂ ಕಲಿಯಬೇಕಾದದ್ದು ಬಹಳಷ್ಟಿದೆ. ತಮ್ಮ ಸುತ್ತಮುತ್ತಲೂ ತಾವು ನೋಡುತ್ತಿರುವ ಪರಿಸರ, ವಸ್ತು, ವಿದ್ಯಮಾನಗಳ ವಿಚಾರವಾಗಿ ತಿಳಿದುಕೊಳ್ಳುವ, ಕಲಿತುಕೊಳ್ಳುವ ಕುತೂಹಲ, ಅದಮ್ಯ ಆಸೆ ಮಕ್ಕಳ ಸ್ವಾಭಾವಿಕ ಅವಿಭಾಜ್ಯ ಅಂಗವೇ ಆಗಿದೆ. ಆ ದಿಸೆಯಲ್ಲಿ ಬಿಡುವಿನ ಸಮಯದಲ್ಲಾದರೂ ಮಕ್ಕಳನ್ನು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿ ಅವರಲ್ಲಿಯು ಸುಪ್ತ ಪ್ರತಿಭೆ, ಸೃಜನಶೀಲ ಕೌಶಲ್ಯಗಳನ್ನು ಗುರುತಿಸುವುದರ ಜೊತೆಗೆ ಮುಖ್ಯವಾಗಿ ಅವರ ಮನೋವಿಕಾಸಕ್ಕೆ ಪೂರಕವಾಗುವಲ್ಲಿ ಪಾಲಕ ಪೋಷಕರು ಯೋಚಿಸುವುದರ ಅಗತ್ಯವಿದೆ.

ಆ ನಿಟ್ಟಿನಲ್ಲಿ ಮಕ್ಕಳ ಈ ದೀರ್ಘಾವಧಿ ರಜಾದಿನದ ಕೆಲ ಸಮಯವಾದರೂ ಅವರಲ್ಲಿ ಒಂದಿಷ್ಟು ಹೊಸ ಅರಿವನ್ನು ಮೂಡಿಸುವ ಪ್ರಯುತ್ನಕ್ಕೆ ವಿನಿಯೋಗವಾಗಲಿ ಎಂಬ ಆಶಯದೊಂದಿಗೆ 'ಚಿಂತನ ಉತ್ತರ ಕನ್ನಡ' ಕಳೆದ 15 ವರ್ಷಗಳಿಂದಲೂ ಮಕ್ಕಳ ಬೇಸಿಗೆ ರಜಾ ಶಿಬಿರಗಳನ್ನು ನಡೆಸಿಕೊಂಡು ಬರುತ್ತಿದೆ. ಇಲ್ಲಿ ಮಕ್ಕಳು ವರ್ಷವಿಡೀ ಶಾಲಾ ತರಗತಿಯ ನಾಲ್ಕು ಗೋಡೆಗಳ ಮಧ್ಯೆ ಪಠ್ಯಪುಸ್ತಕದೊಂದಿಗೆ ಹೋರಾಡಿ ಬೇಸತ್ತ ಮೈಮನಗಳಿಗೆ ಹೊಸ ಚೈತನ್ಯ ನೀಡುವ ಉತ್ಸಾಹದಲ್ಲಿ ಪರಸ್ಪರ ಪ್ರೀತಿ ಸೌಹಾರ್ದತೆಯಿಂದ ಕೂಡಿ, ಆಡಿ, ನಕ್ಕು ನಲಿಯುವಲ್ಲಿ ಗಳಿಸುವುದೇ ಅಪಾರ! ಒಟ್ಟೂ ಶಿಕ್ಷಣದ ಉದ್ದೇಶ ಮನುಷ್ಯ ಮನುಷ್ಯರನ್ನು ಪ್ರೀತಿಸುವ ಮಾನವೀಯ ಪ್ರತೀಕವೆಂಬಂತೆ, ಇಂತಹ ಶಿಬಿರದಲ್ಲಿ ಮಗು ತನ್ನ ಹೆತ್ತವರು, ಮನೆ ಎಂಬ ಕಟ್ಟು ಪಾಡುಗಳಿಂದ ದೂರವಿದ್ದು, ಇದ್ದಷ್ಟು ದಿನ ನಮ್ಮ ಒಡನಾಡಿಗಳೊಂದಿಗೆ ಜಾತಿ-ಮತ, ಬಡವ-ಶ್ರೀಮಂತ, ಮೇಲು-ಕೀಲು ಎಂಬ ಮಾನವ ನಿರ್ಮಿತ ಎಲ್ಲ ಅಡಕಟ್ಟುಗಳನ್ನೂ ಮೀರಿ, ಒಂದಾಗಿ ಬೆರೆತು, ಆಡಿ, ನಲಿದು ಪರಸ್ಪರ ಸ್ಪಂದಿಸುವಲ್ಲಿ ತನ್ನ ಸುತ್ತಣ ಪರಿಸರ, ಅಲ್ಲಿಯ ವಿದ್ಯಮಾನಗಳಿಂದ ಕ್ರಮೇಣ ಪ್ರಪಂಚವನ್ನು ತಮ್ಮದೇ ಆದ ರೀತಿಯಲ್ಲಿ ಅರಿಯುವ ಪ್ರಯತ್ನ, ಬಹುಶಃ ಮುಂದೆಯೂ ಅವರಿಗೆ ಸಮಾಜಮುಖಿಯಾಗಿ ಸಾಗುವಲ್ಲಿ, ಪ್ರೇರಣೆಯಾದೀತು ಎಂಬ ಆಶಯ ಕೂಡ ಸಂಘಟಕದದ್ದು.

**<u>ಶಾಲೆಯಲ್ಲಿ ಕಲಿತದ್ದು ಮಾತ್ರ ಶಿಕ್ಷಣ ಎಂಬ ಭ್ರಮೆಯಲ್ಲಿ ಇಂದು ಅದೆಷ್ಟೋ ಪಾಲಕ-ಪೋಷಕರು ತಮ್ಮ ಮಕ್ಕಳನ್ನು ರಜಾ ದಿನಗಳಲ್ಲೂ ಬಿಡದೆ ಟ್ಯೂಷನ್, ಕೋಚಿಂಗ್ ಕ್ಲಾಸ್, ಕಂಪ್ಯೂಟರ್ ಎಂದೆಲ್ಲಾ ಯಾವ ಯಾವುದೋ ತರಗತಿಗಳಿಗೆ ಬಲವಂತವಾಗಿ ದಬ್ಬುವುದುಂಟು. ಆದರೆ ಮಕ್ಕಳು ಪಠ್ಯೇತರ ಚಟುವಟಿಕೆಗಳಲ್ಲಿ ಪಡುವ ಉತ್ಸಾಹ, ಕುತೂಹಲಕ್ಕೆ ಹೆತ್ತವರು ವ್ಯಕ್ತಪಡಿಸುವ ಇಂತಹ ನಿರಾಸಕ್ತಿ, ವಿರೋಧಗಳು ಮಗುವಿನ ಅದಮ್ಯ ಲವಲವಿಕೆ, ಉತ್ಸಾಹವನ್ನೇ ಶಾಶ್ವತವಾಗಿ ನಾಶ ಮಾಡುವ ಸಾಧ್ಯತೆಯಿದೆ.</u>**

ಅದರಂತೆ-ಇತ್ತೀಚಿನ ಕೆಲವು ವರ್ಷಗಳಿಂದ ಕುಮಟಾದಲ್ಲಿ 'ಚಿಂತನ' ತನ್ನ 'ರಂಗ ಅಧ್ಯಯನ' ಘಟಕದೊಂದಿಗೆ ಈ ಹಿಂದೆ ನಡೆಸಿದ ಬೇಸಿಗೆ ಶಿಬಿರಕ್ಕಿಂತ ಕೊಂಚ ಭಿನ್ನವಾಗಿ ಆಶಯ ಕೇಂದ್ರಿತವಾಗಿ ಶಿಬಿರವನ್ನು ನಡೆಸುತ್ತಿದ್ದು, 'ಪ್ರೀತಿ', 'ಸತ್ಯಾಗ್ರಹ-100' ಹೀಗೆ ವರ್ಷಂಪ್ರತಿ ಹೊಸ ಹೊಸ ಆಶಯಗಳ ಸುತ್ತ ಕಟ್ಟಲ್ಪಡುತ್ತಾ ಇದೀಗ 'ಊರ ಅರಿವು' ಎಂಬ ಮಾಲಿಕೆಯಲ್ಲಿ ಶಿಬಿರವನ್ನು ನಡೆಸಲಾಗಿತ್ತು. ಜನರಲ್ಲಿ ಸಾಮಾಜಿಕ ಅರಿವನ್ನು ಮೂಡಿಸಿದ ಕನ್ನಡದ ಕವಿ, ಸಾಹಿತಿಗಳ ಮಕ್ಕಳ ಕುರಿತಾದ ಸಾಹಿತ್ಯ ಕೃತಿಗಳನ್ನೇ ಆಧಾರವಾಗಿಟ್ಟು ಕೊಂಡು ಆ ಮೂಲಕ ಜನರ ಹಾಗೂ ಮಕ್ಕಳ ಅರಿವಿನ ವ್ಯಾಪ್ತಿ ವಿಸ್ತರಿಸಲಿ ಎಂಬ ಸಂಸ್ಥೆಯ ಆಶಯದಂತೆ, ಈ ವರ್ಷ ಉತ್ತರ ಕನ್ನಡದ ಹಿರಿಯ ಸಾಹಿತಿ ಡಾ: ಆರ್.ವಿ.ಭಂಡಾರಿ ಯವರ ಸಾಹಿತ್ಯ ವನ್ನಾಧರಿಸಿ ಶಿಬಿರವನ್ನು ನಡೆಸಲಾಗಿತ್ತು. ಡಾ:ಆರ್.ವಿ.ಯವರು ಮಕ್ಕಳ ಬಗ್ಗೆ ಸದಾ ಕಳಕಳಿ, ಕಾಳಜಿಯುಳ್ಳವರಾಗಿದ್ದು, ಅವರಿಗಾಗಿ ತಮ್ಮ ಜೀವನ ಪ್ರೀತಿಯನ್ನೇ ನೀಡುತ್ತಾ ಬಂದವರು. ಇಲ್ಲಿ ಅವರು ಮಕ್ಕಳ ಕುರಿತಾಗಿ ಬರೆದ ಕಥೆ, ಕವನ, ನಾಟಕಗಳ ಕುರಿತು ಮಕ್ಕಳಿಂದ ವಿವಿಧ ಚಟುವಟಿಕೆಗಳನ್ನು ಅಭಿವ್ಯಕ್ತಿಸಲಾಯಿತು. ಡಾ: ಆರ್.ವಿ. ಯವರ ಮಕ್ಕಳ ಸಾಹಿತ್ಯದ ಪ್ರಮುಖ ಆಶಯವಾಗಿರುವ ಬೆಳಕು, ಕನಸು, ಹಕ್ಕಿ ಮತ್ತು ಬುದ್ಧ ಎಂಬ ನಾಲ್ಕು ಗುಂಪಾಗಿ ಮಕ್ಕಳು ಶಿಬಿರದಲ್ಲಿ ಕ್ರಿಯಾಶೀಲವಾಗಿ ತಮ್ಮ ಪ್ರತಿಭೆ, ಸೃಜನಶೀಲತೆಯನ್ನು ಪ್ರದರ್ಶಿಸಿದರು. ಮಕ್ಕಳ ಕವಿತೆಯ ಅರ್ಥಕನ್ವಯಿಸಿ ಚಿತ್ರ ಬಿಡಿಸಿದರು. ಮಣ್ಣಿನ ಕಲಾಕೃತಿ ರಚಿಸಿದರು. ಕವಿತೆಗೆ ಹೆಜ್ಜೆಗೂಡಿಸಿ, ರಾಗಸಂಯೋಜಿಸಿ ಹಾಡಿ ನರ್ತಿಸಿದರು. ಅವರ ಓದಿದ ಕಥೆಯ ಸಾತ್ವಿಕತೆಯ ಕುರಿತು ಅನುಭವ, ಚರ್ಚೆ ನಡೆಸಿದರು. ಅವರ 'ಬೆಳಕಿನ ಕಡೆಗೆ' ಹಾಗೂ 'ನಾನೂ ಗಾಂಧೀ ಆಗ್ತೀನಿ'



ಎಂಬೆರಡು ಕಿರು ನಾಟಕದಲ್ಲಿ ಬರುವ ಬುದ್ಧ, ಗಾಂಧಿ ಇತರ ಪಾತ್ರಗಳಿಗೆ ಜೀವ ತುಂಬಿ ಮನೋಜ್ಞವಾಗಿ ಅಭಿನಯಿಸಿದ್ದು ಹೀಗೆ ಒಂದು ವಾರ ಕಾಲ ಶಿಬಿರದಲ್ಲಿ ಸಾಹಿತಿಯ ಆಶಯದಂತೆ ಕನಸಾಗಿ, ಬೆಳಕಾಗಿ, ಬುದ್ಧ, ಗಾಂಧಿ, ಹಕ್ಕಿ ಚಿಟ್ಟೆ ಎಲ್ಲವೂ ಆಗಿ, ಆಡಿ, ಹಾಡಿ, ನಕ್ಕು, ನಲಿದು ಒಬ್ಬ ಮಕ್ಕಳ ಸಾಹಿತಿಯ ಜೀವನ ಪೂರ್ಣ ಸಾಧನೆಯನ್ನು ತಮ್ಮ ಸೃಜನಶೀಲ ಕೌಶಲ್ಯಗಳ ಮೂಲಕ ಮಕ್ಕಳು ಊರಿಗೆ, ನಾಡಿಗೆ ಪರಿಚಯಿಸಿ, 'ಊರ ತಿರಿ'ವನ್ನು ಹೆಚ್ಚಿಸಿದ್ದು ಶಿಬಿರದ ಸಾಧನೆ.

ಒಟ್ಟಾರೆ ಶಿಬಿರದಲ್ಲಿ ಮಕ್ಕಳ ಒಟ್ಟು ಭಾವನೆ, ಕಲ್ಪನೆ, ವಿಚಾರಗಳಿಗೆ ಹೊಸ ಮೆರಗನ್ನು, ಚೈತನ್ಯವನ್ನು ನೀಡುವಲ್ಲಿ ಯಶಸ್ವಿಯಾದ ಚಿಂತನದ ಬೇಸಿಗೆ ಶಿಬಿರದ ಪ್ರಯತ್ನ ಶ್ಲಾಘನೀಯ. ಹಾಗೆಯೇ ಈ ಯಶಸ್ಸಿನ ಹಿಂದೆ ಶ್ರೀ ಪಾದ ಭಟ್, ಕಿರಣ್ ಭಟ್, ವಿಠ್ಠಲಭಂಡಾರಿ, ಸತೀಶ್ ಯಲ್ಲಾಪುರ, ಚಂದ್ರು ಉಡುಪಿ, ದಾಮೋದರ, ಅನಂತ, ಮಾಸ್ತಿಗೌಡ ಮಹೇಶ, ರಾಘು ಹಾಗೂ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ದುಡಿದ ಎಲ್ಲಾ ಹಿರಿ-ಕಿರಿಯ ಸಂಗಾತಿಗಳ ಶ್ರಮವೂ ಪ್ರಶಂಸನೀಯ.

**-ಬಿ.ಮಾ.ಗೌಡ**, ಹೊನ್ನಾವರ

# ಬುಷ್ ಉವಾಚ........

ಪುಟ 7 ರಿಂದ

ಜನಗಳನ್ನು ಮತ್ತೆ ಬಡತನದ ಮಟ್ಟಗಳ ಕೆಳಕ್ಕೆ ತಳ್ಳುತ್ತಿದೆ. ಕೇವಲ ಕಳೆದ ವರ್ಷದಷ್ಟೇ ಆಹಾರವನ್ನು ಹಂಚಲು ಡಬ್ಲ್ಯುಎಫ್‌ಪಿ ಗೆ ಈ ವರ್ಷ ಇನ್ನೂ 70ಕೋಟಿ ಡಾಲರು ಹೆಚ್ಚಿನ ಹಣ ಬೇಕಂತೆ. ಭಾರತದಲ್ಲಿರುವ ನಮಗೆ ಇದರ ಅರ್ಥ, 'ಹೊಳೆಯುವ' ಮತ್ತು 'ನರಳುವ' ಭಾರತಗಳ ನಡುವೆ ಇನ್ನಷ್ಟು ಕಂದರ. ಅಂದರೆ ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳು(ಈಗ 50ಶೇ.) ಮತ್ತು ಗರ್ಭಿಣಿಯರ ಸಂಖ್ಯೆ(ಈಗಲೇ 78ಶೇ.) ಇನ್ನೂ ಹಲವು ಲಕ್ಷಗಳಷ್ಟು ಹೆಚ್ಚಲಿದೆ.

ಈಗಲೇ 78ಶೇ. ಭಾರತೀಯರ ಬಳಿ ದಿನದ ಖರ್ಚಿಗೆ 20ರೂ. ಕೂಡಾ ಇಲ್ಲ. ಅಧಿಕೃತ ಅಂಕಿ-ಅಂಶಗಳ ಪ್ರಕಾರ 1997ರಿಂದ 2005ರ ನಡುವೆ 1,36,324 ರೈತರು ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಹಾರ ಧಾನ್ಯಗಳ ಬಳಕೆ 1990-91ರಲ್ಲಿ 468ಗ್ರಾಂ ಇದ್ದದ್ದು 2005-06ರಲ್ಲಿ 412ಗ್ರಾಂಗೆ ಇಳಿದಿದೆ. ಪ್ರೋಟೀನ್‌ನ ಮುಖ್ಯ ಮೂಲವಾದ ಬೇಳೆಕಾಳುಗಳ ಬಳಕೆ ಪ್ರಮಾಣ ಈ ಅವಧಿಯಲ್ಲಿ 42ಗ್ರಾಂನಿಂದ (1956-57ರಲ್ಲಿ 72ಗ್ರಾಂ) 33ಗ್ರಾಂಗಿಳಿದಿದೆ.

ಹೋಗಲಿ, ಭಾರತೀಯರು ಈಗ ಹೆಚ್ಚು ತಿನ್ನುತ್ತಿದ್ದಾರೆ ಎಂದೇ ಇಟ್ಟುಕೊಳ್ಳೋಣ. ಆದರೆ ಇದು ಜಾಗತಿಕ ಆರ್ಥಿಕದ ಮೇಲೆ ಪರಿಣಾಮ ಬೀರಬೇಕಾದರೆ ವಿಶ್ವ ಮಾರುಕಟ್ಟೆಗೆ ಭಾರತದ ರಫ್ತಿನ ಪ್ರಮಾಣ ಗಮನಾರ್ಹವಾಗಿರಬೇಕು. ಆದರೆ ನಿಜಸಂಗತಿಯೆಂದರೆ ಒಟ್ಟು ಜಾಗತಿಕ ರಫ್ತಿನಲ್ಲಿ ಭಾರತದ ಪಾಲು ಕೇವಲ 1 ಶೇಕಡ. ಕೃಷಿ ಉತ್ಪನ್ನಗಳ ಪಾಲು ಆ 1 ಶೇ. ದಲ್ಲಿ 11.7ಶೇ.ವಷ್ಟೇ. ಆದ್ದರಿಂದ ಭಾರತೀಯರ ಆಹಾರ ಬಳಕೆಯ ಪ್ರಮಾಣ ಯಾವ ರೀತಿಯಲ್ಲೂ ಜಾಗತಿಕ ಅಹಾರ ಬಿಕ್ಕಟ್ಟಿಗೊಂದು ಕಾರಣವಾಗಲು ಸಾಧ್ಯವಿಲ್ಲ.

**ಶ್ರೀಮಂತರ ಕಾರು ನಡೆಸಲು ಬಡವರ ಆಹಾರಧಾನ್ಯ**

ಕೆಲವು ವರ್ಷಗಳ ಹಿಂದೆ, ಫಿಡೆಲ್ ಕಾಸ್ಟ್ರೋ, ಆಹಾರಧಾನ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ಜೈವಿಕ ಇಂಧನಗಳತ್ತ ತಿರುಗಿಸಿದರೆ ಒಂದು ಜಾಗತಿಕ ಆಹಾರಧಾನ್ಯ ಬಿಕ್ಕಟ್ಟು ಬರಲಿದೆ ಎಂದು ಎಚ್ಚರಿಸಿದ್ದರು. ಆದರೆ ಆಗ ಬುಶ್ ಈ ರೀತಿ ತಿರುಗಿಸುವುದನ್ನು ಸಮರ್ಥಿಸಿಕೊಂಡಿದ್ದರು. ತಾನೊಬ್ಬ 'ಎಥನೋಲ್ ವ್ಯಕ್ತಿ' ಎಂದು ಹೇಳಿಕೊಳ್ಳುತ್ತಾ "ಅಮೆರಿಕಾಕ್ಕೆ ಇಂಧನ ಬೆಳೆಸುವುದರಲ್ಲಿ ಅರ್ಥವಿದೆ ಎಂದು ನನ್ನ ಭಾವನೆ. ನಾವು ವಾಹನಗಳಿಗೆ ಇಂಧನ ತುಂಬಿಸಲು ಹೋದಾಗ ನಮ್ಮನ್ನು ಇಷ್ಟಪಡದಿರಬಹುದಾದ ಯಾವುದೋ ದೇಶಕ್ಕೆ ಹಣ ತೆರುವುದಕ್ಕಿಂತ ನಮ್ಮ ರೈತರಿಗೆ ತೆರಲು ಇಷ್ಟಪಡುತ್ತೇನೆ" ಎಂದು ಕೊಚ್ಚಿಕೊಂಡಿದ್ದರು.

ವಿಶ್ವದ ಮುಸುಕಿನ ಜೋಳದ ಉತ್ಪಾದನೆಯಲ್ಲಿನ ಬೆಳವಣಿಗೆಯನ್ನೆಲ್ಲ ಜೈವಿಕ ಇಂಧನದತ್ತ ತಿರುಗಿಸಲಾಗಿದೆ. 2004 ರಿಂದ 2005ರ ನಡುವೆ ಇದರ ಉತ್ಪಾದನೆಯಲ್ಲಿ 51 ಮಿಲಿಯ ಟನ್ ಹೆಚ್ಚಳವಾಗಿದ್ದು ಇದನ್ನೆಲ್ಲ ಕೇವಲ ಅಮೆರಿಕವೊಂದೇ ಜೈವಿಕ ಇಂಧನವಾದ ಇಥನೋಲ್ ಉತ್ಪಾದನೆಗೆ ಬಳಸಿದೆ ಎಂದು ವಿಶ್ವ ಬ್ಯಾಂಕ್ ತಿಳಿಸುತ್ತದೆ. 2010ರ ವೇಳೆಗೆ ಒಟ್ಟು ಇಂಧನದ 6ಶೇ. ಜೈವಿಕ ಇಂಧನವಾಗಿರಬೇಕು ಎಂದು ಯುರೋಪಿಯನ್ ಒಕ್ಕೂಟ ಸಾರಿದೆ. ಸರಾಸರಿಯಾಗಿ ಒಂದು ವಾಹನದ ಇಂಧನದ ಟ್ಯಾಂಕನ್ನು ತುಂಬಲು ಒಬ್ಬ ವ್ಯಕ್ತಿ ಒಂದು ವರ್ಷ ಬಳಸಬಹುದಾದ ಮುಸುಕಿನ ಜೋಳ ಬೇಕಾಗುತ್ತದೆ!

**ಜೂಜುಕೋರತನದ ಆಮದು !**

ಆಹಾರ ಸಾಮಗ್ರಿಗಳ ಬೆಲೆಗಳು ಈಗ ಇದ್ದಕ್ಕಿದ್ದಂತೆ ಏರಲು ಜಾಗತಿಕವಾಗಿ ಆಹಾರಧಾನ್ಯಗಳ ಸರಕು ವಿನಿಮಯಗಳಲ್ಲಿನ ಜೂಜುಕೋರತನವೇ ಮುಖ್ಯ ಕಾರಣ ಎನ್ನಬಹುದು. ಇದಕ್ಕೂ ಈಗ ಅಮೆರಿಕಾದಲ್ಲಿ ಸಬ್-ಪ್ರೈಮ್ ಮನೆಸಾಲದ ಬಿಕ್ಕಟ್ಟಿನಿಂದಾಗಿ ಉಂಟಾದ ಆರ್ಥಿಕ ಹಿಂಜರಿತಕ್ಕೂ ನೇರ ಸಂಬಂಧವಿದೆ. ಈ ಬಿಕ್ಕಟ್ಟು ಹಲವು ದೈತ್ಯ ಜಾಗತಿಕ ಹಣಕಾಸು ಕಂಪನಿಗಳನ್ನು ದಿವಾಳಿಯ ಅಂಚಿಗೆ ತಂದು ನಿಲ್ಲಿಸಿದ್ದು, ಜಾಗತಿಕ ಸಟ್ಟಾಕೋರರು ಈಗ ಸಟ್ಟಾ ವ್ಯವಹಾರಗಳನ್ನು ಸರಕು ವಿನಿಮಯಗಳತ್ತ ತಿರುಗಿಸಿದ್ದಾರೆ.

ಭಾರತದಲ್ಲಿ ಬಹು ಸರಕು ವಿನಿಮಯದ ಪ್ರಮಾಣ ಸರಾಸರಿ ದಿನಕ್ಕೆ 300 ಕೋಟಿ ಡಾಲರುಗಳಷ್ಟು. 2007-08ರಲ್ಲಿ ಈ ಮಾರುಕಟ್ಟೆಯ ಒಟ್ಟು ಪ್ರಮಾಣ 40,65,989 ಕೋಟಿ ರೂಪಾಯಿಗಳಷ್ಟು! ಸೂಪರ್ ಲಾಭ ಮಾಡಿಕೊಳ್ಳುತ್ತಿರುವ ಸಟ್ಟಾ ವ್ಯಾಪಾರದ ಪ್ರಮಾಣ ಇದು. ಈ ಸೂಪರ್ ಲಾಭ ಸಾಧ್ಯವಾಗಬೇಕಾದರೆ ಸರಕಾರ ಅಸಹಾಯಕವಾಗಿರಬೇಕು. ಅಂದರೆ ಸಟ್ಟಾವ್ಯಾಪಾರದಲ್ಲಿ ಯಾವುದೇ ಕೃಷಿ ಸರಕಿನ ಬೆಲೆಯೇರಿದಾಗ ಅದನ್ನು ಹತೋಟಿಗೆ ತರಲು ಸರಕಾರದ ಬಳಿ ಸಾಕಷ್ಟು ದಾಸ್ತಾನು ಇರದಂತಾಗಬೇಕು. ಅತ್ತ ಖಾಸಗೀ ವ್ಯಾಪಾರಿಗಳ ಬಳಿ ಬೆಲೆಗಳು ಇಳಿಯದಂತೆ ತಡೆಯಲು ಮಧ್ಯಪ್ರವೇಶಿಸಲು ಸಾಲುವಷ್ಟು ದಾಸ್ತಾನುಗಳಿರಬೇಕು. ಈ ತಂತ್ರ ಫಲಿಸಬೇಕಾದರೆ ಆಹಾರಧಾನ್ಯಗಳನ್ನು ವಿತರಿಸುವ ಒಂದು ಪರಿಣಾಮಕಾರಿ ವ್ಯವಸ್ಥೆ ಇರಬಾರದು ! ಭಾರತದಲ್ಲಿ ಉದಾರೀಕರಣದ ಅಡಿಯಲ್ಲಿ ಆಗಿರುವುದು ಇದೇ. ಇದರಿಂದಲೇ ಬೆಲೆಯೇರಿಕೆಯಾಗಿದೆ. ಹೀಗೆ ಹಣದುಬ್ಬರವನ್ನಲ್ಲ, ಜೂಜುಕೋರತನವನ್ನೇ ಆಮದು ಮಾಡಲಾಗುತ್ತಿದೆ.

ಒಂದೇ ಒಂದು ಉದಾಹರಣೆಯನ್ನು ನೋಡಿ. ಹೆಚ್ಚಾಗಿ ಉತ್ತರ ಭಾರತದಲ್ಲಿ ಬೆಳೆಯುವ ಗುವಾರ್ ಬೀಜದ ಉತ್ಪಾದನೆ 2005-06ರಲ್ಲಿ 6ಲಕ್ಷ ಟನ್. ಆದರೆ ಈ ಬೆಳೆಯಲ್ಲಿ ಮುಂಗಡ ವ್ಯಾಪಾರದ ಪ್ರಮಾಣ 1692.6ಲಕ್ಷ ಟನ್. ಅದರ ಮೌಲ್ಯ 2,92,664.59 ಕೋಟಿ ರೂ.ಗಳು! ಇಂತಹ ಬೆರಗುಗೊಳಿಸುವಷ್ಟು ಅಗಾಧ ಜೂಜುಕೋರ ವ್ಯಾಪಾರ ಬೆಲೆಗಳನ್ನು ಮೇಲೇರಿಸುತ್ತಿರುವಾಗ ಜನಗಳಿಗೆ ಪರಿಹಾರ ಒದಗಿಸಲು ಇರುವ ಏಕೈಕ ದಾರಿಯೆಂದರೆ 25 ಆವಶ್ಯಕ ಸರಕುಗಳಲ್ಲಿನ ಸಟ್ಟಾ ವ್ಯಾಪಾರವನ್ನು ನಿಷೇಧಿಸುವುದು.

ಈ ಜೂಜುಕೋರ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳವನ್ನು ರಕ್ಷಿಸಲಿಕ್ಕಾಗಿಯೇ ಸಾಮ್ರಾಜ್ಯಶಾಹೀ ಜಾಗತೀಕರಣದ ಪ್ರಧಾನ ಚಾಲಕರಾದ ಜಾರ್ಜ್ ಬುಶ್ ಅಂಡ್ ಕಂಪನಿ ಜಗತ್ತಿನ ಗಮನವನ್ನು ಬೇರೆಡೆಗೆ ತಿರುಗಿಸಲು ಹೆಣಗುತ್ತಿದ್ದಾರೆ. ಅದಕ್ಕಾಗಿಯೇ ಭಾರತೀಯರು ಮತ್ತು ಚೀನೀಯರು ಹೆಚ್ಚು ತಿನ್ನುತ್ತಿದ್ದಾರೆ ಎಂಬ ಈ ಆರೋಪ. ಆದರೂ ಸಾಮ್ರಾಜ್ಯಶಾಹೀ ಜಾಗತೀಕರಣದ ಹೊಲಸು ಮುಖಕ್ಕೆ ಮುಖವಾಡ ತೊಡಿಸಲು ಸಾಧ್ಯವಿಲ್ಲ. ○

**ಮುಖ್ಯವಾಗಿ ದಲಿತ ಸಮುದಾಯ ಮತ ಬೆಂಬಲದ ಆಧಾರದ ಮೇಲೆ ಸಾಧಿಸಿದ ಹಿಡಿತದಿಂದಾಗಿ ಬಿಎಸ್‌ಪಿ ಒಂದು ರಾಜಕೀಯ ಪಕ್ಷವಾಗಿ ಬೆಳೆಯಲು ಸಾಧ್ಯವಾಗಿದೆ. ಆದರೆ ದಲಿತರ ಬದುಕಿನಲ್ಲಿ ಗಣನೀಯ ಬದಲಾವಣೆ ತರುವಲ್ಲಿ ಅದು ಶಕ್ತವಾಗಿದೆಯೇ?**

# ಮಾಯಾವತಿ ರಾಜ್ಯದಲ್ಲೂ ದಲಿತರಿಗಿಲ್ಲ ರಕ್ಷಣೆ

ನಿತ್ಯಾನಂದಸ್ವಾಮಿ

ಹದಿನೈದರ ಹರೆಯದ ದಲಿತ ಬಾಲಕಿಯೊಬ್ಬಳನ್ನು ಸ್ಥಳೀಯ ಪಂಚಾಯತ್ ಆದೇಶದ ಮೇರೆಗೆ ಥಳಿಸಿ ಕೊಂದು ಹಾಕಿದ ಧಾರುಣ ಘಟನೆ ಇತ್ತೀಚೆಗೆ ಉತ್ತರ ಪ್ರದೇಶದ ಕುಶಿನಗರ ಜಿಲ್ಲೆಯ ಮಹಾದೇವ ಗ್ರಾಮದಿಂದ ವರದಿಯಾಗಿದೆ.

ಬಾಲಕಿಗೆ 50 ಲಾಠಿ ಏಟುಗಳನ್ನು ನೀಡುವಂತೆ ಪಂಚಾಯತ್ ಆದೇಶ ನೀಡಿತ್ತು. ಆದರೆ ಶಿಕ್ಷೆ ಜಾರಿ ಮಾಡುವಾಗ ಹತ್ತಾರು ಯುವಕರು ಯದ್ವಾತದ್ವಾ ಥಳಿಸಿದುದರಿಂದ ಬಾಲಕಿ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಳು.

ಬಿಹಾರಿ ಬಿಂದ್ ಎಂಬ ದಲಿತನೊಬ್ಬನ ಮಗಳು ಗುಡಿಯಾ ಸ್ಥಳೀಯ ಮೇಲ್ಜಾತಿಯ ಯುವಕನೊಬ್ಬನೊಂದಿಗೆ ಪ್ರೇಮ ಸಂಬಂಧ ಹೊಂದಿದ್ದಳು. ಇದರ ವಿಚಾರಣೆಗಾಗಿ ಪಂಚಾಯತ್ ಸಭೆ ಸೇರಿತು. ಮೇಲ್ಜಾತಿ ಯುವಕನ ಮನೆಯವರ ಹೇಳಿಕೆಯನ್ನು ಆಲಿಸಿದ ಪಂಚಾಯತ್, ಬಾಲಕಿಯು ತಪ್ಪಿತಸ್ಥಳೆಂದು ಏಕಪಕ್ಷೀಯವಾಗಿ ತೀರ್ಮಾನಿಸಿತು. ಈ 'ಪಾಪ'ಕ್ಕಾಗಿ ಗುಡಿಯೊಳಗೆ 50 ಲಾಠಿಯೇಟುಗಳನ್ನು ನೀಡುವಂತೆ ಅದು ತೀರ್ಪು ನೀಡಿತು.

ತಮ್ಮ ಮಗಳು ನಿರಪರಾಧಿಯೆಂದು ಗುಡಿಯಾಳ ಹೆತ್ತವರು ಗೋಳಿಟ್ಟರೂ ಪಂಚಾಯಿತಿ ಸದಸ್ಯರ ಮನ ಕರಗಲಿಲ್ಲ. ಪ್ರಜ್ಞಾಶೂನ್ಯಳಾಗಿ ಬಿದ್ದ ಬಾಲಕಿ ಅಲ್ಲಿಯೇ ಕೊನೆಯುಸಿರೆಳೆದಳು. ಇದರಿಂದ ಬೆದರಿದ ಗ್ರಾಮಸ್ಥರು ಶವ ಸಂಸ್ಕಾರಕ್ಕೆ ತುರ್ತಾಗಿ ಸಿದ್ಧತೆ ನಡೆಸಿದರು. ಅಷ್ಟರಲ್ಲಿ ಪೋಲೀಸ್ ಠಾಣೆಗೆ ಸುದ್ದಿ ಮುಟ್ಟಿತಾದರೂ ಪೋಲಿಸರು ಬರುವಷ್ಟರಲ್ಲಿ ಪಂಚಾಯತ್ ಸದಸ್ಯರು ಹಾಗೂ ಬಾಲಕಿಯನ್ನು ಥಳಿಸಿ ಕೊಂದವರು ಪರಾರಿಯಾಗಿದ್ದರು.

ತನ್ನ ಮಗಳು ಕೇವಲ ಕೆಳಜಾತಿಯವಳೆಂಬ ಕಾರಣಕ್ಕಾಗಿ ಪ್ರಾಣ ಕಳೆದುಕೊಂಡಳು. ಇದರಲ್ಲಿ ಆಕೆಯ ತಪ್ಪಿದ್ದರೆ ಅಷ್ಟೇ ತಪ್ಪು ಮೇಲ್ಜಾತಿಯ ಆ ಯುವಕನದ್ದು ಇದೆ. ಆದರೆ ಈ ಬಗ್ಗೆ ಯಾರೂ ಧ್ವನಿಯೆತ್ತಲೇ ಇಲ್ಲ ಎಂದು ಮಗಳ ಸಾವಿನಿಂದ ಶೋಕತಪ್ತನಾಗಿರುವ ಬಿಂದ್ ರೋಧಿಸುತ್ತಿದ್ದಾನೆ!

**ಬಿ.ಎಸ್.ಪಿ.ವೈಫಲ್ಯ?**

ಉತ್ತರ ಪ್ರದೇಶದಲ್ಲಿ ಇತ್ತೀಚೆಗೆ ನಡೆದ ಉಪಚುನಾವಣೆಯಲ್ಲಿ 2 ಲೋಕಸಭಾ ಮತ್ತು 3 ವಿಧಾನಸಭಾ ಕ್ಷೇತ್ರಗಳಲ್ಲಿ ಆಡಳಿತರೂಢ ಬಹುಜನ ಸಮಾಜ ಪಕ್ಷ ಜಯಭೇರಿ ಬಾರಿಸಿದೆ. ಆದರೆ ಆ ರಾಜ್ಯದಲ್ಲಿ ದಲಿತರ ಮೇಲೆ ಮೇಲ್ಜಾತಿಯ ದೌರ್ಜನ್ಯಗಳು ನಡೆಯುತ್ತಲೇ ಇದೆ. ಇತ್ತೀಚೆಗೆ ಇಂತಹ ಪ್ರಕರಣಗಳು ಹೆಚ್ಚುತ್ತಿವೆ.


ಇಡೀ ಉತ್ತರ ಪ್ರದೇಶದಲ್ಲಿ, ಮೇಲೆ ಉಲ್ಲೇಖಿಸಿದ ಘಟನೆ ನಡೆದ ಕೆಲವೇ ದಿನಗಳ ಹಿಂದೆ, ಕಾನ್ಪುರ ಸಮೀಪ ಘಟಂಪುರ ಪೋಲಿಸ್ ಠಾಣೆ ವ್ಯಾಪ್ತಿಗೆ ಸೇರಿದ ನಿರ್ಸಿ ಎಂಬ ಗ್ರಾಮದಲ್ಲಿ ಮೇಲ್ಜಾತಿಗೆ ಸೇರಿದ ಸ್ಥಳೀಯ ಬಿಜೆಪಿ ನಾಯಕ ವಿಜಯಸಾಚನ್ ಎಂಬುವನು 65 ವರ್ಷ ಪ್ರಾಯದ ದಲಿತ ಮಹಿಳೆಯೊಬ್ಬಳನ್ನು ಮತ್ತು ಆಕೆಯ 19 ವರ್ಷ ಪ್ರಾಯದ ಮೊಮ್ಮಗಳನ್ನು ಕಡಿದು ಕೊಂದ ಬರ್ಬರ ಘಟನೆ ನಡೆದಿದೆ. ಮೃತರನ್ನು ಚೇಡಾಲಾಲ್‌ನ ಪತ್ನಿಸುಮಿತ್ರಾ ಹಾಗೂ ರಾಮ್ ಬಾಬು ಕೋರಿ ಎಂಬಾತನ ಪುತ್ರಿ ಸುನೀತಾ ಎಂದು ಗುರುತಿಸಲಾಗಿದೆ. ಕೃಷಿ ಜಮೀನೊಂದರ ವಿವಾದವೇ ಈ ಅವಳಿ ಹತ್ಯೆಗೆ ಕಾರಣವೆನ್ನಲಾಗಿದೆ.

[illegible] ಇಂತಹ [illegible] ಗಳು [illegible] ರ್ಕಾರ ಇರುವ [illegible] ಗಳಲ್ಲಿ [illegible]

[illegible] ನಡೆಯುತ್ತಿವೆ. ಬಿಜೆಪಿ ಅಧಿಕಾರದಲ್ಲಿರುವ ಮಧ್ಯಪ್ರದೇಶದಲ್ಲಿ ಇತ್ತೀಚೆಗೆ ಪರಿಶಿಷ್ಟ ಜಾತಿಗೆ ಸೇರಿದ 15 ಮಂದಿಯನ್ನು ಮೇಲ್ಜಾತಿ ಠಾಕೂರರು ಗ್ರಾಮದಿಂದ ಹೊರಗಟ್ಟಿ ಮತ್ತೆಂದು ಅವರು ಗ್ರಾಮಕ್ಕೆ ಮರಳದಂತೆ ಬೆದರಿಕೆ ಹಾಕಿದ್ದಾರೆ. ಜಬಲ್ಪುರ ಹತ್ತಿರದ ಈ ಗ್ರಾಮದಲ್ಲಿ ಬಹಿಷ್ಕಾರಕ್ಕೆ ಒಳಗಾದ ಈ ದಲಿತರು ಮಾಡಿದ ತಪ್ಪೆಂದರೆ ಠಾಕೂರರ ಎದುರಿನಲ್ಲಿ ಬೀಡಿ ಸೇದಿದ್ದು!

ನರೇಂದ್ರ ಮೋದಿಯ ಗುಜರಾತಿನ ಪಾಲನ್‌ಪುರ ಬಡಾವಣೆಯ 100ಕ್ಕೂ ಹೆಚ್ಚು ದಲಿತರನ್ನು ಮೇಲ್ಜಾತಿಯವರು ಅವರ ಹಳ್ಳಿಯಿಂದ ಹೊರದೂಡಿದ್ದು ಅವರು ಕಳೆದ 8 ತಿಂಗಳಿಂದ ನಿರಾಶ್ರಿತರಾಗಿದ್ದಾರೆ. ಜಿಲ್ಲಾಧಿಕಾರಿ ಕಛೇರಿಯ ಹತ್ತಿರದಲ್ಲಿ ನಿರ್ಮಿಸಿರುವ ನಿರಾಶ್ರಿತರ ಶಿಬಿರದಲ್ಲಿ ಇವರು ದಿನಕಳೆಯುತ್ತಿದ್ದಾರೆ. ಇವರಲ್ಲಿ ಪತಿಯನ್ನು ಕಳೆದುಕೊಂಡಿರುವ ಮಣಿಬೆನ್ ಕೂಡ ಒಬ್ಬರು. ರಜಪೂತ ಜಾತಿಯವರು ದಲಿತರಿಗೆ ಕಿರುಕುಳ ನೀಡಿದ್ದನ್ನು ವಿರೋಧಿಸಿ ನ್ಯಾಯಾಲಯದ ಮೆಟ್ಟಿಲೇರಿದ ಬಳಿಕ ಆಕೆಯ ಪತಿಯನ್ನು ಕೊಲೆ ಮಾಡಲಾಯಿತು. ಈ ಘಟನೆ ನಡೆದ ಬಳಿಕ ದಲಿತರ ಮೇಲೆ ಹಲ್ಲೆ ಮತ್ತು ಬೆದರಿಕೆ ಪ್ರಕರಣಗಳು ಹೆಚ್ಚುತ್ತಿರುವುದಲ್ಲದೆ ನಮ್ಮನ್ನು ಗ್ರಾಮದಿಂದಲೇ ಓಡಿಸಿದ್ದಾರೆ ಎಂದು ಮಣಿಬೆನ್ ಹೇಳುತ್ತಾರೆ.

ಕರ್ನಾಟಕದಲ್ಲಿಯೂ ಬಿಜೆಪಿ ಅಧಿಕಾರದಲ್ಲಿ ಪಾಲ್ಗೊಂಡಿದ್ದ ಅವಧಿಯಲ್ಲಿ ರಾಜ್ಯದ ಹಲವೆಡೆ ದಲಿತರ ಮೇಲೆ ದೌರ್ಜನ್ಯಗಳು ನಡೆದಿರುವುದನ್ನು ನಾವು ನೋಡಿದ್ದೇವೆ. ಬಿಜೆಪಿ ಅಧಿಕಾರಕ್ಕೆ ಬಂದಾಗ ಮೇಲ್ಜಾತಿ ಮೇಲ್ವರ್ಗದವರಿಗೆ ಕೆಳಜಾತಿ ಕೆಳವರ್ಗದವರ ಮೇಲೆ ದಬ್ಬಾಳಿಕೆ ನಡೆಸಲು ಕುಮ್ಮಕ್ಕು ಸಿಕ್ಕಂತಾಗುತ್ತದೆ. ಇದು ಸಹಜ ಎಂದು ಪರಿಗಣಿಸಬಹುದು. ಅದೂ ಖಂಡನೀಯವೇ. ಆದರೆ [illegible] ಹೋರಾಟ [illegible] ಒಳಿ [illegible] ಗೆ ಉತ್ತರ



ಪ್ರದೇಶದಲ್ಲಿ ಅಧಿಕಾರಕ್ಕೆ ಬಂದಿರುವ ಬಹುಜನ ಸಮಾಜಪಕ್ಷದ ಆಡಳಿತದಲ್ಲಿ ದಲಿತರಿಗೆ ರಕ್ಷಣೆ ಇಲ್ಲದಂತಾಗಿರುವುದನ್ನು ಯಾರು ಹೇಗೆ ಸಮರ್ಥಿಸಲು ಸಾಧ್ಯ?

**ದಲಿತರ ಮೇಲಿನ ದೌರ್ಜನ್ಯ ಉತ್ತರ ಪ್ರದೇಶದಲ್ಲೇ ಅಧಿಕ**

ಉತ್ತರಪ್ರದೇಶ ಎಂದೊಡನೆ ಉತ್ತುಂಗದಲ್ಲಿರುವ ದಲಿತ ರಾಜಕಾರಣದ ಚಿತ್ರಣ ಕಣ್ಮುಂದೆ ಬರುತ್ತದೆ. ದೇಶಕ್ಕೆ ಮೊದಲ ದಲಿತ ಮಹಿಳಾ ಮುಖ್ಯಮಂತ್ರಿಯನ್ನು ನೀಡಿದ ನಾಡದು. ಆದರೆ ಪರಿಶಿಷ್ಟ ಜಾತಿಯವರ ಮೇಲೆ ಅತಿ ಹೆಚ್ಚಿನ ಅಪರಾಧ ಪ್ರಕರಣಗಳು ನಡೆಯುತ್ತಿರುವ ರಾಜ್ಯ ಸಹ ಉತ್ತರ ಪ್ರದೇಶವೇ ಆಗಿದೆ.

ಭಾರತದ ಒಟ್ಟು ಜನಸಂಖ್ಯೆಯಲ್ಲಿ (2001 ರ ಜನಗಣತಿಯ ಪ್ರಕಾರ) ಶೇ.16.2 ರಷ್ಟು ಅಂದರೆ 17 ಕೋಟಿ ಜನ ಪರಿಶಿಷ್ಟ ಜಾತಿಗಳಿಗೆ ಸೇರಿದವರಾಗಿದ್ದಾರೆ. ಪರಿಶಿಷ್ಟ ಪಂಡಗಳ ಜನರನ್ನು ಅವರೊಂದಿಗೆ ಸೇರಿಸಿದರೆ ಒಟ್ಟು ದಲಿತರ ಸಂಖ್ಯೆ ಶೇ.24.4 ರಷ್ಟು ಅಂದರೆ 25 ಕೋಟಿ ಆಗುತ್ತದೆ. ಅತಿಹೆಚ್ಚು ಪರಿಶಿಷ್ಟ ಜಾತಿಗಳ ಜನಸಂಖ್ಯೆ ಇರುವ 12 ರಾಜ್ಯಗಳಲ್ಲಿ ಉತ್ತರ ಪ್ರದೇಶ ಮೊದಲನೆಯದು. ಉತ್ತರ ಪ್ರದೇಶದಲ್ಲಿ 352 ಲಕ್ಷ ಪರಿಶಿಷ್ಟ ಜಾತಿಗಳಿಗೆ ಸೇರಿದ ಜನರಿದ್ದಾರೆ. 185 ಲಕ್ಷ ಪರಿಶಿಷ್ಟ ಜಾತಿಯವರ ಜನಸಂಖ್ಯೆಯನ್ನು ಹೊಂದಿರುವ ಪಶ್ಚಿಮಬಂಗಾಳ ಎರಡನೇ ಸ್ಥಾನದಲ್ಲಿದೆ. ಪರಿಶಿಷ್ಟ ಜಾತಿಗಳಿಗೆ ಸೇರಿದ ಅತಿ ಹೆಚ್ಚು ಜನಸಂಖ್ಯೆ ಇರುವ ಹಾಗೂ ದಲಿತ ಪರ ಸರ್ಕಾರವನ್ನು ಹೊಂದಿರುವ ಉತ್ತರ ಪ್ರದೇಶದಲ್ಲೇ ದಲಿತರ ಮೇಲೆ ಹೆಚ್ಚೆಚ್ಚು ದೌರ್ಜನ್ಯಗಳು ನಡೆಯುತ್ತಿವೆ.

ಈ ಕೆಳಗಿನ ಅಂಕಿ ಅಂಶಗಳನ್ನು ಗಮನಿಸಿ, ರಾಷ್ಟ್ರೀಯ ಅಪರಾಧ ದಾಖಲೆಗಳ ಮಂಡಳಿಯ ಪ್ರಕಾರ 2005ರಲ್ಲಿ ಉತ್ತರ ಪ್ರದೇಶದಲ್ಲಿ ಪರಿಶಿಷ್ಟ ಜಾತಿಗಳವರ ವಿರುದ್ಧ ದೌರ್ಜನ್ಯದ 4,397 ಪ್ರಕರಣಗಳು ದಾಖಲಾಗಿದ್ದು ಇದು ಇಡೀ ದೇಶದಲ್ಲೇ ಅತಿ ಹೆಚ್ಚು. ಕೇಂದ್ರ ಗೃಹ ಸಚಿವಾಲಯದ ಅಂಕಿ ಅಂಶಗಳು ಹೇಳುವ ಪ್ರಕಾರ 2006ರಲ್ಲಿ ಉತ್ತರ [illegible] ದಲ್ಲಿ ಪರಿಶಿಷ್ಟ ಜಾತಿ [illegible] ದೌರ್ಜನ್ಯದ [illegible] ಪ್ರದೇಶದ [illegible] ವರ್ಷದಿಂದ ವರ್ಷಕ್ಕೆ [illegible] ಈ ಅಂಕಿ ಅಂಶಗಳು ದೃಢಪಡಿಸುತ್ತವೆ.

**ಹುಸಿಯಾಗುತ್ತಿರುವ ದಲಿತರ ನಿರೀಕ್ಷೆಗಳು**

ಒಂದು ವಂಚಿತ ಹಾಗೂ ಶತಮಾನಗಳಿಂದ ದಮನಕ್ಕೊಳಗಾದ ಜನಸಮೂಹ ದಂಗೆಯೆದ್ದು, ಏಪ್ರಿಲ್ 14, 1984 ರಂದು ಮಾನ್ಯವರ ಶ್ರೀ ಕಾನ್ಶಿರಾಂ ಜೀ ಅವರ ನೇತೃತ್ವದಲ್ಲಿ, ಡಾ: ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಿದ್ಧಾಂತ ಹಾಗೂ ಆದರ್ಶಗಳನ್ನು ಆಧಾರವಾಗಿಸಿ ಬಹುಜನ ಸಮಾಜ ಪಕ್ಷ ಎಂಬ ತಮ್ಮದೇ ಆದ ರಾಜಕೀಯ ಪಕ್ಷವನ್ನು ಸ್ಥಾಪಿಸಿದರು ಎಂದು ಮಾಯಾವತಿಯವರು ಹೇಳುತ್ತಾರೆ. ಅವರೇ ಹೇಳುವಂತೆ ಬಹುಜನ ಸಮಾಜ ಎಂಬುದು ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರನ್ನು ಮಾತ್ರವಲ್ಲ ಇತರ ಹಿಂದುಳಿದ ವರ್ಗಗಳನ್ನು, ಮತ್ತು ಸಿಖ್, ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಮತ್ತು ಬೌದ್ಧ ಮೊದಲಾದ ಧಾರ್ಮಿಕ ಅಲ್ಪಸಂಖ್ಯಾತರನ್ನು ಒಳಗೊಳ್ಳುತ್ತದೆ.

ಮೇಲ್ಜಾತಿ, ಮೇಲ್ವರ್ಗಗಳ ಹಿಡಿತದಲ್ಲೇ ಇರುವ ಕಾಂಗ್ರೆಸ್, ಬಿಜೆಪಿ ಮತ್ತು ಸಮಾಜವಾದಿ ಪಕ್ಷಗಳಿಂದ ಅವಮಾನಿತರಾಗಿದ್ದ ಉತ್ತರ ಪ್ರದೇಶದ ದಲಿತರಿಗೆ ಬಹುಜನ ಸಮಾಜ ಪಕ್ಷದ ಸ್ಥಾಪನೆ ಒಂದು ಆಶಾಕಿರಣವೇ ಆಗಿತ್ತು. ಅದು ಅವರಲ್ಲಿ ಹುಟ್ಟಿಸಿದ ನಿರೀಕ್ಷೆಗಳಿಗೆ ಮಿತಿಯೇ ಇರಲಿಲ್ಲ. ದಲಿತರು ಮತ್ತು ಇತರ ಹಿಂದುಳಿದ ವರ್ಗಗಳು ನೀಡಿದ ಬೆಂಬಲದಿಂದಾಗಿ ಬಿಎಸ್‌ಪಿಗೆ ಉತ್ತರ ಪ್ರದೇಶದಲ್ಲಿ 4 ಬಾರಿ ಅಧಿಕಾರಕ್ಕೆ ಬರಲು ಸಾಧ್ಯವಾಯಿತು.

ಉತ್ತರ ಪ್ರದೇಶದಲ್ಲಿ ಬಿಎಸ್‌ಪಿಯ ಜಾತಿ ಆಧಾರಿತ ಮಧ್ಯಪ್ರವೇಶದಿಂದ ದಲಿತರಲ್ಲಿ ಆತ್ಮವಿಶ್ವಾಸ ಮೂಡಿಸಿದೆ. ಮೇಲ್ಜಾತಿಗಳ ದಬ್ಬಾಳಿಕೆಯ ವಿರುದ್ಧ ಅವರನ್ನು ಸಶಕ್ತಗೊಳಿಸಿದೆ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ದೌರ್ಜನ್ಯದ ಪ್ರಕರಣಗಳು ದಾಖಲಾಗುತ್ತಿರುವುದೂ ಈ ಬೆಳವಣಿಗೆಯ ದ್ಯೋತಕವೇ ಆಗಿದೆ. ಈ ಹಿಂದೆ ದೌರ್ಜನ್ಯಕ್ಕೆ ಒಳಗಾದ ದಲಿತರು ಮೇಲ್ಜಾತಿಯವರ ವಿರುದ್ಧ ದೂರು ಸಲ್ಲಿಸಲು ಮುಂದೆ ಬರುತ್ತಿರಲಿಲ್ಲ.

ಆದರೆ, ತನ್ನ ಸ್ವಂತ ಶಕ್ತಿಯ ಮೇಲೆ ಅಧಿಕಾರಕ್ಕೆ ಬರಬೇಕೆಂಬ ಬಿಎಸ್‌ಪಿ ನಾಯಕತ್ವದ ಮಹತ್ವಾಕಾಂಕ್ಷೆಯಿಂದಾಗಿ ದಲಿತರು ನಿಧಾನವಾಗಿ ಅದರಿಂದ ದೂರ ಸರಿಯುತ್ತಿರುವುದು ಗೋಚರಿಸಲಾರಂಭಿಸಿದೆ. ಹೇಗಾದರೂ ಮಾಡಿ ಅಧಿಕಾರಕ್ಕೆ ಬರಬೇಕು ಎನ್ನುವುದೇ ಉದ್ದೇಶವಾದರೆ ಯಾವುದಾದರೂ ಒಂದು ಜಾತಿ, ಒಂದು ವರ್ಗವನ್ನು ಬೆಂಬಲಕ್ಕಾಗಿ ಅವಲಂಬಿಸುವುದು ಪ್ರಯೋಜನಕ್ಕೆ ಬರಲಾರದು. ದಲಿತರ ಅಸಹಾಯಕತೆ, ಅವರ ನಡುವೆ ಬೆಳೆದು ಬರುತ್ತಿರುವ ಎಚ್ಚರಿಕೆಯನ್ನು ಅಧಿಕಾರದ ಗದ್ದುಗೆಯನ್ನೇರಲು ಏಣಿಯಾಗಿ ಬಳಸಿದ್ದಾಯಿತು. ಆದರೆ ಆ ದಲಿತರ ನಿರೀಕ್ಷೆಗಳನ್ನು ಈಡೇರಿಸಲು ಬಿಎಸ್‌ಪಿ ವಿಫಲವಾಯಿತು. ಅದರ 'ಸಾಮಾಜಿಕ ಇಂಜಿನಿಯರಿಂಗ್' ಸಫಲವಾಯಿತು. ರಾಜ್ಯ ವಿಧಾನಸಭೆಯ ಒಟ್ಟು 402 ಸ್ಥಾನಗಳಲ್ಲಿ 208 ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಯಿತು. ಆದರೆ ಯಾವ ಜನವಿಭಾಗದ ಮೂಲ ಬೆಂಬಲದಿಂದ ಬಿಎಸ್‌ಪಿ ಉದ್ಭವವಾಗಿತ್ತೋ ಆ ವಿಭಾಗದ ಕನಸುಗಳನ್ನು ನನಸು ಮಾಡುವುದರಲ್ಲಿ ಸೋತು ಹೋಯಿತು.

**ಬಹುಜನ ಸಮಾಜದಿಂದ ಬ್ರಾಹ್ಮಣ ಸಮಾಜದತ್ತ**

ಕೇವಲ ದಲಿತ ಮತ್ತು ಹಿಂದುಳಿದವರ ಮತಗಳನ್ನು ಅವಲಂಬಿಸಿ ಮಾಯಾವತಿಯವರು ಸ್ವಂತ ಶಕ್ತಿಯಿಂದ ಉತ್ತರ ಪ್ರದೇಶದಂತಹ ಇಷ್ಟೊಂದು ದೊಡ್ಡ ರಾಜ್ಯದಲ್ಲಿ ಅಧಿಕಾರಕ್ಕೆ [illegible] ಸಾಧ್ಯವಿರಲಿಲ್ಲ. ಮಾಯಾವತಿಯವರು [illegible] ದೆಯೇ ತಮ್ಮ ಚು [illegible]

→

→

ತಂತ್ರವನ್ನು ರೂಪಿಸಿದ್ದರು. ಪ್ರತಿ ಮತಕ್ಷೇತ್ರಕ್ಕೂ ಪ್ರತ್ಯೇಕವಾದ ಜಾತಿ ಆಧಾರಿತ ತಂತ್ರ ಸಿದ್ಧವಾಗಿತ್ತು. ಈ ತಂತ್ರಕ್ಕೆ ಅನುಗುಣವಾಗಿ ಮಾಯಾವತಿಯವರು ಇತರ ಎಲ್ಲಾ ಪಕ್ಷಗಳಿಗಿಂತ ಬಹಳಷ್ಟು ಮೊದಲೇ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದರು.

ಈ ಬಾರಿ ಮಾಯಾವತಿಯವರಿಗೆ ಬ್ರಾಹ್ಮಣರ ಓಟುಗಳನ್ನು ಗೆದ್ದುಕೊಡುವಲ್ಲಿ ಸತೀಶ್‌ಚಂದ್ರ ಮಿಶ್ರ ಪ್ರಮುಖ ಪಾತ್ರವಹಿಸಿದ್ದರು. ಹಿಂದೆಲ್ಲ ಬ್ರಾಹ್ಮಣರನ್ನು ಕಾಂಗ್ರೆಸ್ ಓಲೈಸುತ್ತಾ ಬಂದಿತ್ತು. ಮೇಲ್ಜಾತಿ ಪಕ್ಷವೆಂದೇ ಗುರುತಿಸಲಾದ ಬಿಜೆಪಿಯೂ ಸಹ 90 ರ ದಶಕದ ಆದಿಯಲ್ಲಿ, ಅಯೋಧ್ಯೆ ಆಂದೋಲನದ ಮೂಲಕ ತನ್ನತ್ತ ವಾಲಿದ ಬ್ರಾಹ್ಮಣರನ್ನು ಚುನಾವಣೆಯಲ್ಲಿ ಬಳಸಿಕೊಂಡಿತ್ತು. ಆದರೆ ಇದೇ ಮೊದಲ ಬಾರಿಗೆ ಬಾರಿ ಬಹಿರಂಗವಾಗಿಯೇ ಬ್ರಾಹ್ಮಣರನ್ನು ಒಂದು ಜಾತಿಯಾಗಿ ಸೆಳೆಯುವುದರಲ್ಲಿ ಮಾಯಾವತಿ ಯಶಸ್ವಿಯಾದರು. ಬ್ರಾಹ್ಮಣರ ಜಿಲ್ಲಾ ಮಟ್ಟದ ಸಭೆಗಳನ್ನು ನಡೆಸಿ ಅನಂತರ ಲಖನೌದಲ್ಲಿ ರಾಜ್ಯ ಮಟ್ಟದ ಬ್ರಾಹ್ಮಣರ ಬೃಹತ್ ಸಮಾವೇಶವನ್ನು ಜರುಗಿಸಲಾಗಿತ್ತು.

ಬ್ರಾಹ್ಮಣರು ತಮ್ಮ ಮಡಿವಂತಿಕೆಯನ್ನು ಬದಿಗಿಟ್ಟು ದಲಿತ ಮಹಿಳೆ ಮಾಯಾವತಿಯೊಂದಿಗೆ ಕೈ ಜೋಡಿಸಲು ಪ್ರಬಲವಾದ ಕಾರಣವಿತ್ತು. ಬ್ರಾಹ್ಮಣರೊಳಗಿನ ಪಟ್ಟಭದ್ರ ಹಿತಾಸಕ್ತಿಗಳಿಗೆ ಕಾಂಗ್ರೆಸ್ ಪಕ್ಷದ ಅಥವಾ ಬಿಜೆಪಿಯ ಸರ್ಕಾರಗಳು ಅನುಕೂಲವಾದಷ್ಟು ಮುಲಾಯಂಸಿಂಗ್ ಅವರ ಆಳ್ವಿಕೆ ಅನುಕೂಲಕರವಾಗಿರಲಿಲ್ಲ. ಮುಂದುವರಿದ ಜಾತಿಗಳ ಜನರಿಗೆ ಮುಲಾಯಂ ಸಿಂಗ್ ಅವರ ಸಮಾಜವಾದಿ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆಯುವುದು ಬೇಕಾಗಿತ್ತು. ಮುಲಾಯಂ ಸಿಂಗ್ ಆಳ್ವಿಕೆಯನ್ನು 'ಗೂಂಡಾರಾಜ್ಯ' ಎಂಬ ಅಪಖ್ಯಾತಿಗೆ ಗುರಿಪಡಿಸಲಾಯಿತು. ಇದೊಂದು ಸುಳ್ಳು ಆರೋಪ ಆಗಿರಲಿಲ್ಲ. ರಾಜ್ಯದಲ್ಲಿ ಭೂಗತ ಚಟುವಟಿಕೆಗಳು ಲಂಗು ಲಗಾಮಿಲ್ಲದೆ ನಡೆಯುತ್ತಿದ್ದವು.

ಮೇಲ್ಜಾತಿ ಜನಗಳು ಎತ್ತಿದ 'ಗೂಂಡಾ ರಾಜ್ಯ' ಮತ್ತು 'ಭದ್ರತೆ' ಸಮಸ್ಯೆಗಳನ್ನು ಮಾಯಾವತಿ ಸರಿಯಾಗಿ ಗುರುತಿಸಿದರು. ತಮ್ಮ ಚುನಾವಣಾ ಪ್ರಚಾರದಲ್ಲಿ ಇವೆರಡೂ ವಿಷಯಗಳನ್ನೆತ್ತಿಕೊಂಡು ಮಾಯಾವತಿಯವರು ಮುಲಾಯಂಸಿಂಗ್ ಮತ್ತು ಅಮರ್‌ಸಿಂಗ್ ವಿರುದ್ಧ ಅತ್ಯುಗ್ರ ಶಬ್ದಗಳಲ್ಲಿ ಹರಿಹಾಯ್ದರು. ವರ್ಷಗಟ್ಟಲೆ ತಮ್ಮನ್ನು ಮೂಲೆಗೆ ಒತ್ತಿ ಅಧಿಕಾರ ವಂಚಿತರನ್ನಾಗಿಸಲಾಗಿದೆ ಎಂಬ ಭಾವನೆ ಉತ್ತರ ಪ್ರದೇಶದ ಬ್ರಾಹ್ಮಣರಲ್ಲಿ ಬೇರೂರಿತ್ತು. ಬ್ರಾಹ್ಮಣರ ಹಿತರಕ್ಷಣೆಯ ಜವಾಬ್ದಾರಿಯನ್ನು ಹೊರಲು ಯಾವ ರಾಜಕೀಯ ಪಕ್ಷವೂ ಬಹಿರಂಗವಾಗಿ ಮುಂದೆ ಬರಲಿಲ್ಲ. ಆ ಕೆಲಸವನ್ನು ಮಾಯಾವತಿಯವರು ಮಾಡಿದರು. 'ಬಹುಜನ ಸಮಾಜ' ದ ಬದಲಾಗಿ 'ಸರ್ವಜನ ಸಮಾಜ'ದ ಕಹಳೆಯನ್ನು ಮೊಳಗಿಸಿದರು. ಬ್ರಾಹ್ಮಣರ ಕಿವಿಯಲ್ಲಿ ಅದು 'ಬ್ರಾಹ್ಮಣಸಮಾಜ' ಎಂದು ಪ್ರತಿಧ್ವನಿಸಿದ್ದರೆ ಆಶ್ಚರ್ಯವೇನಿಲ್ಲ. ಹೀಗೆ ಮಾಯಾವತಿ ಗೆದ್ದರು. ಆದರೆ ಅದರೊಂದಿಗೆ ರಾಜ್ಯದ ದಲಿತರ ಸೋಲು ಆರಂಭವಾಯಿತು.

**ದಲಿತರ ಅಭಿವೃದ್ಧಿಗೆ ಕಣ್ನೋಟದ ಕೊರತೆ**

ಜಾತಿ ತಾರತಮ್ಯ, ಜಾತಿ ಅಸ್ಪೃಶ್ಯತೆಯನ್ನು ಒಳಗೊಂಡ ಜಾತಿ ಪದ್ಧತಿ ನಮ್ಮ ಸಮಾಜದಲ್ಲಿ ಇನ್ನೂ ಜೀವಂತವಾಗಿರುವುದರಿಂದ ಜಾತಿ ವ್ಯವಸ್ಥೆಯ ಪರವಾಗಿರುವ ಶಕ್ತಿಗಳು ಅಧಿಕಾರದಲ್ಲಿ ಪಾಲ್ಗೊಳ್ಳಲು ಸಾಧ್ಯವಾದಾಗಲೆಲ್ಲಾ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗಲೇಬೇಕು. ಉತ್ತರ ಪ್ರದೇಶದಲ್ಲಿಯೂ ಹಾಗೆಯೇ ಆಯಿತು. ಮಾಯಾವತಿ ಸರ್ಕಾರದ ಪ್ರಸಕ್ತ ಸ್ವರೂಪವೇ ದಲಿತರ ಮೇಲೆ ಮೇಲ್ಜಾತಿ ದಬ್ಬಾಳಿಕೆಗೆ ಕುಮ್ಮಕ್ಕು ಕೊಡುತ್ತಿದೆ.

ಮೇಲ್ಜಾತಿಯ ಗ್ರಾಮಸ್ಥರಿಗೆ ಮಾತ್ರ ಮೀಸಲಾಗಿದ್ದ ದಾರಿಯೊಂದರಲ್ಲಿ ತಮ್ಮ ತಾಯಿಯೊಂದಿಗೆ ನಡೆದು ಬಂದ ತಪ್ಪಿಗಾಗಿ 6 ವರ್ಷ ಪ್ರಾಯದ ದಲಿತ ಬಾಲಕಿಯೊಬ್ಬಳನ್ನು ಬೆಂಕಿಗೆ ಎಸೆದ ದಾರುಣ ಘಟನೆಯೊಂದು ಉತ್ತರ ಪ್ರದೇಶದ ಮಥುರಾದಿಂದ ಇದೇ ಮೇ ಒಂದರಂದು ವರದಿಯಾಗಿದೆ. ಮಾಯಾವತಿಯವರ ಈ ಬಾರಿಯ ಹೊಸ ಅವತಾರದಲ್ಲಿ ದಲಿತರಿಗೆ ಯಾವ ರಕ್ಷಣೆಯೇ ಇಲ್ಲ ಎಂದು ಇಂತಹ ಘಟನೆಗಳಿಂದ ಸಾಬೀತಾಗತೊಡಗಿದೆ.

ಮಾಯಾವತಿಯವರು ಸಹಿ ಹಾಕಿರುವ 'ಮನವಿ' ಯೊಂದನ್ನು ಕರ್ನಾಟಕದ ಮತದಾರರಿಗೆ ಒದಗಿಸಲಾಗಿದೆ. ಆಂಗ್ಲ ಭಾಷೆಯಲ್ಲಿರುವ ಈ ಪ್ರಕಟಣೆಯಲ್ಲಿ ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಸರ್ಕಾರ ಜನತೆಗಾಗಿ ಕೈಗೊಂಡಿರುವ ಕೆಲವು ಕಾರ್ಯಕ್ರಮಗಳ ವರ್ಣನೆ ಇದೆ. ಸ್ವಂತ ಮನೆ ನಿವೇಶನ ಇಲ್ಲದ ಬಡವರಿಗೆ ನಿವೇಶನಗಳನ್ನು ವಿತರಿಸಲು ಹಾಗೂ ಸಾಗುವಳಿ ಮಾಡ ಬಯಸುವವರಿಗೆ ಭೂಮಿಯನ್ನು ವಿತರಿಸಲು ಕ್ರಮಕೈಗೊಳ್ಳ ಲಾಗಿದೆ ಎಂದು ಹೇಳಲಾಗಿದೆಯೇ ಹೊರತು ಭೂ ಸುಧಾರಣೆಗಳನ್ನು ಜಾರಿಗೆ ತಂದು ಭೂ ಮಾಲೀಕರ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಭೂ ರಹಿತ ಬಡವರಿಗೆ, ದಲಿತರಿಗೆ ನೀಡುವ ಪ್ರಸ್ತಾಪವೇ ಇಲ್ಲ. ದಲಿತರಿಗೆ ಆಸ್ತಿಯ ಹಕ್ಕು ದೊರೆಯದೆ ಅವರು ಈ ಅನಿಷ್ಟ ಜಾತಿ ವ್ಯವಸ್ಥೆಯಿಂದ ವಿಮೋಚಿತರಾಗಲು ಸಾಧ್ಯವಿಲ್ಲ. ಶ್ರೀಮಂತರ ಜಮೀನ್ದಾರರ ಹೆಚ್ಚುವರಿ ಭೂಮಿಯನ್ನು ಭೂರಹಿತ ದಲಿತ ಕುಟುಂಬಗಳಿಗೆ ವಿತರಣೆ ಮಾಡುವುದರಿಂದ ಮೇಲ್ಜಾತಿ ಶ್ರೀಮಂತರ ದಬ್ಬಾಳಿಕೆ ನಿಯಂತ್ರಣಕ್ಕೊಳಪಡುತ್ತದೆ ಮಾತ್ರವಲ್ಲ ದಲಿತರು ತಲೆಯೆತ್ತಿ ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗುತ್ತದೆ.

ಕರ್ನಾಟಕದ ಮತದಾರರಿಗೆ ಮಾಯಾವತಿಯವರು ಮಾಡಿಕೊಂಡಿರುವ ಮನವಿಯಲ್ಲಿ ಅವರ ರಾಜ್ಯದಲ್ಲಿ ದಲಿತರ ಮೇಲೆ ಮೇಲ್ಜಾತಿಯವರಿಂದ ಆಗುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಲು ಯಾವ ಕ್ರಮಗಳನ್ನು ಅನುಸರಿಸಲಾಗುತ್ತಿದೆ ಎಂಬುದರ ಪ್ರಸ್ತಾಪವಿಲ್ಲ. ಅದು ಬಿಎಸ್‌ಪಿ ಸರ್ಕಾರದ ಒಂದು ಆದ್ಯತೆಯ ವಿಷಯವಾಗಿ ಉಳಿದಿಲ್ಲ. ಆದ್ದರಿಂದಲೇ ಪ್ರತಿದಿನ ಎಂಬಂತೆ ಆ ರಾಜ್ಯದಲ್ಲಿ ದಲಿತರ ಮೇಲೆ ಸವರ್ಣೀಯರಿಂದ ಹಲ್ಲೆಗಳು ಆಗುತ್ತಲೇ ಇವೆ.

ದಲಿತರ ಸಬಲೀಕರಣದ ವಿಷಯದಲ್ಲಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಒಂದು ಯಶಸ್ವಿ ಪರ್ಯಾಯವನ್ನು ದೇಶದ ಮುಂದಿಟ್ಟಿದೆ. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ತಾನು ದಲಿತರ ಪರ ಎಂದಾಗಲಿ ಇನ್ನಾವುದೇ ಜಾತಿಯವರ ಪರವೆಂದಾಗಿ ಘೋಷಿಸಿಕೊಳ್ಳಲಿಲ್ಲ. ಆದರೆ ಪಶ್ಚಿಮ ಬಂಗಾಳದಲ್ಲಿ ಜಾರಿಗೆ ತರಲಾದ ಭೂ ಸುಧಾರಣೆಗಳ ಮೂಲಕ 26 ಲಕ್ಷ ಕುಟುಂಬಗಳಿಗೆ ಭೂಮಿಯನ್ನು ವಿತರಿಸಲಾಗಿದ್ದು ಅವರಲ್ಲಿ ಶೇ.56 ರಷ್ಟು ದಲಿತರು. ಈ ವಿತರಣೆ ದಲಿತರ ಜನಸಂಖ್ಯೆಯ ಎರಡು ಪಟ್ಟು ಪ್ರಮಾಣದಲ್ಲಿದೆ. 15 ಲಕ್ಷ ಗೇಣಿದಾರರ ಹಕ್ಕುಗಳನ್ನು ಇಲ್ಲಿ ದಾಖಲು ಮಾಡಿಕೊಳ್ಳಲಾಗಿದೆ. ಇವರಲ್ಲಿ ಶೇ.42 ದಲಿತರು. ಇಲ್ಲಿ ಜಾರಿಗೆ ತರಲಾದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೀಸಲು ಸ್ಥಾನಗಳಿಗೆ ಮಾತ್ರವಲ್ಲ ಸಾಮಾನ್ಯರ ಸ್ಥಾನಗಳಿಗೂ ದಲಿತರು ಸ್ಪರ್ಧಿಸಿ ಗೆಲ್ಲುತ್ತಾರೆ. ಇಲ್ಲಿ ದಲಿತರ ಮೇಲೆ ದೌರ್ಜನ್ಯಗಳು ನಡೆಯುವುದು ತೀರಾ ವಿರಳ. ಇಲ್ಲವೇ ಇಲ್ಲ ಎಂದು ಹೇಳಬಹುದು. ಇಲ್ಲಿ ಜಾರಿಗೆ ತರಲಾದ ಭೂ ಸುಧಾರಣೆಗಳಿಂದಾಗಿ ಪಾಳೇಗಾರಿ ಪದ್ಧತಿಯ ಮೇಲೆ ಬಲವಾದ ಏಟು ಬಿದ್ದಿದೆ. ಇಲ್ಲಿ ಭೂ ಮಾಲೀಕ ಶಕ್ತಿಗಳಿಗೆ ರಾಜಕೀಯ ಕುಮ್ಮಕ್ಕು ಸಿಗುವುದಿಲ್ಲ. ಆದ್ದರಿಂದ ಇಲ್ಲಿ ದಲಿತರು ಸುರಕ್ಷಿತವಾಗಿದ್ದಾರೆ.

**ಕರ್ನಾಟಕದಲ್ಲಿ 'ಬಿಎಸ್‌ಪಿ'ಯ ಹೊಣೆಗೇಡಿ ಪಾತ್ರ**

ಕರ್ನಾಟಕದಲ್ಲಿಯೂ ಕೆಲವರು ಬಿಎಸ್‌ಪಿಯೊಂದಿಗೆ ಗುರುತಿಸಿಕೊಂಡು 'ಕ್ಷಿಪ್ರ ಕ್ರಾಂತಿ'ಯೊಂದನ್ನು ನಿರೀಕ್ಷಿಸುತ್ತಿದ್ದಾರೆ. ಎಲ್ಲಾ ಜಾತಿ ಜನಾಂಗದವರನ್ನು ಓಲೈಸಲು ಪ್ರಯತ್ನಿಸುತ್ತಿದ್ದಾರೆ. ಬೇರೆ ಪಕ್ಷಗಳಲ್ಲಿ ಟಿಕೆಟ್ ಸಿಗದೆ ವಲಸೆ ಬಂದವರನ್ನೂ ಸೇರಿಸಿಕೊಂಡಿದ್ದಾರೆ. ಎಲ್ಲಾ 224 ಸ್ಥಾನಗಳಿಗೂ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗಿದೆ.

ಬಿಎಸ್‌ಪಿಗೆ ರಾಜ್ಯದಲ್ಲಿ ಎಲ್ಲಿಯೂ ಸ್ವಂತ ನೆಲೆ ಎಂಬುದು ಇಲ್ಲ. ಬಿಎಸ್‌ಪಿಗೆ ಗೆಲ್ಲುವ ಸಾಮರ್ಥ್ಯ ಇಲ್ಲದಿದ್ದರೂ ಕೊಲ್ಲುವ ಸಾಮರ್ಥ್ಯ ಇದೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಸುಮಾರು 40 ಅಭ್ಯರ್ಥಿಗಳು ಕೇವಲ 2 ರಿಂದ 5 ಸಾವಿರ ಮತಗಳ ಅಂತರದಿಂದ ಪರಾಭವಗೊಂಡಿದ್ದರು. ಕಾಂಗ್ರೆಸ್‌ನ ಮತ ಬ್ಯಾಂಕ್‌ಗೆ ಬಿಎಸ್‌ಪಿ ಲಗ್ಗೆ ಹಾಕಿದ್ದೇ ಇದ್ಕಕೆ ಕಾರಣವಾಗಿತ್ತು. ಈ ಸಲವೂ ಅದೇ ತಂತ್ರವನ್ನು ಅದು ಅನುಸರಿಸುತ್ತಿದೆ.

ಬಹುಜನ ಸಮಾಜ ಪಾರ್ಟಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪಿ.ಜಿ.ಆರ್.ಸಿಂಧ್ಯಾ 'ತಮ್ಮದು ಪಾಸಿಟಿವ್ ಅಪ್ರೋಚ್' ಎನ್ನುತ್ತಾರೆ. ಆದರೆ ಅವರದ್ದು ಅತ್ಯಂತ 'ನೆಗೆಟಿವ್ ಅಪ್ರೋಚ್' ಆಗಿದೆ ಎಂದು ಅವರಿಗೆ ಹೇಳಬೇಕಾಗಿದೆ. ಅವರು ತಮ್ಮ ಸಮಾಜವಾದಿ ಹಿನ್ನೆಲೆಯನ್ನು ಮರೆತಂತೆ ಕಾಣುತ್ತದೆ.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯುವುದು ಎಲ್ಲ ಪ್ರಗತಿಪರ ಶಕ್ತಿಗಳ ಪ್ರಧಾನ ಕಾಳಜಿಯಾಗಿದೆ. ಆದರೆ ರಾಜ್ಯದ ಎಲ್ಲ ಸಮುದಾಯಗಳ ನೆಮ್ಮದಿಯನ್ನು ಬಯಸುವ ಶಕ್ತಿಗಳ ಆಶಯವನ್ನು ಕಡೆಗಣಿಸುವ ಮೂಲಕ ಬಿಎಸ್‌ಪಿ ರಾಜ್ಯದಲ್ಲಿ ಬಿಜೆಪಿಯನ್ನು ಬಲಪಡಿಸಲು ಹೊರಟಿದೆ. ಬಿಜೆಪಿಯೊಂದಿಗೆ ಅಧಿಕಾರ ಹಂಚಿಕೊಂಡು ಅನುಭವ ಹೊಂದಿರುವ ಬಹುಜನ ಸಮಾಜ ಪಾರ್ಟಿ ಕರ್ನಾಟಕದಲ್ಲಿಯೂ ಬಿಜೆಪಿಯೊಂದಿಗೆ ಕೈ ಜೋಡಿಸಿ ಅಧಿಕಾರಕ್ಕೆ ಬರಲು ಬಯಸುತ್ತಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಹೀಗೆ ಈ ಚುನಾವಣೆಯಲ್ಲಿ ಬಿಎಸ್‌ಪಿಗೆ ಮತ ನೀಡುವುದೆಂದರೆ ಅದು ಬಿಜೆಪಿಗೆ ಮತ ನೀಡಿದಂತೆ. ಕರ್ನಾಟಕ ಬ್ರಾಹ್ಮಣ ಪರಿಷತ್ ಸಹ ಮಾಯಾವತಿ ನೇತೃತ್ವದ ಬಹುಜನ ಸಮಾಜ ಪಕ್ಷವನ್ನು ಬೆಂಬಲಿಸುವಂತೆ ಬ್ರಾಹ್ಮಣ ಸಮುದಾಯವನ್ನು ಕೋರಿದೆ. ಆದರೆ ವಿವಿಧ ದಲಿತ ಸಂಘಟನೆಗಳು ಬಿಎಸ್‌ಪಿಯ ಈ ಕ್ರಮವನ್ನು ಖಂಡಿಸಿವೆ. ದಲಿತರು ಬಿಎಸ್‌ಪಿಯ ತಂತ್ರಕ್ಕೆ ಬಲಿ ಬೀಳದಂತೆ ಎಚ್ಚರಿಕೆ ವಹಿಸಲು ಮನವಿ ಮಾಡಿವೆ.

ದಲಿತರು ಮತ್ತು ಬ್ರಾಹ್ಮಣರು ಒಂದು ರಾಜಕೀಯ ಪಕ್ಷದಲ್ಲಿ ಸೇರಿಕೊಂಡ ತಕ್ಷಣ ಜಾತಿ ಅಸಮಾನತೆ ತೊಲಗುವುದಿಲ್ಲ. ಜಾತಿ ಪದ್ಧತಿಯ ವಿರುದ್ಧ ಒಂದು ಬಲಿಷ್ಠವಾದ ಸಾಂಸ್ಕೃತಿಕ ಕ್ರಾಂತಿ ನಡೆಯಬೇಕಾಗಿದೆ. ಜಾತಿ ಆಧಾರಿತ ಸಂಘಟನೆಗಳಿಂದ ಜಾತಿ ವಿನಾಶದ ಹೋರಾಟಕ್ಕೆ ಧಕ್ಕೆಯಾಗುತ್ತದೆ. ಜಾತಿ ಆಧಾರಿತ ರಾಜಕೀಯ ಪಕ್ಷಗಳಿಂದ ಜಾತಿ ಮುಖಂಡರು ರಾಜಕೀಯ ಸ್ಥಾನಮಾನಗಳನ್ನು ಪಡೆಯಲು ಅನುಕೂಲವಾಗುತ್ತದೆಯೇ ಹೊರತು ದಲಿತ ಸಮುದಾಯಗಳ ಹಿತರಕ್ಷಣೆ ಸಾಧ್ಯವಾಗುವುದಿಲ್ಲ ಎಂಬುದನ್ನು ಮುಖ್ಯಮಂತ್ರಿ ಮಾಯಾವತಿಯವರೇ ಸಾಬೀತುಪಡಿಸಿದ್ದಾರೆ. .

○

# ಬಿಜೆಪಿಗೆ ಕಾದಿದೆ ಅಘಾತ !....

ಪುಟ 6 ರಿಂದ

ಬಾರಿ ಇಲ್ಲಿ ಹೆಚ್ಚು ಕಡಿಮೆ ತ್ರಿಕೋನ ಸ್ಪರ್ಧೆ ಇದೆ. ಸಿಪಿಐ(ಎಂ) ಮೊದಲ ಬಾರಿಗೆ ಇಲ್ಲಿಂದ ಸ್ಪರ್ಧಿಸುತ್ತಿದೆ. ಕಾಂಗ್ರೆಸ್‌ನ ಗೋಪಾಲ ಪೂಜಾರಿ, ಬಿಜೆಪಿಯ ಕೆ.ಲಕ್ಷ್ಮೀ ನಾರಾಯಣರಿಗೆ ಸವಾಲೊಡ್ಡಿರು ವವರು ಸಿಪಿಐ(ಎಂ)ನ ಹಿರಿಯ ಮುಂದಾಳು, ರೈತ ಕಾರ್ಮಿಕರ ನೆಚ್ಚಿನ ನಾಯಕ ಕಾಮ್ರೇಡ್ ಯು.ದಾಸ ಭಂಡಾರಿ. ಕಾಮ್ರೇಡ್ ಭಂಡಾರಿಯವರು ನಾಲ್ಕು ದಶಕಗಳ ಕಾಲ ರೈತ ಕಾರ್ಮಿಕರ ನಡುವೆ ಶ್ರದ್ಧೆಯಿಂದ ದುಡಿದು ಅವರ ಅಪಾರ ಪ್ರೀತಿ ವಿಶ್ವಾಸಗಳಿಸಿದವರು. ಕುಂದಾಪುರ ತಾಲ್ಲೂಕಿನ ಹದಿಮೂರು ಹಂಚಿನ ಕಾರ್ಖಾನೆಗಳ ಪೈಕಿ ಒಂಭತ್ತು ಪುನಾರಚಿತ ಬೈಂದೂರು ಕ್ಷೇತ್ರದಲ್ಲಿವೆ. ಇಲ್ಲಿ ಸಿಐಟಿಯುಗೆ ಸೇರಿದ ಎರಡು ಸಾವಿರಕ್ಕೂ ಮಿಕ್ಕಿ ಹಂಚು ಕಾರ್ಮಿಕರಿದ್ದಾರೆ. ಸಾವಿರಾರು ಜನ ಬೀಡಿ ಕಾರ್ಮಿಕರು, ಮೀನುಗಾರರು, ಅಕ್ಷರ ದಾಸೋಹ, ಅಂಗನವಾಡಿ ನೌಕರರು, ಕಟ್ಟಡ ಕಾರ್ಮಿಕರು ಅಪಾರ ಸಂಖ್ಯೆಯಲ್ಲಿದ್ದಾರೆ. ಇವರನ್ನೆಲ್ಲ ಸಂಘಟಿಸುವುದರಲ್ಲಿ ಕಾಂ: ದಾಸ ಭಂಡಾರಿ ವಹಿಸಿದ ಪಾತ್ರ ಗಣನೀಯವಾಗಿದೆ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಬೈಂದೂರು ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡುವ ನಿರೀಕ್ಷೆ ಇದೆ. ಪಕ್ಷದ ಗೆಲುವಿಗಾಗಿ ಪಕ್ಷದ ಕಾರ್ಯಕರ್ತರು, ಕಾರ್ಮಿಕ, ರೈತ ಯುಜನ ಹಾಗೂ ವಿದ್ಯಾರ್ಥಿ ಸಂಗಾತಿಗಳು ಹಗಲಿರುಳೂ ಶ್ರಮಿಸುತ್ತಿದ್ದಾರೆ.

ಬಾಲಂಗೋಚಿ: ಉಡುಪಿ ಜಿಲ್ಲೆಯಲ್ಲಿ ಸ್ಪರ್ಧಿಸುತ್ತಿರುವ ಬಿಜೆಪಿಯ ಐದು ಜನ ಉಮೇದುವಾರರಲ್ಲಿ ಕುಂದಾಪುರ ಹಾಲಾಡಿ ಶ್ರೀನಿವಾಸಶೆಟ್ಟರನ್ನು ಬಿಟ್ಟರೆ ಉಳಿದ ನಾಲ್ವರೂ ಕ್ರಿಮಿನಲ್ ಹಿನ್ನೆಲೆಯುಳ್ಳವರು. ಬೈಂದೂರಿನ ಕೆ.ಲಕ್ಷ್ಮಿನಾರಾಯಣ, ಉಡುಪಿಯ ರಘುಪತಿಭಟ್, ಕಾರ್ಕಳದ ಸುನಿಲ್ ಕುಮಾರ್ ಮತ್ತು ಕಾಪುವಿನ ಲಾಲಾಜಿ ಮೆಂಡನ್ - ಇವರೆಲ್ಲರ ಮೇಲೂ ಒಂದಲ್ಲೊಂದು ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆಗಳಿವೆ. ಕೇಂದ್ರ ಸರ್ಕಾರದಲ್ಲಿನ 'ಕಳಂಕಿತ' ಸಚಿವರನ್ನು ವಜಾಗೊಳಿಸಬೇಕೆಂಧು ತಿಂಗಳುಗಳ ಕಾಲ ಸಂಸತ್ತನ್ನು ಒತ್ತೆಯಿರಿಸಿಕೊಂಡ ಬಿಜೆಪಿಗೆ ತನ್ನ ಐವರು ಅಭ್ಯರ್ಥಿಗಳಲ್ಲಿ ನಾಲ್ವರು ಕ್ರಿಮಿನಲ್ ಹಿನ್ನೆಲೆಯವರಾಗಿರುವುದಕ್ಕೆ ಯಾವ ಮುಜುಗರವೂ ಇಲ್ಲ.

○

## ಉಚ್ಚಾಟನೆ

ಚುನಾವಣೆಗಳ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ತೀರ್ಮಾನಗಳ ವಿರುದ್ಧ ವರ್ತಿಸಿದ ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕಿನ ಈ ಕೆಳಕಂಡ ಸದಸ್ಯರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ ಎಂದು ಸಿಪಿಐ(ಎಂ) ಪ್ರಕಟಣೆ ತಿಳಿಸಿದೆ.

ಡಿ.ವೆಂಕಟರಮಣ
ಎಲ್.ಮಂಜುನಾಥ್
ರಾಮಚಂದ್ರಬಾಬು
ಮತ್ತು ಸಭಾಪತಿ

ಈ ನಾಲ್ವರು ಉಚ್ಚಾಟನೆಗೊಂಡವರು.

ಶರತ್‌ಚಂದ್ರ


# ಬ್ರಿಟನ್ ಮುನಿಸಿಪಲ್ ಚುನಾವಣೆಗಳಲ್ಲಿ ಲೇಬರ್ ಪರಾಭವ

ಇತ್ತೀಚೆಗೆ ನಡೆದ ಬ್ರಿಟಿಷ್ ಮುನಿಸಿಪಲ್ ಚುನಾವಣೆಗಳಲ್ಲಿ ಆಳುವ ಲೇಬರ್ ಪಕ್ಷ ಭಾರೀ ಪರಾಭವ ಕಂಡಿದೆ. ಬ್ರಿಟಿಷ್ ರಾಜಕೀಯ ಚರಿತ್ರೆಯಲ್ಲೇ ಅತ್ಯಂತ ಕಡಿಮೆ ಓಟು ಮತ್ತು ಸೀಟುಗಳನ್ನು ಪಡೆದಿದೆ. ಲಂಡನ್ ಸೇರಿದಂತೆ ಹಲವಾರು ಪ್ರಮುಖ ನಗರಗಳ ಮುನಿಸಿಪಾಲಿಟಿಗಳಲ್ಲಿ ಸೋತಿದ್ದೆ ಅಲ್ಲದೆ, ಹಲವು ಕಡೆ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಅತ್ಯಂತ ಜನಪ್ರಿಯ ಮತ್ತು ಹಲವು ಅವಧಿಗಳಿಗೆ ಮೇಯರ್ ಆಗಿ ಆಯ್ಕೆಯಾಗಿದ್ದ ಕೆನ್ ಲಿವಿಂಗ್ ಸ್ಟನ್ ಅವರನ್ನು, ಜೋಕರ್ ಎಂದು ಯಾರೂ (ಅವರ ಪಾರ್ಟಿಯೂ ಸೇರಿದಂತೆ) ಗಂಭಿರವಾಗಿ ಪರಿಗಣಿಸದ ಟೋರಿ ಅಭ್ಯರ್ಥಿ ಸೋಲಿಸಿದ್ದಾರೆ. ಲೇಬರ್ ನಾಯಕರು-ಕಾರ್ಯಕರ್ತರನ್ನು ದಂಗು ಬಡಿಸಿದೆ. ವಿರೋಧ ಪಕ್ಷವಾದ ಟೋರಿ ಅವರ ಚರಿತ್ರೆಯಲ್ಲೇ ಅತ್ಯಂತ ಹೆಚ್ಚಿನ ಶೇ.44 ಮತಗಳಿಸಿದ್ದಾರೆ. ಇದರ ಅರ್ಥ ಲೇಬರ್ ಪಕ್ಷದ ವಿರುದ್ಧ ರೊಚ್ಚಿಗೆದ್ದಿದ್ದಾರೆ ಅಂತ. ಮುನಿಸಿಪಾಲಿಟಿಗಳಿಗೆ ಶಿಕ್ಷಣ, ಮತ್ತಿತರ ಸಾಮಾಜಿಕ ಸೇವೆಗಳಿಗೆ ತೀವ್ರ ಹಣ ಕಡಿತ ಮಾಡಿರುವುದು ಒಂದು ಕಾರಣವಾಗಿರ ಬಹುದು. ಇಂತಹ ಕಡಿತದಿಂದ ತತ್ತರಿಸಿದ ತಮ್ಮ ಸೇವೆಯಲ್ಲಿ ಚ್ಯುತಿ ತಂದಿರುವ ಮುನಿಸಿಪಾಲಿಟಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಬ್ಲೇರ್ ಪ್ರಧಾನಿಯಾಗಿ ಬದಲಾದರೂ ಅವರ ಆರ್ಥಿಕ-ಸಾಮಾಜಿಕ-ವಿದೇಶಿ ನೀತಿಗಳು ಬದಲಾಗಿಲ್ಲ. ಈ ಪರಾಭವ ಮುಂದಿನ ಚುನಾವಣೆಗಳ ಮುನ್ಸೂಚಿಯೇ ಎಂದು ಕಾದು ನೋಡಬೇಕಾಗಿದೆ.



## ಒಬಾಮಾ ಮುನ್ನಡೆ - ಕಣ ಬಿಡದ ಹಿಲೇರಿ

ಒಬಾಮಾ ಇನ್ನೊಂದು ಪ್ರಮುಖ ರಾಜ್ಯದ ಡೆಮೊಕ್ರಾಟಿಕ್ ಪ್ರಾಥಮಿಕ ಚುನಾವಣೆಯಲ್ಲಿ ಭಾರೀ ಬಹುಮತದಿಂದ ಗೆದ್ದು ತಮ್ಮ ಮುನ್ನಡೆ ಕಾಯ್ದುಕೊಂಡಿದ್ದಾರೆ. ಇನ್ನೂ ಕೆಲವು ರಾಜ್ಯಗಳ ಪ್ರಾಥಮಿಕ ಚುನಾವಣೆಗಳು ನಡೆಯಬೇಕಾಗಿದ್ದು ಹಿಲೇರಿಗೆ ಬಹುಮತ ಸಿಗುವ ಸಾಧ್ಯತೆ ಇಲ್ಲ. ಡೆಮೊಕ್ರಾಟಿಕ್ ಸಮಾವೇಶದಲ್ಲಿ ರಾಜ್ಯಗಳಿಂದ ಆಯ್ಕೆಯಾದ ಮತ್ತು 'ಸೂಪರ್ ಪ್ರತಿನಿಧಿಗಳು' ಎಂದು ಕರೆಯಲಾಗುವ (ಶಾಸಕರು ಮತ್ತು ಪಕ್ಷದ ನಾಯಕರು) ಪ್ರತಿನಿಧಿಗಳು ತೀರ್ಮಾನ ಮಾಡುತ್ತಾರೆ. 'ಸೂಪರ್ ಪ್ರತಿನಿಧಿಗಳ'ಲ್ಲಿ ಭಾರೀ ಬಹುಮತ ಪಡೆದರೆ ಮಾತ್ರ ಹಿಲೇರಿಗೆ ಅವಕಾಶ. ಆದರೆ ಈ ಹಣಾಹಣಿ ಹೀಗೇ ಮುಂದುವರೆದರೆ, ಯಾರೂ ಗೆದ್ದರೂ ರಿಪಬ್ಲಿಕನ್ ಅಭ್ಯರ್ಥಿ ಗೆ ಅನುಕೂಲ ಮಾಡಿಕೊಟ್ಟಂತೆ. ಆದ್ದರಿಂದ ಈ ಹಣಾಹಣಿ ನಿಲ್ಲಬೇಕು. ಹಿಲೇರಿ ಹಿಂದಕ್ಕೆ ಸರಿಯಬೇಕು. ಎಂಬ ಒತ್ತಡ ಹೆಚ್ಚಾಗುತ್ತಿದೆ. ಈ ವರೆಗೆ ಹಿಲೆರಿ ಮಣಿದಿಲ್ಲ. ಆದರೆ ಆ ಸಾಧ್ಯತೆ ಹೆಚ್ಚಿದೆ ಎನ್ನಲಾಗಿದೆ.



## ಮಂಡೇಲಾ ಇನ್ನೂ ಅಮೆರಿಕದ ಭಯೋತ್ಪಾದಕರ ಪಟ್ಟಿಯಲ್ಲಿ !

ಮಂಡೇಲಾ ಅಮೆರಿಕನ್ ಸರ್ಕಾರದ ಭಯೋತ್ಪಾದಕರ ಪಟ್ಟಿಯಲ್ಲಿ ಇದ್ದಾರಂತೆ. ಇದನ್ನು ಹೊರಗಡವಿದ್ದು ಯಾರೋ ಚತುರ ಪತ್ರಕರ್ತರಲ್ಲ. ಸ್ವತಃ ಅಮೆರಿಕದ ವಿದೇಶ ಮಂತ್ರಿ. ಮಂಡೇಲಾ ಮಾತ್ರವಲ್ಲ ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇಧ ನಿರ್ಮೂಲ ಮಾಡಲು ದಶಕಗಳ ಕಾಲ ಹೋರಾಡಿದ ಎ.ಎನ್.ಸಿ. ಸಹ ಇನ್ನೂ ಭಯೋತ್ಪಾದಕರ ಪಟ್ಟಿಯಲ್ಲಿ ಇದೆಯಂತೆ. ಆ ದೇಶದ ಸರ್ಕಾರದ ಪ್ರಮುಖರು (ಹೆಚ್ಚಿನವರು ಎ.ಎನ್.ಸಿ. ನಾಯಕರು) ಅಮೆರಿಕದ ಭೇಟಿಗೆ ಬರುವಾಗಲೆಲ್ಲಾ 'ಅವರು ಭಯೋತ್ಪಾದಕರಲ್ಲ' ಅಂತ ವಿನಾಯಿತಿ ಸರ್ಟಿಫಿಕೆಟು ಕೊಡಬೇಕಾದಾಗೆಲ್ಲ ಮುಜುಗರವಾಗುತ್ತದೆ ಎಂದು ವಿದೇಶ ಮಂತ್ರಿ ಹೇಳಿದ್ದಾರೆ. ಇದನ್ನು ಸದ್ಯದಲ್ಲೇ ಸರಿ ಪಡಿಸುವುದಾಗಿ ಭರವಸೆ ನೀಡಿದ್ದಾರೆ. ಆದರೆ ಅಮೆರಿಕನ್ ಸರ್ಕಾರದ ಭಯೋತ್ಪಾದಕರ ಪಟ್ಟಿಗೆ ಹೋದ ವ್ಯಕ್ತಿ ಅಥವಾ ಪಕ್ಷ-ಸಂಘಟನೆಗಳು ಹೊರ ಬಂದ ಒಂದು ಉದಾಹರಣೆಯೂ ಇಲ್ಲವಂತೆ ! ನೇಪಾಳದ ಮಾವೋವಾದಿಗಳು ಭಯೋತ್ಪಾದಕರ ಪಟ್ಟಿಯಲ್ಲಿ ಮುಂದುವರೆದರೆ ಏನಾದರೂ ಆಶ್ಚರ್ಯವಿದೆಯೆ ?

## ಅಮೆರಿಕನ್ ಮಿಲಿಟರಿ ನೆಲೆಗೆ ಇಕ್ವೊಡೋರ್ ನಕಾರ

ಇಕ್ವೊಡೋರ್‌ನಲ್ಲಿ ಹಲವು ವರ್ಷಗಳಿಂದ ಇರುವ ಮಿಲಿಟರಿ ನೆಲೆಯನ್ನು ಅಮೆರಿಕ ಕಳಕೊಳ್ಳುವ ಅಂಚಿನಲ್ಲಿದೆ. ಇಕ್ವೊಡೋರ್ ನ ಮಂಟಾದಲ್ಲಿರುವ ನೆಲೆ ಈ ಖಂಡದಲ್ಲಿ ಆಯಕಟ್ಟಿನ ಜಾಗದಲ್ಲಿರುವ ಮೂರು ಅಮೆರಿಕನ್ ಮಿಲಿಟರಿ ನೆಲೆಗಳಲ್ಲಿ ಒಂದು. ಹತ್ತು ವರ್ಷಗಳ ಒಪ್ಪಂದವನ್ನು ಇನ್ನು ಹದಿನೆಂಟು ತಿಂಗಳಲ್ಲಿ ನವೀಕರಿಸದಿದ್ದರೆ ಅದು ಕೊನೆಗೊಳ್ಳುತ್ತದೆ. ಮಂಟಾ ಮಿಲಿಟರಿ ನೆಲೆ ಮುಂದುವರಿಕೆ ಇತ್ತೀಚಿನ ಅಧ್ಯಕ್ಷ ಚುನಾವಣೆಯ ಪ್ರಮುಖ ವಿಷಯಗಳಲ್ಲಿ ಒಂದಾಗಿತ್ತು. ಆ ನೆಲೆ ಮುಂದುವರೆಸುವುದಿಲ್ಲ ಮಾತ್ರವಲ್ಲ, ಇನ್ಯಾವುದೇ ವಿದೇಶಿ ಮಿಲಿಟರಿ ನೆಲೆಗೆ ಅವಕಾಶ ಕೊಡದಂತೆ ಹೊಸ ಸಂವಿಧಾನ ನಿಷೇಧ ಹೇರುತ್ತದೆ. ಇದು ಅಧ್ಯಕ್ಷರಾಗಿ ಆಯ್ಕೆಯಾದ ಕೊರಿಯಾಸ್ ನಿಲುವಾಗಿತ್ತು. ಅದಕ್ಕೆ ಅಪಾರ ಜನಬೆಂಬಲ ಸಿಕ್ಕಿತು. ಈ ನೆಲೆ ಈ ಪ್ರದೇಶದಲ್ಲಿ ವ್ಯಾಪಕವಾಗಿರುವ ಮಾದಕ ದ್ರವ್ಯಗಳ ಸಾಗಾಣಿಕೆ ಮೇಲೆ ನಿಗಾ ಇಡಲು ಎಂದು ಅಮೆರಿಕನ್ ಸರ್ಕಾರದ ಅಂಬೋಣ. ಆದರೆ ಅದನ್ನು ಯಾರೂ ನಂಬಲು ತಯಾರಿಲ್ಲ. ಇದು ಇಡೀ ಖಂಡದ ಮೇಲೆ ನಿಯಂತ್ರಣ ಇಡುವ ಅಮೆರಿಕದ ಮಿಲಿಟರಿ ವ್ಯೂಹದ ಪ್ರಮುಖ ಬಾಗ ಎಂದು ಎಲ್ಲರಿಗೂ ಗೊತ್ತು. ಈ ನೆಲೆಯ ನಷ್ಟ ಅಮೆರಿಕದ ಮಿಲಿಟರಿ ಯೋಜನೆಗೆ ಬಲವಾದ ಏಟು.

## ಮ್ಯಾನ್‌ಮಾರ್‌ನಲ್ಲಿ ಭೀಕರ ಚಂಡಮಾರುತ

ಮ್ಯಾನ್‌ಮಾರ್‌ನಲ್ಲಿ ಭೀಕರ ಚಂಡಮಾರುತ ಹೊಡೆದಿದ್ದು 22 ಸಾವಿರಕ್ಕೂ ಹೆಚ್ಚು ಸತ್ತಿದ್ದಾರೆ. 41 ಸಾವಿರಕ್ಕೂ ಹೆಚ್ಚು ಜನ ಕಾಣೆಯಾಗಿದ್ದಾರೆ. ಭಾರಿ ಸಂಖ್ಯೆಯಲ್ಲಿ ಬಿದಿರಿನ ಮಾಡಿನ ಮನೆಗಳು ನೆಲಸಮವಾಗಿದ್ದು, ಹತ್ತು ಲಕ್ಷಕ್ಕೂ ಹೆಚ್ಚು ಜನ ನಿರಾಶ್ರಿತರಾಗಿದ್ದಾರೆ. ಚಂಡಮಾರುತ ತಂದ ವ್ಯಾಪಕ ಆಸ್ತಿಪಾಸ್ತಿ ನಾಶದಿಂದ ಆಹಾರ, ಉರುವಲು ಮತ್ತು ಕಟ್ಟಡ ಸಾಮುಗ್ರಿಗಳ ತೀವ್ರ ಅಭಾವ ಉಂಟಾಗಿದೆ. ಅವುಗಳ ಬೆಲೆ ಗಗನಕ್ಕೆ ಏರಿದೆ. ಚಂಡಮಾರುತ ವ್ಯಾಪಕ ನೆರೆಗೆ ಕಾರಣವಾಗಿದ್ದು ಹಲವಾರು ಪ್ರದೇಶಗಳನ್ನು ಇನ್ನೂ ದೋಣಿಗಳ ಮೂಲಕ ಮಾತ್ರ ತಲುಪಬಹುದು. ಮಿಲಿಟರಿ ಸರ್ಕಾರದ ದಮನ ನೀತಿಯಿಂದ ಈ ದೇಶ ಅಂತರ್ರಾಷ್ಟ್ರೀಯ ಏಕಾಂಗಿತನ ಎದುರಿಸುತ್ತಿರುವುದರಿಂದ ಇದು ಪರಿಹಾರ ನೆರವು ತಲುಪಲು ತೀವ್ರ ಅಡ್ಡಿಯಾಗಿದೆ. ಪರಿಹಾರ ನೆರವು ತಲುಪುವುದು ತಡ



ಆಗುತ್ತಿರುವುದರಿಂದ ಸಾವು-ನೋವು ಇನ್ನೂ ಹೆಚ್ಚು ಆಗಬಹುದು ಎಂದು ಶಂಕಿಸಲಾಗಿದೆ.


## ಇಂಡಿಯಾ-ಚೀನಾಗಳಿಂದಾಗಿ ತೈಲ ಬೆಲೆಏರಿಕೆ ಸಹ ಅಂತೆ!

ಇಂಡಿಯಾ-ಚೀನಾದ ಜನ ಹೆಚ್ಚು ಉತ್ಪಾದಿಸುವುದಕ್ಕಿಂತ ಹೆಚ್ಚು ತಿನ್ನುವುದರಿಂದ ಈಗಿನ ಆಹಾರ ಬಿಕ್ಕಟ್ಟು ಎಂದು ಬುಶ್ ಸೇರಿದಂತೆ ಅಮೆರಿಕನ್ ಸರ್ಕಾರದ ಪ್ರಮುಖ ನಾಯಕರು ಹೇಳಿದ್ದಾರೆ ! ಈ ವಿಚಿತ್ರ ವಿಶ್ಲೇಷಣೆಗೆ ತೀಕ್ಷ್ಣ ಪ್ರತಿಕ್ರಿಯೆ ಬಂದರೂ ಸಮರ್ಥಿಸಿ ಕೊಂಡಿದ್ದಾರೆ. ಅದು ಸಾಲದೆಂಬಂತೆ ಅಭೂತಪೂರ್ವ ತೈಲ ಬೆಲೆ ಏರಿಕೆಗೂ ಇಂಡಿಯಾ-ಚೀನಾದ ಹೆಚ್ಚಿದ ತೈಲ ಬಳಕೆ ಕಾರಣವಂತೆ ! ಇದು ಇನ್ನೊಂದು ಬುಶ್ ಜೋಕು ಅಲ್ಲ ಎಂದು ಧೃಢ ಪಡಿಸಲು ಯುರೋಪಿಯನ್ ಒಕ್ಕೂಟದ ನಾಯಕರೂ ಅದನ್ನು ಬೆಂಬಲಿಸಿದ್ದಾರೆ. ಶ್ರೀಮಂತ ಜನ ಮತ್ತು ದೇಶಗಳ ಐಕ್ಯತೆ, ಬಡ ಜನ ಮತ್ತು ದೇಶಗಳ ಐಕ್ಯತೆಗಿಂತ ಮಜಬೂತಾಗಿದೆ ಎಂಬ ಬಗ್ಗೆ ಯಾರಿಗಾದರೂ ಸಂಶಯ ಉಳಿದಿದೆಯೆ ?

## ಬೊಲಿವಿಯಾ ಒಡೆಯಲು ಸಂಚು

ವೆನೆಜುವೆಲಾ ನಂತರ ಲ್ಯಾಟಿನ್ ಅಮೆರಿಕದಲ್ಲಿ ಬುಶ್ ಸಾಹೇಬರಿಗೆ ಅತಿ ದೊಡ್ಡ ಶತ್ರುವಾದ ಬೊಲಿವಿಯಾ ಒಡೆಯಲು ತೀವ್ರ ಸಂಚು ನಡೆದಿದೆ. ಅದರಲ್ಲಿ ಬೊಲಿವಿಯಾದ ಹೊಸ ಸರ್ಕಾರದ ಭೂಸುಧಾರಣೆ ಮುಂತಾದ ಬಡವರ-ಪರ ಮತ್ತು ಶ್ರೀಮಂತರ ಬಲ ಕುಂದಿಸುವ ಕ್ರಮಗಳಿಂದ ಕುಪಿತರಾದ ಶ್ರೀಮಂತರನ್ನು ಬಳಸುತ್ತಿದೆ. ಪೂರ್ವ ಪ್ರಾಂತ್ಯಗಳು ತೈಲ-ಗ್ಯಾಸ್ ನಿಕ್ಷೇಪ ಹೊಂದಿವೆ. ತಮ್ಮ ಪ್ರಾಂತ್ಯದ ಸಂಪನ್ಮೂಲಗಳ ಮೇಲೆ ಪೂರ್ಣ ಅಧಿಕಾರ ಮತ್ತು ಸ್ವಾಯತ್ತತೆ ಹೆಸರಲ್ಲಿ ಅಲ್ಲಿನ ಜನರನ್ನು ಪ್ರಚೋದಿಸಿ ಪ್ರತ್ಯೇಕತೆಗೆ ಕುಮ್ಮಕ್ಕು ಕೊಡುತ್ತಿದೆ. ಒಂದು ಪೂರ್ವ ಪ್ರಾಂತ್ಯದಲ್ಲಿ ಇಂತಹ ಸ್ವಾಯತ್ತತೆ ಬಗ್ಗೆ ಜನಮತ ಸಂಗ್ರಹ ನಡೆದಿದ್ದು ಅದಕ್ಕೆ ಗೆಲುವು ಸಿಕ್ಕಿದೆ. ಇನ್ನಷ್ಟು ಪೂರ್ವ ಪ್ರಾಂತ್ಯಗಳಲ್ಲಿ ಇದು ಹರಡುವ ಸಂಭವ ಇದೆ. ಇದು ಬೊಲಿವಿಯದ ಕೇಂದ್ರ ಸರ್ಕಾರಕ್ಕೆ ಸವಾಲಾಗಿದ್ದು ಹೊಸ ಸಂವಿಧಾನದ ಉಲ್ಲಂಘನೆಯಾಗಿದೆ. ಸ್ವಾಯತ್ತತೆಯನ್ನು ಮನ್ನಿಸುವುದಿಲ್ಲ ಎಂದು ಅಧ್ಯಕ್ಷರು ಘೋಷಿಸಿದ್ದಾರೆ. ಬೊಲಿವಿಯಾದ ಶ್ರೀಮಂತರೂ ಘರ್ಷಣೆಗೆ ರೆಡಿಯಾಗಿದ್ದು, ಆಂತರಿಕ ಯುದ್ಧದ ಸನ್ನಿವೇಶ ಸೃಷ್ಟಿಸಲು ಅಮೆರಿಕ ಪ್ರಯತ್ನ ನಡೆಸಿದೆ.

ನೋಟ



ಡಾ. ಜಿ. ಭಾಸ್ಕರ ಮಯ್ಯ

# ಭಾರತದ ವೈಜ್ಞಾನಿಕ ಸಂಶೋಧನೆಗಳ ಗುಣಮಟ್ಟ

ಪ್ರಾಚೀನ ಭಾರತದಲ್ಲಿ ತಕ್ಷಶಿಲಾ, ನಾಲಂದಾ, ಕಾಂಚೀಪುರಂ ಇತ್ಯಾದಿ ಪ್ರಖ್ಯಾತ ವಿಶ್ವವಿದ್ಯಾಲಯಗಳಿದ್ದುವು. ಆಯುರ್ವೇದ, ಖಗೋಳಶಾಸ್ತ್ರ, ವಾಸ್ತುಶಾಸ್ತ್ರ, ಜವಳಿ ಕೈಗಾರಿಕೆ, ಬೆಳೆತಳಿಗಳು, ನಾನಾ ಬಗೆಯ (Civil Engineering) ಕೃಷಿಸಾಧನಗಳು, ಮೊದಲಾದ ಹಲವಾರು ಕ್ಷೇತ್ರಗಳಲ್ಲಿ ಅದ್ಭುತ ವೈಜ್ಞಾನಿಕ ಸಂಶೋಧನೆಗಳಾಗಿದ್ದುವು. ಒಂದು ಕಾಲದಲ್ಲಿ ಹಡಗು ನಿರ್ಮಾಣ ಕಲೆಯಲ್ಲಿ ಭಾರತವು ಮೊದಲ ಸ್ಥಾನದಲ್ಲಿತ್ತು. ಆದರೆ, ಕ್ರಮಕ್ರಮವಾಗಿ ಪಾಳೇಗಾರಿ, ವಸಾಹತುಶಾಹಿ ಕಾಲಘಟ್ಟದಲ್ಲಿ ಬುದ್ಧಿಗೆ ಗರ ಬಡಿಯುತ್ತಾ ಬಂತು. ಅದು ಸ್ವಾಭಾವಿಕವಾದದ್ದೇ. ಆದರೆ ಸ್ವಾತಂತ್ರ್ಯ ಸಿಕ್ಕ ಮೇಲೆ ಈ ದೇಶಕ್ಕೆ ಏನೆಲ್ಲ [illegible]ಗ ಬಡಿದಿದೆ? ಇಂದು ನಮ್ಮ ವಿಶ್ವವಿದ್ಯಾಲಯಗಳು ಹೇಗಿವೆ? ನಮ್ಮ ಸಂಶೋಧನೆಯ ಗುಣಮಟ್ಟ ಹೇಗಿದೆ? 1961 ರಲ್ಲಿ 45 ವಿಶ್ವವಿದ್ಯಾಲಗಳಿದ್ದವು. 1996 ರಲ್ಲಿ ಅವುಗಳ ಸಂಖ್ಯೆ 226 ಕ್ಕೆ ಏರಿತ್ತು. ಇಂದು 400ಕ್ಕಿಂತಲೂ ಹೆಚ್ಚು ವಿಶ್ವವಿದ್ಯಾಲಯಗಳಿವೆ. ಆದರೆ ಗುಣಮಟ್ಟ ಮಾತ್ರ ಪತನದ ಹಾದಿಯಲ್ಲಿದೆ. ನಮ್ಮ ವಿಶ್ವವಿದ್ಯಾಲಯಗಳು ಡಿಗ್ರಿಗಳನ್ನು ಹಂಚುವ ಯಂತ್ರಗಳಾಗಿವೆ ಯೆಂದರೆ ಅದು ನಿಜಕ್ಕೂ ಅತಿಶಯೋಕ್ತಿಯಲ್ಲ.

ಪ್ರೊ. ಬಲರಾವ್ ಇಂದಿನ ವಿಶ್ವವಿದ್ಯಾಲಯಗಳ ಬಗೆಗೆ ಹೀಗೆನ್ನುತ್ತಾರೆ-

"ನನ್ನ ಅಭಿಪ್ರಾಯದಲ್ಲಿ ಇಂದಿನ ವಿಶ್ವವಿದ್ಯಾಲಯಗಳ ವಿಜ್ಞಾನ ವಿಭಾಗಗಳು ಸಂಪೂರ್ಣವಾಗಿ ಜಡವಾಗಿವೆ. ಪಠ್ಯ ಕ್ರಮಗಳ ಚರ್ಚೆ, ವಿದ್ಯಾರ್ಥಿಗಳ ಪ್ರಶಿಕ್ಷಣದ ಆಧುನೀಕರಣವೆಲ್ಲ ಮಾಯವಾಗಿ ಅವುಗಳ ಸ್ಥಾನವನ್ನು ರಾಜಕೀಯವು ಆವರಿಸಿದೆ. ಜ್ಞಾನಕ್ಕೇನೆ ಸಮರ್ಪಿಸಿಕೊಂಡ ಅಧ್ಯಾಪಕರನ್ನು ಇಂದು ಕಡೆಗಣಿಸಲಾಗುತ್ತಿದೆ. ಇನ್ನೊಂದೆಡೆ, ವಿಶ್ವವಿದ್ಯಾಲಯದ ಆಡಳಿತವ್ಯವಸ್ಥೆಯ ಆಯಕಟ್ಟಿನಲ್ಲಿರುವವರು ತಮ್ಮನ್ನು ತಾವೇ ಘನ ವಿದ್ವಾಂಸರೆಂಬಂತೆ, ದೊಡ್ಡ ಎಕಡೆಮೀಶೀಯನ್ ತರಹ ಘೋಸು ಕೊಟ್ಟು ಕೊಳ್ಳುತ್ತಾರೆ. ಇದರಿಂದ ಅಧ್ಯಾಪನ ಸೊನ್ನೆ, ಸಂಶೋಧನೆ ಹೆಸರಿಗೆ ಮಾತ್ರ ಎಂಬಂತಾಗಿದೆ".

ಡಾ|| ರಾಮ ಮನೋಹರ ಲೋಹಿಯಾರವರು ಭಾರತದ ಮೊದಲ ಲೋಕಸಭೆಯಲ್ಲಿ ವಿರೋಧ ಪಕ್ಷದ ಮುಖಂಡರಾಗಿದ್ದ ಕಾಲದಲ್ಲಿ ಸರಕಾರವನ್ನು ಪದೇ ಪದೇ ಒತ್ತಾಯಿಸುತ್ತಿದ್ದ ಒಂದು ಅತೀ ಮುಖ್ಯವಾದ ವಿಚಾರವೆಂದರೆ ಅದು ಸೌರಶಕ್ತಿಯ ಸಂಶೋಧನೆಗೆ ಹೆಚ್ಚು ಹಣ ಮೀಸಲಿಡಬೇಕೆಂಬುದು. ಖ್ಯಾತ ವಿಜ್ಞಾನಿ ಡಿ.ಡಿ. ಕೊಸಾಂಬಿಯವರು ಕೂಡಾ ಇದನ್ನೇ ಹೇಳುತ್ತಿದ್ದರು. ಆದರೆ ಸ್ವಾತಂತ್ರ್ಯ ಸಿಕ್ಕಿ 60 ವರ್ಷಗಳು ಕಳೆದರೂ ಯೋಜನಾ ಆಯೋಗ ಈ ಪ್ರಶ್ನೆಯನ್ನು ಕನಸು ಮನಸಿನಲ್ಲೂ ಚಿಂತಿಸುತ್ತಿಲ್ಲ. ಏಕೆಂದರೆ, ಭಾರತದ ಆಳುವ ವರ್ಗಕ್ಕೆ ಭಾರತದ ಭವಿಷ್ಯವನ್ನು ರೂಪಿಸುವ ಯಾವ ಗುರಿಯೂ ಇಲ್ಲ.

ವಿಚಿತ್ರವೆಂದರೆ, ಭಾರತದ ಹಾಗೆಯೇ ಸ್ವಾತಂತ್ರ್ಯ ಪಡೆದ ಎಷ್ಟೋ ಅಭಿವೃದ್ಧಿಶೀಲ ದೇಶಗಳು ಭಾರತಕ್ಕಿಂತ ಮುಂದಿವೆ. ಚೆನ್ನೈನ 'ಸ್ವಾಮಿನಾಥನ್ ರೀಸರ್ಚ್ ಫೌಂಡೇಶನ್'ನ ಸುಬ್ಬಯ್ಯಾ ಅರುಣಾಚಲಮ್ ಅವರ ಪ್ರಕಾರ: ಜಾಗತಿಕ ಮಟ್ಟದಲ್ಲಿ 1993 ರಿಂದ 2000 ರ ಅವಧಿಯಲ್ಲಿ ಪ್ರಕಟವಾದ ಸಂಶೋಧನಾ ಲೇಖನಗಳ ಸೂಚ್ಯಂಕವು ಭಾರತದ ಪಾಲು 2.05 ರಿಂದ 2.08 ರಷ್ಟಕ್ಕೆ ಹೆಚ್ಚಾಗಿದ್ದರೆ, ಬ್ರೇಜಿಲ್ 0.64 ರಿಂದ 1.35 ರಷ್ಟು ಹೆಚ್ಚಾಗಿದೆ. ದಕ್ಷಿಣ ಕೊರಿಯಾ 0.43 ಯಿಂದ 2.07 ರಷ್ಟು ಹೆಚ್ಚಾದರೆ ಚೀನಾದ ಸೂಚ್ಯಾಂಕ 1.27 ರಿಂದ 4.48 ಕ್ಕೆ ಹೆಚ್ಚಿದೆ. ತುಲನಾತ್ಮಕವಾಗಿ ನೋಡಿದಲ್ಲಿ ಭಾರತದ ಹೀನಾಯ ಪರಿಸ್ಥಿತಿಯನ್ನು ಗಮನಿಸಬಹುದು.

ಚೀನಾದ 'ಶಾಂಘಾಯ್ ಜಿ ಆವೊ ತೋಂಗ್' ವಿಶ್ವ ವಿದ್ಯಾಲಯವು ಜಗತ್ತಿನೆಲ್ಲಾ ವಿಶ್ವವಿದ್ಯಾಲಯಗಳನ್ನು ಗುಣಮಟ್ಟದ ಆಧಾರದಲ್ಲಿ ಶ್ರೇಣೀಬದ್ಧಗೊಳಿಸುವ ಮಹತ್ವದ ಕೆಲಸವನ್ನು ಮಾಡಿತು. ಅದಕ್ಕೆ ಮುಖ್ಯವಾಗಿ ನೊಬೆಲ್ ಅಥವಾ ನೊಬೆಲ್ ಸ್ತರದ ಪುರಸ್ಕಾರ ಪಡೆದ ವ್ಯಕ್ತಿಗಳ ಸಂಖ್ಯೆ, ಯಾವ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಲೇಖನಗಳನ್ನು ವಿಶ್ವಸ್ತರದಲ್ಲಿ ಎಷ್ಟು ಹೆಚ್ಚು ಉದ್ಧರಿಸುತ್ತಾರೆ ಎಂಬ ವಿಚಾರ, ನೇಚರ್, ಸಾಯನ್ಸ್ ಮುಂತಾದ ವಿಖ್ಯಾತ ವಿಜ್ಞಾನ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳ ಸಂಖ್ಯೆ, Social Science Citation Index (ವಿಶ್ವದಲ್ಲಿ ಉಚ್ಚಮಟ್ಟದ ಸಂಶೋಧನಾ ಲೇಖನಗಳ ದಾಖಲಾತಿ ಸೂಚ್ಯಾಂಕ) ನಲ್ಲಿ ಸೇರ್ಪಡೆ ಮತ್ತು ವಿವಿಧ ವಿಭಾಗಗಳ ಸರಾಸರಿ ಅಕೆಡೆಮಿಕ್ ಕಾರ್ಯ - ಇವೇ ಮೊದಲಾದ ಮಾನದಂಡಗಳನ್ನು ಚೀನಾ ವಿಶ್ವವಿದ್ಯಾಲಯ ಜಗತ್ತಿನಾದ್ಯಂತದ 2000 ಉನ್ನತ ವಿಶ್ವವಿದ್ಯಾಲಯಗಳನ್ನು ತನ್ನ ಅಧ್ಯಯನಕ್ಕೆ ಆರಿಸಿಕೊಂಡಿತ್ತು. ಇದರ ಪರಿಣಾಮ ಮಾತ್ರ ನಾವು ಹೆಮ್ಮೆಪಟ್ಟುಕೊಳ್ಳುವ ಭಾರತದ ಮಟ್ಟಿಗಂತೂ ಬೆಚ್ಚಿ ಬೀಳಿಸುವಂತಾದ್ದು.


ಮೊದಲ ಹತ್ತು ವಿಶ್ವವಿದ್ಯಾಲಯಗಳಲ್ಲಿ ಅಮೇರಿಕಾ, ಜಪಾನ್, ಕೆನಡಾ ಹಾಗೂ ಇಸ್ರೇಲ್ ಸ್ಥಾನ ಪಡೆಯುತ್ತವೆ. ಮೊದಲ ನಾಲ್ಕು ಸ್ಥಾನಗಳಲ್ಲಿ ಅಮೇರಿಕಾದ ಹಾರ್ವರ್ಡ್ ವಿಶ್ವವಿದ್ಯಾಲಯ, ಸ್ಟೇನ್‌ಫೋರ್ಡ್, ಕೆಲಿಫೋರ್ನಿಯಾ, ಟೆಕ್ನಾಲಜಿ ಇನ್ಸಿಟ್ಯೂಟ್ - ವಿಶ್ವವಿದ್ಯಾಲಯಗಳು ಬರುತ್ತವೆ. ಮೊದಲ 50 ವಿಶ್ವವಿದ್ಯಾಲಯಗಳಲ್ಲಿ 35 ಅಮೇರಿಕಾದವುಗಳೇ. ಭಾರತದ ಮೂರು ವಿಶ್ವವಿದ್ಯಾಲಯಗಳು 500ರ ಒಳಗೆ ಬರುತ್ತವೆ. ಅವುಗಳಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥಾನದ ಹೆಸರು 250 ರಿಂದ 500ರ ಒಳಗೆ ಬರುತ್ತದೆ. ಇನ್ನು ಐ.ಐ.ಟಿ, ದಿಲ್ಲಿ ಮತ್ತು ಖರಗ್‌ಪುರ - ಇವೆರಡು 451 ರಿಂದ 500 ರ ಒಳಗೆ ಸ್ಥಾನ ಪಡೆದಿದೆ. ಒಂದೇ ಒಂದು ಭಾರತೀಯ ವಿಶ್ವವಿದ್ಯಾಲಯ ಶ್ರೇಷ್ಠ ಶ್ರೇಣಿ (ರ್‍ಯಾಂಕಿಂಗ್) ಯಲ್ಲಿ ಬರುವುದಿಲ್ಲ.

ಭಾರತಕ್ಕೆ ಹೋಲಿಸಿದರೆ ಚೀನ ಉತ್ತಮ ಸ್ಥಿತಿಯಲ್ಲಿದೆ. ಚೀನದ 14 ವಿಶ್ವವಿದ್ಯಾಲಯಗಳು 500ರ ಒಳಗೆ ಸ್ಥಾನ ಪಡೆಯುತ್ತವೆ. ಅದರಲ್ಲೂ ಬೀಜಿಂಗ್‌ನ 'ಸಿಂಗ್ ಹುವಾ' ವಿಶ್ವವಿದ್ಯಾಲಯ 201 ರಿಂದ 250 ರ ಶ್ರೇಣಿಯಲ್ಲಿದ್ದು ಭಾರತಕ್ಕಿಂತ ಉನ್ನತ ಸ್ಥಾನದಲ್ಲಿದೆ. ಮೂರನೆಯ ಜಗತ್ತಿನ ದೇಶವಾದ ಬ್ರೆಜಿಲಿನ 'ಸಾವೊ ಪಾವುಲೊ' ವಿಶ್ವವಿದ್ಯಾಲಯ 150 ರಿಂದ 200 ರ ಒಳಗೆ ಬರುತ್ತದೆ.

ಇದು ವಿಶ್ವವಿದ್ಯಾಲಯಗಳ ಕತೆಯಾದರೆ, ನಮ್ಮ ಪುರಾತತ್ವ ಇಲಾಖೆ (ASI) ಗೆ ವಿಶ್ವದಲ್ಲಿ ಇಂದು ಚಿಕ್ಕಾಸಿನ ಗೌರವವಿಲ್ಲ. ಎನ್.ಡಿ.ಎ. ಸರಕಾರದ ಕಾಲದಲ್ಲಂತೂ ಅದು ನೇರವಾಗಿ ಸರಕಾರದ ಪರವಾಗಿ ಉತ್ಖನನ, ಸಂಶೋಧನೆ ನಡೆಸಿದೆ. ಈಗಲೂ ಅದರಲ್ಲಿರುವ ಬಹಳಷ್ಟು ವ್ಯಕ್ತಿಗಳು ಕೋಮುಜಾಂಡಿಸ್ ಪೀಡಿತರು. ಇನ್ನೊಂದೆಡೆ WTO ಒಪ್ಪಂದಗಳನ್ನು ಚಾಚೂ ತಪ್ಪದೆ ಪಾಲಿಸುವ ಭಾರತೀಯ ಆಳುವ ವರ್ಗವು ಉನ್ನತ ಶಿಕ್ಷಣವನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಇತಿಹಾಸವನ್ನು ವಿಕೃತಗೊಳಿಸಿದೆ. ಜಗತ್ತು ಇಂದು ದಾಪುಗಾಲಿಡುತ್ತಾ ಮುಂದುವರಿಯುತ್ತಿದ್ದರೆ ಇಲ್ಲಿಯ ಕೆಲವು ವಿಶ್ವವಿದ್ಯಾಲಯಗಳು ಜ್ಯೋತಿಷ್ಯ, ವೇದಗಣಿತ ಇತ್ಯಾದಿ ಮಧ್ಯಯುಗದ ಗೊಡ್ಡು ಸರಕುಗಳನ್ನು ಅಧ್ಯಯನ ಮಾಡುತ್ತಿವೆ. ಪಿ.ಎಚ್.ಡಿ ಮಹಾ ಪ್ರಬಂಧಗಳಂತೂ ಶೇ 95ರಷ್ಟು ನಕಲು ಮತ್ತು ಜೊಳ್ಳು.

ಇದು ಜಗತ್ತಿಗೆ ನಾಗರಿಕತೆಯ ಪಾಠ ಹೇಳಿದ (ಎಂಬುದಾಗಿ ಯಾವಾಗಲೂ ಪಂಡಿತರಿಂದ ಪ್ರಶಂಸಿಸಲ್ಪಡುವ) ಭಾರತದ ದುಸ್ಥಿತಿ.

# ಹೀಗೊಂದು ವಿವೇಕಯುತ ತೀರ್ಪು




ರಾಜ್ಯದ ಜನ ಎಲ್ಲಾ ಈ ಕಡೆ ಚುನಾವಣೆ ಬಗೆಗೆ ತಲೆ ಬಿಸಿ ಮಾಡ್ಕೊಂಡಿರೋವಾಗ ಆ ಕಡೆ ದೆಹಲಿ ಹೈಕೋರ್ಟ್ ಕಡೆಯಿಂದ ಒಂದು ಶುಭ ಸಮಾಚಾರ ಬಂದಿದೆ.

ಏನಪ್ಪಾ ಅಂದ್ರೆ ನಮ್ಮ ಎಂ.ಎಫ್. ಹುಸೇನ್ ಅಂಬೋ ಕಲಾವಿದ ಹಿಂದೂ ದೇವತೆಗಳನ್ನೇ ಹುಡುಕಿ, ಹುಡುಕಿ, ಅಶ್ಲೀಲವಾಗಿ, ಅವರ ಚಿತ್ರ ಬರೆದು ಬರೆದು ಹಾಕಿದ್ದಾನೆ ಅಂತ ಒಂದು 'ಅಶ್ಲೀಲ' ಪ್ರಚಾರವನ್ನೇ ನಮ್ಮ ಪ್ರತಾಪಸಿಂಹ ಆದಿಯಾಗಿ ಹಲವಾರು ಅಂಕಣಕಾರರು, ಸಂಘ ಪರಿವಾರದ ಪ್ರಚಾರ ವೀರರು ಅರಚುತ್ತಾ ಇದ್ರು. ಬರೀ ಅರಚೋದೇನು ಕೆಲವು ವೀರರಂತೂ ಒಂದಲ್ಲ ಹಲವಾರು ಬಾರಿ ಹುಸೇನ್ ಅವರ ಚಿತ್ರ ಪ್ರದರ್ಶನದ ಗ್ಯಾಲರಿಗಳ ಮೇಲೆ ದಾಳಿ ಕೂಡ ಮಾಡಿ ಕೆಲವು ಚಿತ್ರಗಳನ್ನು ಸುಟ್ಟು ಹಾಕಿದ್ರು.

ಇನ್ನು ಕೆಲವು ಪುಣ್ಯಾತ್ಮರು ಇಂಟರ್‌ನೆಂಟ್‌ನಲ್ಲಿ ಹುಸೇನ್ ಅವರ ಚಿತ್ರಗಳನ್ನು 'ಆಯ್ಕೆ' ಮಾಡಿ ಅವರು ಹಿಂದೂ ದೇವತೆಗಳನ್ನು ಮಾತ್ರವೇ ನಗ್ನವಾಗಿ ಚಿತ್ರಿಸಿದ್ದಾರೆ ಅಂತ ಸಾಧಿಸೋದಕ್ಕೇ ಸಾಕಷ್ಟು ಪರಿಶ್ರಮ ಹಾಕಿ ಚಿತ್ರಗಳನ್ನು ಹರಡುತ್ತಾ ಇದ್ರು.

ದೆಹಲಿ ಹೈಕೋರ್ಟ್‌ನ ತೀರ್ಪು ಇಂತಹ ಎಲ್ಲರಿಗೆ ಸ್ವಲ್ಪ ಕಿವಿ ಹಿಂಡೋ ಥರ ಬಂದಿದೆ. ಈ ಕೋರ್ಟ್‌ಲ್ಲಿ ಇದೇ ವಿಚಾರವಾಗಿ 'ಹಿಂದೂ ದೇವತೆಗಳನ್ನು ಅಶ್ಲೀಲವಾಗಿ ಚಿತ್ರಿಸುವ ಮೂಲಕ ಒಂದು ಕೋಮಿನ ಭಾವನೆಗಳನ್ನು ಕೆರಳಿಸಿದ್ದಾರೆ' ಅಂತ ಕೆಲವರು ಮೊಕದ್ದಮೆ ಹೂಡಿದ್ದರು.



ಕೋರ್ಟ್ ಇಂತಹ ವಿಚಾರಣೆ ನಡೆಸಿ ಇಂತಹ ಆರೋಪಗಳನ್ನೆಲ್ಲಾ ಸಾರಾಸಗಟಾಗಿ ತಳ್ಳಿ ಹಾಕಿ ಪ್ರಕರಣವನ್ನು ವಜಾ ಮಾಡಿದೆ. ಈ ಆರೋಪದಲ್ಲಿ ಯಾವುದೇ ಹುರುಳಿಲ್ಲ ಅಂತಾನೂ ಹೇಳಿದೆ.

ಸಮಸ್ಯೆ ಇರೋದು ಹುಸೇನರ ಚಿತ್ರಗಳಲ್ಲಲ್ಲ, ಅದನ್ನು ನೋಡುವ ಇವರ ದೃಷ್ಟಿಯಲ್ಲಿ. ಅಸಲಿಗೆ ಶೀಲ ಮತ್ತು ಅಶ್ಲೀಲತೆಯ ನಡುವಿನ ಗೆರೆ ಬಹಳ ತೆಳ್ಳಗಿರುವಂಥದ್ದು. ಆ ಬಗ್ಗೆ ತೀರ್ಮಾನಿಸುವಾಗ ಮೂಲಭೂತವಾದಿಯಾಗಿ ಕರ್ಮಠ ಸಂಪ್ರದಾಯ ವಾದಿಗಳಂತೆ ನೋಡದೇ ತಾಳ್ಮೆಯಿಂದ ವಿವೇಚಿಸಿ ತೀರ್ಮಾನಿಸುವ ವಿವೇಕ ಬೇಕಾಗುತ್ತೆ.

ಈ ತಾಳ್ಮೆ ಮತ್ತು ವಿವೇಕ ಇಲ್ಲದಿರೋದು ಇಲ್ಲಿ ಒಂದು ಸಮಸ್ಯೆ. ಅದರ ಜೊತೆಗೆ ಅನ್ಯ ಮತ ದ್ವೇಷಿಯಾದ ಕೋಮುವಾದ ತಲೆಯೊಳಗೆ ಹೊಕ್ಕರೆ ಮುಗಿಯಿತು. ಆಗ ಎಂ.ಎಫ್. ಹುಸೇನ್ ಒಬ್ಬ ಕಲಾವಿದನಾಗಿ ಕಾಣದೆ ಒಬ್ಬ ಮುಸ್ಲೀಮನಾಗಿ ಕಾಣುತ್ತಾನೆ. ಅಂತಹ ಚಿತ್ರಗಳನ್ನು ಬರೆದವರೆಷ್ಟೋ ಇದ್ದರೂ ಅವರೆಲ್ಲ ನಗಣ್ಯರಾಗುತ್ತಾರೆ.

ತೀರ್ಪು ಕೊಟ್ಟ ನ್ಯಾಯಾಧೀಶರು ಅಕಸ್ಮಾತ್ ಅಲ್ಪ ಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿದ್ದರೆ ಅವರನ್ನು ದಾಳಿಗೆ ಗುರಿಮಾಡುತ್ತಿದ್ದರೇನೋ? ಆದರೆ ಹಾಗೇನೂ ಇಲ್ಲದೇ ದಾಳಿಯ ಒಂದು ಅವಕಾಶ ತಪ್ಪಿ ಹೋಗಿದೆ ಸಂಘ ಪರಿವಾರದವರಿಗೆ.

# ರಾಜ್ಯ ರಾಜಕೀಯದ ದೊಂಬರಾಟಕ್ಕೆ ಕಾರಣ ಯಾರು?

# ಗಣಿ ಮಾಫಿಯಾ - ಭೂ ಮಾಫಿಯಾ

## ಗಣಿ ಮಾಫಿಯಾ

- ಕಬ್ಬಿಣದ ಅದಿರಿನ ನಿರಂತರ ಲೂಟಿ - ರಾಜ್ಯದ ಬೊಕ್ಕಸಕ್ಕೆ ಭಾರಿ ದೋಕಾ
- ಗಣಿ ಮೇಲಿನ ನಿಯಂತ್ರಣಕ್ಕಾಗಿ ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳ ತಿಕ್ಕಾಟ, ರಾಜಕೀಯ ಕಂಪನ, ಸರ್ಕಾರಗಳ ಬದಲಾವಣೆ
- ರಾಜಕಾರಣದ ಅಪರಾಧೀಕರಣ, ವ್ಯಾಪಾರೀಕರಣ
- ಗಣಿ ಹಣದಿಂದ ಕೊಬ್ಬಿದ ಜನಾರ್ಧನ ರೆಡ್ಡಿ ಬಳಗದಿಂದ ಬಿಜೆಪಿ ಪರವಾಗಿ 100 ಶಾಸಕರನ್ನು ಗೆಲ್ಲಿಸಿಕೊಡುವ ಅಹಂಕಾರದ ಘೋಷಣೆ

ನೆಲ ತೋಡುವವರು








## ಭೂ ಮಾಫಿಯಾ

- ಸಿಪಿಐ(ಎಂ) ಶಾಸಕರಿಂದಾಗಿ ಹಗರಣ ಬಯಲಿಗೆ
- ಸಿಕ್ಕಿಬಿದ್ದ ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಮಂತ್ರಿ, ಶಾಸಕರು, ಮುಖಂಡರು, ಸ್ವಾಮಿಗಳು, ಸನ್ಯಾಸಿ, ಸಾಫ್ಟ್‌ವೇರ್ ಮಾಲೀಕರು
- ಪ್ರಥಮ ಹಂತದ ತನಿಖೆಯಲ್ಲಿ 41,303 ಎಕರೆ ಭೂಮಿ ಕಬಳಿಕೆ ಪತ್ತೆ
- ಸರ್ಕಾರದ ವಶಕ್ಕೆ ಬಂದ ಭೂಮಿ ಬಡವರಿಗೆ ಹಂಚಲು ಜೆಡಿ(ಎಸ್)-ಬಿಜೆಪಿ ಸರ್ಕಾರದ
- ನಿರಾಕರಣೆ - ಶ್ರೀಮಂತರಿಕೆ ಅಗ್ಗದ ಬೆಲೆಗೆ ಹರಾಜು

ನೆಲ ನುಂಗುವವರು





JANASHAKTHI KANNADA . VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH